ಅಸ್ತಿತ್ವವಾದ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಮೂಲ : ಮೀರಾ ಚಕ್ರವರ್ತಿ
ಅನು : ಬಿ. ವೈ. ಲಲಿತಾಂಬ

ಅಸ್ತಿತ್ವವಾದ: ಪ್ರಬಂಧ ಸಂಕಲನ

ಮೂಲ : ಮೀರಾ ಚಕ್ರವರ್ತಿ
ಅನುವಾದ : ಬಿ. ವೈ. ಲಲಿತಾಂಬ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ASTHITWAVADA : PRABANDHA SANKALANA : Original by Meera Chakravarthi and Translated by B. Y. Lalithamba ; Published by Bangalore University, Bangalore, Pp. 60+viii

ಪ್ರಕಾಶಕರು :
ಹೆಚ್. ಆರ್. ದಾಸೇಗೌಡ
ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560 056

ಸಹಾಯಕರು :
ಬಿ. ಕೆ. ಕರೀಗೌಡ

ಬೆಲೆ : ರೂ. 4-00

ಮುದ್ರಣ :
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಮೊದಲ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈಗಾಗಲೇ ಪಠ್ಯಪುಸ್ತಕಗಳನ್ನು ಸಿದ್ಧಪಡಿಸಿ ಪ್ರಕಟಿಸಿದೆ. ಇದರ ಜೊತೆಗೆ ವಿಶ್ವವಿದ್ಯಾಲಯವು ಸಾರ್ವಜನಿಕರಿಗಾಗಿ ವರ್ಷಾದ್ಯಂತ ಏರ್ಪಡಿಸುವ ಪ್ರಚಾರೋಪನ್ಯಾಸಗಳನ್ನು ವಿಶೇಷೋಪನ್ಯಾಸಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುತ್ತಿದೆ. ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳು ಕೈಗೊಳ್ಳುವ ವೈಯಕ್ತಿಕ ಹಾಗೂ ಸಾಮೂಹಿಕ ಸಂಶೋಧನಾತ್ಮಕ ವ್ಯವಸಾಯಕ್ಕೆ ಗ್ರಂಥ ರೂಪದ ಅಭಿವ್ಯಕ್ತಿಯನ್ನ ಕೊಡುವ ಕಾರ್ಯವೂ ನಡೆದಿದೆ. ಇದರಿಂದಾಗಿ ವಿವಿಧ ವಿಭಾಗಗಳ ಅಧ್ಯಾಪಕರ ಸಂಶೋಧನಾತ್ಮಕ ಪ್ರವೃತ್ತಿಗೆ ಸಾಕಷ್ಟು ಪ್ರೇರಣೆ ದೊರೆತಿದೆ. ಇದಲ್ಲದೆ ವಿಶ್ವವಿದ್ಯಾಲಯೇತರ ಕ್ಷೇತ್ರಗಳಲ್ಲಿರುವ ವಿವಿಧ ಪರಿಣತರ ಸಂಶೋಧನೆ, ಸಂಪಾದನೆ, ಪರಿಷ್ಕರಣ, ಜಾನಪದ ಅನುವಾದ ಇತ್ಯಾದಿ ನಾನಾ ಬಗೆಯ ಗ್ರಂಥಗಳನ್ನು ಪ್ರಸಾರಾಂಗ ಪ್ರಕಟಿಸುತ್ತಿದೆ. ಶ್ರೀಮತಿ ಬಿ. ವೈ. ಲಲಿತಾಂಬ ಅವರ 'ಅಸ್ತಿತ್ವವಾದ' ಎಂಬ ಈ ಅನುವಾದ ಕೃತಿಯು ಈ ದಿಕ್ಕಿನ ಒಂದು ಮುಖ್ಯ ಪ್ರಕಟಣೆಯಾಗಿದೆ.

ಶ್ರೀಮತಿ ಮೀರಾ ಚಕ್ರವರ್ತಿ ಅವರ ಇಂಗ್ಲಿಷ್‌ನಲ್ಲಿ ಬರೆದ 'ಎಗ್ಸಿಸ್ಟೆನ್ಷಿಯಾಲಿಸಂ' ಕೃತಿಯನ್ನು ಶ್ರೀಮತಿ ಶ್ರೀ ಬಿ. ವೈ. ಲಲಿತಾಂಬ ಅವರು ಕನ್ನಡಕ್ಕೆ 'ಅಸ್ತಿತ್ವವಾದ' ಎಂಬ ಕೃತಿಯಾಗಿ ಸಮರ್ಥ ರೀತಿಯಲ್ಲಿ ಅನುವಾದಿಸಿಕೊಟ್ಟಿದ್ದಾರೆ. ಅನುವಾದವು ಸುಲಭವಾದ ಕೆಲಸವಲ್ಲ; ಅದು ಸೃಜನಾತ್ಮಕ ಕ್ರಿಯೆಯಷ್ಟೇ ಉತ್ತಮವಾದದ್ದು ಅನ್ನುವುದನ್ನು ಶ್ರೀಮತಿ ಲಲಿತಾಂಬ ಅವರ ಈ ಕೃತಿಯಿಂದ ತಿಳಿದು ಬರುತ್ತದೆ. ಈ ಪುಸ್ತಕ ಕನ್ನಡ ಓದುಗರ ದೃಷ್ಟಿಯಿಂದ ಒಂದು ಉಪಯುಕ್ತ

ವಾದ ಕೃತಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಕೃತಿಯನ್ನು ವಿಶೇಷ ರೀತಿಯಲ್ಲಿ ಆಸ್ಥೆವಹಿಸಿ, ಅನುವಾದಿಸಿ ನಮ್ಮ ಪ್ರಕಟಣೆಗೆ ಅನುವು ಮಾಡಿ ಕೊಟ್ಟ ಆ ಲೇಖಿಕಿಯವರಿಗೂ ಇದನ್ನು ಸುಂದರವಾಗಿ ಮುದ್ರಿಸಲು ಆಸಕ್ತಿ ವಹಿಸಿರುವ ನಮ್ಮ ವಿಶ್ವವಿದ್ಯಾಲಯದ ಮುದ್ರಣಾಲಯದ ಸಿಬ್ಬಂದಿವರ್ಗಕ್ಕೂ ನನ್ನ ಅಭಿನಂದನೆಗಳು.

ತ. ರಾ. ಜಯರಾಮನ್
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ನಾಲ್ಕು ಮಾತು

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸುವ ಸದುದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗವು ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಪ್ರಕಟಿಸುವುದರ ಜೊತೆಗೆ ಇತರ ವಿಷಯದಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನ ವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಾಮಾಜಿಕ ಹಾಗೂ ಮಾನವಿಕಶಾಸ್ತ್ರ ಮುಂತಾದ ವಿಷಯಗಳ ಮೇಲೆ ಸ್ವತಂತ್ರವಾಗಿಯೋ, ಭಾಷಾಂತರದ ಮೂಲಕವೋ ಅಥವಾ ಸಂಕಲನದ ಮೂಲಕವೋ ಸರಳ ಹಾಗೂ ಖಚಿತವಾದ ಹೊಸಗನ್ನಡ ಶೈಲಿಯ ಮೂಲಕ ಪ್ರಸಾರಾಂಗವು ಈಗಾಗಲೇ ಅನೇಕ ಹೊತ್ತಿಗೆಗಳನ್ನು ಪ್ರಕಟಿಸಿದೆ. ಮುಂದೆಯೂ ಇಂಥ ಹಲವಾರು ವಿಷಯಗಳಮೇಲೆ ಮಹತ್ತರವಾದ ಹೊತ್ತಿಗೆಗಳನ್ನು ಪ್ರಕಟಿಸಬೇಕೆಂಬ ಮಹೋದ್ದೇಶವನ್ನು ಪ್ರಸಾರಾಂಗ ಹೊಂದಿದೆ.

ಶ್ರೀಮತಿ ಮೀರಾ ಚಕ್ರವರ್ತಿಯವರ 'ಎಗ್ಸಿಸ್ಟೆನ್ಷಿಯಾಲಿಸಂ' ಎಂಬ ಇಂಗ್ಲೀಷ್ ಕೃತಿಯನ್ನು ಕನ್ನಡಕ್ಕೆ "ಅಸ್ತಿತ್ವವಾದ" ಎಂದು ಅನುವಾದಿಸಿಕೊಟ್ಟ ಮಹಾರಾಣಿಯವರ ಮಹಿಳಾ ವಿದ್ಯಾಲಯದಲ್ಲಿ ಹಿಂದಿ ಅಧ್ಯಾಪಕಿಯರಾಗಿರುವ ಶ್ರೀಮತಿ ಬಿ. ವೈ. ಲಲಿತಾಂಬ ಅವರು ವಿಶ್ವವಿದ್ಯಾಲಯಕ್ಕೆ ತುಂಬಾ ಸಹಾಯಕ ರಾಗಿದ್ದಾರೆ. ಅಸ್ತಿತ್ವವಾದದ ಬಗೆಗೆ ಕನ್ನಡದಲ್ಲಿ ಮಹತ್ವಪೂರ್ಣ ಕೃತಿಗಳು ಇಲ್ಲದ ಸಂದರ್ಭದಲ್ಲಿ ಇದು ಒಂದು ವಿಶಿಷ್ಟ ಕೃತಿಯಾಗಿದೆ. 20ನೇ ಶತಮಾನದ ಅತ್ಯಂತ ಪ್ರಭಾವಶಾಲಿ ತತ್ವವಾದ ಅಸ್ತಿತ್ವವಾದದ ಬಗೆಗೆ ಈ ಕೃತಿಯಲ್ಲಿ ಕ್ರಮಬದ್ಧವಾಗಿ ನಿರೂಪಣೆಯಾಗಿರುವ ವಿಷಯ, ವಿಶ್ಲೇಷಣೆ ಮತ್ತು ತಾತ್ತ್ವಿಕ ಸಮಸ್ಯೆಗಳ ಚರ್ಚೆ

ಅಚ್ಚುಕಟ್ಟಾಗಿ ಪ್ರಕಟಗೊಂಡಿದೆ. ಈ ಪುಸ್ತಕವು ಕನ್ನಡ ಓದುಗರಿಗೆ ಮತ್ತು ವಿದ್ಯಾರ್ಥಿಗಳಿಗೆ ತೀರಾ ಅಗತ್ಯವೂ ಉಪಯುಕ್ತವೂ ಆಗಬಲ್ಲದು. ಇಂತಹ ಕೃತಿಯನ್ನು ನಮ್ಮ ವಿಶ್ವವಿದ್ಯಾಲಯದಿಂದ ಪ್ರಕಟಿಸಲು ಅನುವು ಮಾಡಿಕೊಟ್ಟ ಶ್ರೀಮತಿ ಬಿ. ವೈ. ಲಲಿತಾಂಬ ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ನಾನು ತುಂಬಾ ಆಭಾರಿ. ಹಾಗೆಯೇ ಈ ಕೃತಿಯನ್ನು ಅಂದವಾಗಿ ಮುದ್ರಿಸಲು ಆಸ್ಥೆ ವಹಿಸಿರುವ ನಮ್ಮ ಮುದ್ರಣಾಲಯದ ಸಿಬ್ಬಂದಿವರ್ಗಕ್ಕೂ ನನ್ನ ಅಭಿನಂದನೆಗಳು. ಹೀಗೆಯೇ ಕನ್ನಡಿಗರ ಸೌಹಾರ್ದ ಸಹಕಾರಗಳಿಂದ ವಿಶ್ವವಿದ್ಯಾಲಯದ ಪ್ರಸಾರಾಂಗದ ಗ್ರಂಥ ಮಾಲೆಯು ಬೆಳೆಯಲೆಂದು ಆಶಿಸುತ್ತೇನೆ.

ಹೆಚ್. ಆರ್. ದಾಸೇಗೌಡ
ನಿರ್ದೇಶಕ, ಪ್ರಸಾರಾಂಗ

ಅನುವಾದಕರ ಮಾತು

ಪಾಶ್ಚಾತ್ಯ ಸಾಹಿತ್ಯದಲ್ಲಿ 'ಅಸ್ತಿತ್ವವಾದ' ತನ್ನದೇ ಆದಂತಹ ಸ್ಥಾನ ಪಡೆದುಕೊಂಡಿದೆ. ಫ್ರಾನ್ಸ್ ದೇಶದ ಸುಪ್ರಸಿದ್ಧ ಲೇಖಕ ಜ್ಯಾಂ-ಪಾಲ್ ಸಾರ್ತ್ರ್ ಅಸ್ತಿತ್ವವಾದದ ಬಹುಮುಖ್ಯ ವಿಚಾರಕನಾಗಿದ್ದಾನೆ.

ಈ ಕಿರು ಹೊತ್ತಿಗೆಯಲ್ಲಿ ಅಸ್ತಿತ್ವವಾದದ ಸಾಮಾನ್ಯ ಪರಿಚಯ ಮಾಡಿಕೊಡಲು ಪ್ರಯತ್ನ ಮಾಡಲಾಗಿದೆ. ರಚನಾತ್ಮಕ ಬರವಣಿಗೆಯಲ್ಲಿ ಈಚೆಗೆ ಅನೇಕರು ಅಸ್ತಿತ್ವವಾದಿ ತತ್ವಗಳಿಂದ ಪ್ರಭಾವಿತರಾಗಿದ್ದಾರೆ, ಅವನ್ನು ತಮ್ಮದಾಗಿಸಿಕೊಂಡಿದ್ದಾರೆ. ಆದುದರಿಂದ ಈ ಪುಸ್ತಕದಿಂದ ಓದುಗರಿಗೆ ಸ್ವಲ್ಪವಾದರೂ ಲಾಭವಾದೀತೆಂದು ನಾನು ಆಶಿಸುತ್ತೇನೆ. ಈ ಕೃತಿಯ ಮೂಲ ಲೇಖಕಿ ಶ್ರೀಮತಿ ಮೀರಾ ಚಕ್ರವರ್ತಿ. ಅವರು ಇಂಗ್ಲಿಷಿನಲ್ಲಿ ಬರೆದ 'ಎಗ್ಸಿಸ್ಟೆನ್ಷಿಯಾಲಿಸಂ' ಎಂಬ ಪುಸ್ತಕದ ಕನ್ನಡ ಅನುವಾದ ಇದಾಗಿದೆ.

ಈ ಪುಸ್ತಕ ಹೊರತರಲು ಅತೀವ ಪ್ರೋತ್ಸಾಹ ನೀಡಿದ ಡಾ|| ಜಿ. ಎಸ್. ಶಿವರುದ್ರಪ್ಪನವರು; ಸಲಹೆಗಳನ್ನು ನೀಡಿ ಸಹಾಯ ಮಾಡಿದ ಮಿತ್ರ ಡಿ. ಆರ್. ನಾಗರಾಜ್‌ರವರು ಇಬ್ಬರಿಗೂ ನನ್ನ ಕೃತಜ್ಞತೆಗಳು. ಮತ್ತು ಇದನ್ನು ಪ್ರಕಟಪಡಿಸಿದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ನನ್ನ ವಂದನೆಗಳು.

ಬಿ. ವೈ. ಲಲಿತಾಂಬ

ಪರಿವಿಡಿ

ಅಸ್ತಿತ್ವವಾದ ಮತ್ತು ಸಾರ್ತ್ರ್

ಇಂದಿನ ಪಾಶ್ಚಾತ್ಯ ತತ್ವಶಾಸ್ತ್ರಗಳಲ್ಲಿ ಅಸ್ತಿತ್ವವಾದವು ಅತ್ಯಂತ ಜನಪ್ರಿಯ ವಾದದ್ದು. ಜೊತೆಗೆ ಅದರ ಬಗ್ಗೆ ಇರುವ ತಪ್ಪು ತಿಳುವಳಿಕೆಯೂ ಕೂಡ ಅಪಾರ. ಪ್ರಮುಖ ಅಸ್ತಿತ್ವವಾದಿ ತತ್ವಚಿಂತಕ ಜ್ಯಾಂ–ಪಾಲ ಸಾರ್ತ್ರ್ ಪ್ಯಾರಿಸ್ಸಿನಲ್ಲಿ ಒಮ್ಮೆ ಮಾತನಾಡುತ್ತ "ಅಸ್ತಿತ್ವವಾದ ಎಂಬ ಶಬ್ದವನ್ನು ಉಪಯೋಗಿಸುವ ಅನೇಕರು ಅದನ್ನು ವಿವರಿಸಬೇಕಾಗಿ ಬಂದಾಗ ಮುಜುಗರ ಪಡುತ್ತಾರೆ;"[1] ಎಂದ. ಸಾರ್ತ್ರ್ ತನ್ನ ಕಾದಂಬರಿಗಳು ಹಾಗೂ ನಾಟಕಗಳ ಮೂಲಕ ಜನಪ್ರಿಯಗೊಳಿಸಿದ ಅಸ್ತಿತ್ವವಾದವು ಇಂದಿನ ಯುರೋಪಿನ ಮನೋಭಾವವನ್ನು ಪ್ರತಿನಿಧಿಸುತ್ತದೆ. ಅದು ಕಾಂಟ್ ಮತ್ತು ಹೆಗೆಲ್ ಇವರುಗಳ ತತ್ವಶಾಸ್ತ್ರಗಳ ಅಂತರ್ಲಾಗಗಳು ಮತ್ತು ಎರಡನೆಯ ಜಾಗತಿಕ ಮಹಾಯುದ್ಧದ ದಿನಗಳಲ್ಲಿ ಯುರೋಪಿನಲ್ಲಿಯ ವ್ಯಾಪಕ ಭ್ರಮನಿರಸನದ ಪರಿಣಾಮವಾಗುತ್ತದೆ. 1930 ರ ಆರ್ಥಿಕ ಹಿಂಜರಿತ, ಎರಡನೇ ಜಾಗತಿಕ ಯುದ್ಧದ ಸ್ಫೋಟ ಮುಂತಾದ ವಿದ್ಯಮಾನಗಳು ಅಸ್ತಿತ್ವವಾದದ ಬರವಿಗೆ ಯುರೋಪಿನ ಮನೋಭೂಮಿಕೆಯನ್ನು ಸಿದ್ಧಗೊಳಿಸಿದವು. ಅಸ್ತಿತ್ವವಾದವು ಯುರೋಪಿನಲ್ಲಿ ಒಂದು ಮೂರ್ತ ರೂಪವನ್ನು ಪಡೆಯಲು ಫ್ರಾನ್ಸಿನ ಪರಾಭವವೇ ಮುಖ್ಯ ಕಾರಣವಿರಬಹುದು.

ಹೆಗೆಲ್‌ನ ಅಧ್ಯಾತ್ಮಮೂಲ ತತ್ವಶಾಸ್ತ್ರದ ಬಗ್ಗೆ, ಮತ್ತು ಕಾಂಟನ ವಿಚಾರ ವಾದದ ಬಗ್ಗೆ ತಾತ್ವಿಕ ನೆಲೆಯಲ್ಲಿ ಉಂಟಾದ ಭ್ರಮನಿರಸನ ಫ್ರಾನ್ಸಿನ ಪರಾಭವ ದಷ್ಟೇ ತೀವ್ರವೂ ಕಹಿಯೂ ಆಗಿತ್ತು. 'ಅಸ್ತಿತ್ವ' ಹಾಗೂ 'ಅಲೋಚನೆ'ಗಳನ್ನು ಸಮೀಕರಿಸಿದ ಹೆಗೆಲ್‌ನ ತತ್ವಶಾಸ್ತ್ರ ಭ್ರಮನಿರಸನವನ್ನುಂಟು ಮಾಡಿದ್ದಷ್ಟೇ ಅಲ್ಲದೆ ಬಂಡಾಯಕ್ಕೂ ಪ್ರಚೋದನೆ ನೀಡಿತು. ಹೆಗೆಲ್ ಸೇರಿಸಿ ಹೇಳಿದ 'ಅಸ್ತಿತ್ವ' ಹಾಗೂ 'ಅಲೋಚನೆ'ಗಳನ್ನು ಪ್ರತ್ಯೇಕಿಸುವುದೇ ಡೇನಿಶ್ ಅಸ್ತಿತ್ವವಾದಿ ಸೋರೆನ್ ಕೀರ್ಕೆ

ಗಾರ್ಡನಿಗೆ ಪ್ರಯಾಸಕರವಾಯಿತು. ಕೀರ್ಕೆಗಾರ್ಡನಿಗೆ ಅಸ್ತಿತ್ವ ಎಂದರೆ 'ಆಲೋಚನೆ' ಯಿಂದ ಪ್ರತ್ಯೇಕಗೊಂಡ 'ಇರುವಿಕೆ'.[2] ಮಾನವ 'ವ್ಯವಸ್ಥೆಯ' ಅಂಗಭಾಗ ಮಾತ್ರ ಎಂಬಂಥ ಹೆಗೆಲ್‌ನ ಕಲ್ಪನೆಯನ್ನು ಸಾರ್ತ್ರ್ ಕಟುವಾಗಿ ವಿರೋಧಿಸುತ್ತಾನೆ. ಮಾನವನನ್ನು ಆತ 'ಸ್ವತಂತ್ರ' ಎಂದು ಘೋಷಿಸುತ್ತಾನೆ. ಹೆಗೆಲ್ 'ವ್ಯವಸ್ಥೆ' ಯನ್ನು ಆರಾಧಿಸಿದರೆ, ಅಸ್ತಿತ್ವವಾದಿಗಳು ತರ್ಕಬದ್ಧ ಆಧ್ಯಾತ್ಮಿಕ ವ್ಯವಸ್ಥೆಯನ್ನೇ ನಿರಾಕರಿಸುತ್ತಾರೆ.

ಕಾಂಟನ ಇಂದ್ರಿಯಾತೀತ 'ತನ್ನಲ್ಲಿ – ತಾನಿರುವ – ವಸ್ತು'ವಿನ ತತ್ವಶಾಸ್ತ್ರದ ಬಗ್ಗೆಯೂ ಭ್ರಮನಿರಸನವಾಗಿತ್ತು. ಬರ್ಕಲಿ ಹೇಳುವ ಇಂದ್ರಿಯ ಜ್ಞಾನವನ್ನೂ, ಹಾಗೂ ಹ್ಯೂಮ್ ಹೇಳುವ ಗ್ರಹಿಕೆಯನ್ನೂ ಇದು ಸಾಧ್ಯವಾಗಿಸಿದರೂ ಇದನ್ನು ಅರ್ಥಮಾಡಿಕೊಳ್ಳಲೂ ಆಗುವುದಿಲ್ಲ, ಪ್ರಮಾಣ ಪೂರ್ವಕವಾಗಿ ತೋರಿಸಲೂ ಸಾಧ್ಯವಾಗುವುದಿಲ್ಲ. ಆದುದರಿಂದ ಕಾಂಟ್ ಹಾಗೂ ಅವನಂತಹ ವಿಚಾರವಾದಿಗಳ ಇಂದ್ರಿಯಾತೀತ ಅಸ್ತಿತ್ವವುಳ್ಳ ವಸ್ತುಮೂಲ ತತ್ವಶಾಸ್ತ್ರದ ವಿರುದ್ಧ ಬಂಡಾಯ ವಾಗಿರುವ ಫಿನಾಮಿನಾಲಜಿ, ಅಸ್ತಿತ್ವವಾದದ ಆಧಾರ.

ಈ ರೀತಿ ಅಸ್ತಿತ್ವವಾದವು ಕೇವಲ ಅಧ್ಯಾತ್ಮ ಮೂಲ ತತ್ವಶಾಸ್ತ್ರವಾಗಿರದೇ ಅದು ಮನುಷ್ಯ ಪ್ರಜ್ಞೆಯ ಮನೋವಿಶ್ಲೇಷಣೆಯೂ, ರಚನಾ ಮೂಲ ವಿಶ್ಲೇಷಣೆಯೂ ಆಗಿದೆ. ಅದು ತಾರ್ಕಿಕ ಲೋಕಸಿದ್ಧಾಂತವಾದಕ್ಕೆ ತೀರ ವ್ಯತಿ ರಿಕ್ತವಾದ ಮಾನವನ ತೀವ್ರಾನುರಕ್ತಿಗಳ ಒಂದು ಸಿದ್ಧಾಂತ. ಸೋರೆನ್ ಕೀರ್ಕೆ ಗಾರ್ಡನ ಮನೋವಿಜ್ಞಾನ, ನೀತ್ಸೆಯ ತತ್ವಶಾಸ್ತ್ರ ಹಾಗೂ ಹಸ್ರೆಲ್‌ನ ಮೂಲತತ್ವ ಶಾಸ್ತ್ರ – ಇವುಗಳು ಅಸ್ತಿತ್ವವಾದದ ನೆಲೆಗಟ್ಟಾಗಿವೆ. ಅಸ್ತಿತ್ವವಾದ ಎಂದರೆ "ನಿರೀಶ್ವರವಾದದ ಸುಸಂಗತ ನೆಲೆಯಿಂದ ಎಲ್ಲ ಪರಿಣಾಮಗಳನ್ನು ಪಡೆಯುವ ಯತ್ನ" ಎಂದು ಸಾರ್ತ್ರ್ ನಿರ್ವಚಿಸುತ್ತಾನೆ. ಇದೊಂದು ಮಾನವನನ್ನು ಕೇಂದ್ರ ಬಿಂದುವನ್ನಾಗಿ ಇಟ್ಟುಕೊಂಡ ನವ ಮಾನವತಾವಾದ.

ಮಾನವ ಮತ್ತು ಆತನ ಪರಿಸರವನ್ನು ತಿಳಿಯುವ ಪ್ರಯತ್ನವೇ ತತ್ವಚಿಂತನೆ ಎನಿಸಿಕೊಳ್ಳುತ್ತದೆ. ಸಾಕ್ರೆಟೀಸ್‌ನ 'ನಿನ್ನನ್ನು ತಿಳಿ', ದೆಕಾರ್ತೆಯ 'ಪ್ರಜ್ಞೆ', – ತನ್ನತನದ ನೇರ ಜ್ಞಾನ, ಉಪನಿಷತ್ತಿನ ಆತ್ಮಾನಂ ವಿದ್ಧಿ – ಇಲ್ಲಿಂದ ಅಸ್ತಿತ್ವವಾದದ ಆರಂಭ.

ಭೌತವಾದವು ಮನುಷ್ಯ ಪ್ರಯತ್ನಕ್ಕೆ ಯಾವುದೇ ಅವಕಾಶವನ್ನು ಉಳಿಯ ಗೊಟ್ಟಿರಲಿಲ್ಲ. ಅದು 'ಗುಂಪಿ'ನಲ್ಲಿ ಅವನನ್ನು ಮುಳುಗಿಸಿತ್ತು. ನಿಯತಿವಾದ ಅಧಿಪತ್ಯ ನಡೆಸಿತ್ತು. ಮನುಷ್ಯ ಹುಟ್ಟು ಹೇಡಿ, ಹುಟ್ಟು ಶೂರ ಅಥವಾ ಹುಟ್ಟು ಜಿಪುಣನಾಗಿರುತ್ತಾನೆ ಎಂದು ಭಾವಿಸಲಾಗುತ್ತಿತ್ತು. ಆದರೆ ಈತ ಹುಟ್ಟುವ

ಮೊದಲು ಇವನು ಹೀಗಿರಬೇಕೆಂದು ಕಲ್ಪಿಸಿಕೊಂಡವರು ಯಾರು? ಸಾರ್ತ್ರ್ ಈ ಅಂಶವನ್ನು ವಿಶ್ಲೇಷಿಸುತ್ತ ಕಾಗದ ಕತ್ತರಿಸುವ ಚಾಕುವಿನ ಉದಾಹರಣೆಯನ್ನು ಕೊಡುತ್ತಾನೆ. ಅದನ್ನು ತಯಾರಿಸುವ ಮುನ್ನವೇ ಅದರ ಮೂಲತತ್ವ ಮತ್ತು ಉಪಯೋಗಗಳ ಕಲ್ಪನೆಯಾಗಿರುತ್ತದೆ. ಆದರೆ ನೀತ್ಸೆಯ 'ದೇವರು ಸತ್ತ' ಜಗತ್ತಿನಲ್ಲಿ ಮನುಷ್ಯನನ್ನು ಆತ ಹುಟ್ಟುವ ಮೊದಲೇ ಕಲ್ಪಿಸಲು ಯಾರೂ ಇಲ್ಲ. ಆದುದರಿಂದ ಮನುಷ್ಯ ಮೊದಲು ಇರುತ್ತಾನೆ, ನಂತರ ಆಗುತ್ತಾನೆ. ಅಸ್ತಿತ್ವ ಸತ್ವಕ್ಕಿಂತ ಮೊದಲು. ಅಸ್ತಿತ್ವವಾದಕ್ಕೆ ಅತಿ ಮುಖ್ಯವೆನಿಸಿದ ಈ ಮೂಲ ತತ್ವದ ನೆಲೆಗಟ್ಟನ್ನು ಒದಗಿಸಿಕೊಟ್ಟವನು ಜರ್ಮನ್ ಅಸ್ತಿತ್ವವಾದಿ ಹೀಡೆಗ್ಗರ್. ಮಾನವನನ್ನು ಅವನ ಅಸ್ತಿತ್ವಕ್ಕಿಂತ ಮೊದಲು ನಿರ್ವಚಿಸಲು ಸಾಧ್ಯವಿಲ್ಲ, ವಸ್ತುಗಳ ಬಗ್ಗೆ ಮಾತ್ರ ಹಾಗೆ ಮಾಡಲು ಸಾಧ್ಯ. ಮಾನವ ತನ್ನ ಕ್ರಿಯೆಗಳ ಮೂಲಕ ತನ್ನ ಪರಿಭಾಷೆಯನ್ನು ತಾನೇ ಕಲ್ಪಿಸಿಕೊಳ್ಳುತ್ತಾನೆ.

ಸಾರ್ತ್ರ್‌ನು 'ಸನ್ನಿವೇಶ' ಎಂದು ಬಣ್ಣಿಸುವ ಚೌಕಟ್ಟಿನಲ್ಲಿ ಮನುಷ್ಯ ಆಯ್ಕೆಗಳನ್ನು ಮಾಡುತ್ತಾ ಕ್ಷಣದಿಂದ ಕ್ಷಣಕ್ಕೆ ಬದುಕಬೇಕಾಗಿದೆ. ಮೊದಲು ಅವನು 'ಇದ್ದು' ತರುವಾಯ 'ಆಗು'ವುದರಿಂದ ತನ್ನ ಕ್ರಿಯೆಗಳನ್ನು ಆಯ್ದುಕೊಳ್ಳಲು ಅವನು ಸ್ವತಂತ್ರ. ವೈವಿಧ್ಯಮಯ ಸಾಧ್ಯತೆಗಳು ಆತನಿಗೆ ಎದುರಾಗುತ್ತವೆ. ಒಂದು ನಿರ್ಧಾರಕ್ಕೆ ಬರಲು ನೆರವಾಗುವಂತಹ 'ಮಾನವ ಸ್ವಭಾವ' ಎಂಬುದು ಅವನ ಹಿನ್ನೆಲೆಯಲ್ಲಿಲ್ಲ. ಸಾರ್ತ್ರ್ ಇದಕ್ಕೊಂದು ಉದಾಹರಣೆ ಕೊಡುತ್ತಾನೆ. ಒಬ್ಬ ವ್ಯಕ್ತಿಯ ಮನೆಯಲ್ಲಿ ದೇಶಪ್ರೇಮಿ ಯೋಧರು ಅಡಗಿರುತ್ತಾರೆ. ಅವರನ್ನು ಹುಡುಕಿಕೊಂಡು ಬಂದ ಶತ್ರು ಸೈನಿಕರು ಅವನ ಮಗಳ ಮೇಲೆ ಅತ್ಯಾಚಾರಕ್ಕೆ ಮುಂದಾಗುತ್ತಾರೆ. ಈ ಸನ್ನಿವೇಶದಲ್ಲಿ ಒಂದಲ್ಲ ಒಂದು ದಿನ ದೇಶ ಪ್ರೇಮಿ ಯೋಧರನ್ನು ವಂಚಿಸುವುದೇ ಅಥವಾ ಮಗಳ ಮೇಲೆ ಅತ್ಯಾಚಾರಕ್ಕೆ ಅವಕಾಶ ನೀಡುವುದೇ ಎಂಬ ನಿರ್ಧಾರಕ್ಕೆ ಆ ವ್ಯಕ್ತಿ ಬರಲೇಬೇಕಾಗುತ್ತದೆ. ಆದರೆ ಮಗಳನ್ನು ಶತ್ರು ಸೈನಿಕರಿಗೆ ಒಪ್ಪಿಸಲು ದೇಶ ಪ್ರೇಮವಾಗಲೀ, ದೇಶಪ್ರೇಮಿ ಸೈನಿಕರನ್ನು ವಂಚಿಸಲು ಕುಟುಂಬ ಪ್ರೇಮವಾಗಲೀ ಪ್ರೇರಕವಲ್ಲ. ಆತ ಮಗಳನ್ನು ಒಪ್ಪಿಸುವುದರ ಮೂಲಕ ದೇಶಪ್ರೇಮಿಯಾಗುತ್ತಾನೆ, ಅಥವಾ ದೇಶಪ್ರೇಮಿ ಸೈನಿಕರನ್ನು ಶತ್ರುಗಳಿಗೆ ಒಪ್ಪಿಸುವುದರ ಮೂಲಕ ಕುಟುಂಬ ಪ್ರೇಮಿಯಾಗುತ್ತಾನೆ. ಮನುಷ್ಯ ಸ್ವತಂತ್ರ ಎಂದು ಸಾರ್ತ್ರ್ ಹೇಳುವುದು ಇದೇ ಕಾರಣಕ್ಕಾಗಿ. ಅಸ್ತಿತ್ವಕ್ಕಿಂತ ಸತ್ವ ಮೊದಲಾದರೆ ಅವನ ಕ್ರಿಯೆ ಪೂರ್ವನಿಶ್ಚಿತವಾಗಿ ಬಿಡುತ್ತದೆ. ಆ ಕಾರಣಕ್ಕಾಗಿ ಅವನು ಸ್ವತಂತ್ರನಲ್ಲ. ಆದರೆ ಅಸ್ತಿತ್ವ ಸತ್ವಕ್ಕಿಂತ ಮೊದಲಾದುದರಿಂದ ಅವನ ಇರುವಿಕೆಯೇ ಅವನ ಆಗುವಿಕೆಯನ್ನು ನಿರ್ಧರಿಸುತ್ತದೆ. ಆದಕಾರಣ ಅವನು ಸ್ವತಂತ್ರ. ಈ ಸ್ವಾತಂತ್ರ್ಯದಿಂದ ಆತನಿಗೆ ಬಿಡುಗಡೆ ಇಲ್ಲ. ಆಯ್ಕೆ ಅನಿವಾರ್ಯ.

ತಾನೊಂದು ಆಯ್ಕೆ ಮಾಡುತ್ತಿಲ್ಲವಾದರೂ ಆತ 'ಆಯ್ಕೆ ಮಾಡದಿರುವ' ಆಯ್ಕೆಯನ್ನು ಮಾಡುತ್ತಿರುತ್ತಾನೆ. ಮನುಷ್ಯ 'ಅಸಹಾಯ ಮುಕ್ತ ಸ್ಥಿತಿಗೆ ದೂಡಲ್ಪಟ್ಟಿದ್ದಾನೆ'[3], ಎಂದು ಸಾರ್ತ್ರ್ ಹೇಳುತ್ತಾನೆ. ಅಸಹಾಯ ಏಕೆಂದರೆ ಅವನು ತನ್ನ ಹುಟ್ಟಿಗೆ ಕಾರಣನಲ್ಲ. 'ಸ್ವತಂತ್ರ' ಏಕೆಂದರೆ ದೇವರಿಲ್ಲದ ಈ ಜಗತ್ತಿನಲ್ಲಿ ಆತ ಅನಾಥ, ಏಕಾಕಿ. ಹೀಗಾಗಿ ಮನುಷ್ಯನ ಅಪಾರ ಸಾಧ್ಯತೆಗಳಿಗಿರುವ ಒಂದೇ ಒಂದು ಪರಿಮಿತಿ ಎಂದರೆ ಸಾವು. ಕ್ಷಣದಿಂದ ಕ್ಷಣಕ್ಕೆ ಆಯ್ಕೆಗಳ ಮೂಲಕವೇ ಆತ ಬದುಕುವುದರಿಂದ ಅತನ ಸ್ವರೂಪ ಎಂದಿಗೂ ಅನಿಶ್ಚಿತ. ಆಯ್ಕೆಯ ಸ್ವಾತಂತ್ರ್ಯ ಅವನಿಗಿರುವುದರಿಂದ ಆತ ತಾನು ಮಾಡುವುದಕ್ಕಷ್ಟೇ ಅಲ್ಲ, ತನಗೂ ಅಥವಾ ತಾನು ಏನಾಗಿದ್ದೇನೆಂಬುದಕ್ಕೂ ಅಥವಾ ತಾನು ಏನಾಗುತ್ತೇನೆಂಬುದಕ್ಕೂ ಹೊಣೆಗಾರ. ಆತ ಯಾವಾಗಲೂ 'ಆಗುತ್ತಿರುತ್ತಾನೆ'. ಕಾರಣ ಮನುಷ್ಯನನ್ನು 'ಕಂಡುಕೊಳ್ಳುವುದು' ಮನುಷ್ಯನೇ. ಒಳಿತು ಕೆಡಕುಗಳನ್ನು 'ಕಂಡುಕೊಳ್ಳುವುದೂ' ಆತನೇ. ಆತ ನರಕಕ್ಕೆ ದೂಡಲ್ಪಟ್ಟನೆಂದರೆ ಆ ನರಕವೂ ಆತನ ಕೃತಿಯೇ. 'ಸ್ವಾತಂತ್ರ್ಯ' ಮತ್ತು 'ಹೊಣೆಗಾರಿಕೆ'ಯ ಈ ತತ್ವಚಿಂತನೆಯಲ್ಲಿಯೇ ಅಸ್ತಿತ್ವವಾದಿ ನೈತಿಕತೆಯ ಅಂಕುರಗಳನ್ನು ಕಾಣಬಹುದು. ಪಾಪ ಎಂಬುದಿಲ್ಲ. ಸಾರ್ತ್ರ್‌ನಿಗೆ ಅದು ಒಂದು 'ಕೆಟ್ಟ ನಂಬುಗೆ' ಮಾತ್ರ. ಈ ಸ್ವಾತಂತ್ರ್ಯ 'ಸಂಕಟ'ದಿಂದ ತುಂಬಿದೆ. ಮಗನನ್ನು ಬಲಿ ಕೊಡಲು ಕನಸಿನಲ್ಲಿ ಕಾಣಿಸಿಕೊಂಡ ದೇವತೆ ಕರೆ ನೀಡಿದ ಸಂದರ್ಭದಲ್ಲಿ ಅಬ್ರಹಾಮನಿಗೆ ಇದ್ದ ಸ್ವಾತಂತ್ರ್ಯ ತನ್ನೊಟ್ಟಿಗೆ ಸಂಕಟವನ್ನೂ ಕರೆತಂದಿತು. ಕನಸಿನ ದೇವತೆ ಸತ್ಯ ಅಥವಾ ಮಿಥ್ಯ ಎಂದು ಆತ ಜಾರಿಕೊಳ್ಳುವುದು ಹೇಗೆ? ಈ ಸಂದರ್ಭ ಕೊಂಚಮಟ್ಟಿಗೆ ದಾಯಾದಿಗಳನ್ನೇ ಸಾಯಿಸಬೇಕಾಗಿ ಬಂದ ಅರ್ಜುನನ ವಿಷಾದ ಯೋಗವನ್ನು ಹೋಲುತ್ತದೆ. ಕೃಷ್ಣನನ್ನು ದೇವರೆಂದು ಬಗೆದುದು ಅರ್ಜುನನ ಸ್ವಂತ ಅಯ್ಕೆಯಲ್ಲವೇ? ಮನುಷ್ಯ ಏಕಾಕಿಯಾಗುವುದು ಈ ರೀತಿಯಲ್ಲಿಯೇ.

ಮನುಷ್ಯ 'ಸನ್ನಿವೇಶ'ಗಳಲ್ಲಿ ಇರುತ್ತಾನೆ ಮತ್ತು 'ತಾನು ಸ್ವತಂತ್ರ'ನೆಂದು ಅರಿಯುತ್ತಾನೆ. ಅಯ್ಕೆಗಳ ಮೂಲಕ ತನ್ನನ್ನು ಆಯ್ದುಕೊಳ್ಳುವಾಗ 'ಆದರ್ಶ ಮಾನವನ' ಕಲ್ಪನೆಯನ್ನು ಆತ ಮಾಡುತ್ತಾನೆ. ಆ ಮೂಲಕ ಇತರರನ್ನೂ 'ಆಯ್ಕೆ ಮಾಡುವ' ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಾನೆ. ಹೀಗಾಗಿ ಅತ ತನಗಾಗಿ ಮಾತ್ರವಲ್ಲದೇ ಇತರರಿಗೂ ಹೊಣೆಗಾರನಾಗಿರುತ್ತಾನೆ. ಜಾಗತಿಕ ಮಟ್ಟದಲ್ಲಿ ಈ ಹೊಣೆಗಾರಿಕೆ ಹೊಸ ಮಾನವತಾವಾದ ಆಗುತ್ತದೆ. ಮನುಷ್ಯ ತಾನು ಕಾಣುತ್ತಾನಷ್ಟೇ ಅಲ್ಲ, ಅನುಭವಿಸುತ್ತಾನೆ ಕೂಡಾ. ಅತ 'ಜಗತ್ತಿನಲ್ಲಿ' ಇದ್ದಾನೆಯೇ ಹೊರತು 'ಜಗತ್ತಿನ–ನಡುವೆ' ಅಲ್ಲ. "ಜಗತ್ತಿನೊಂದಿಗೆ ಸಹ–ಅಸ್ತಿತ್ವ ಪಡೆದಿರುವ ಶರೀರ ಎಲ್ಲ ವಸ್ತುಗಳನ್ನೂ ವ್ಯಾಪಿಸಿರುತ್ತದೆ, ಹಾಗೂ ಅದೇ ಕಾಲಕ್ಕೆ ಈ ಒಂದು ಬಿಂದುವಿನಲ್ಲಿ ಘನೀಭೂತವಾಗಿರುತ್ತದೆ."[4] ಸಾರ್ತ್ರ್‌ನ 'ನಾಸಿಯ'ಎಂಬ ಕಾದಂಬರಿಯ ನಾಯಕ

ರಾಕ್ವೆಂಟಿನ್ ಕೇವಲ ಕಾಣುತ್ತಾನಷ್ಟೇ ಅಲ್ಲ, ಅನುಭವಿಸುತ್ತಾನೆ ಕೂಡಾ. ಆತ 'ಜಗತ್ತಿನಲ್ಲಿ' ಇದ್ದಾನೆ, 'ಜಗತ್ತಿನ–ನಡುವೆ'ಅಲ್ಲ. ಆಯ್ಕೆಯ ಸ್ವಾತಂತ್ರ್ಯ ಮತ್ತು 'ಸನ್ನಿವೇಶ'ದ ಮೂಲಕ ಮನವರಿಕೆಯಾದ ಹೊಣೆಗಾರಿಕೆ ಮನುಷ್ಯನಿಗೆ ಪ್ರಾಮಾಣಿಕ ಅಸ್ತಿತ್ವವನ್ನು ದೊರಕಿಸಿಕೊಡುತ್ತದೆ. ಇವೇ ಸಾಹಿತ್ಯದ ಬಗೆಗಿನ ಅಸ್ತಿತ್ವವಾದದ ನಿಲುವಿನ ಮೂಲಭೂತ ಅಂಶಗಳು. ಈ ನಿಲುವನ್ನೆಲ್ಲ ಆಧರಿಸಿ ಸಾರ್ತ್ರ್ ಹಿಂದಿನ ಶತಮಾನದ ಕಾದಂಬರಿಕಾರರು ಜಗತ್ತಿನ ಇಣುಕು ನೋಟವನ್ನೇ ಪ್ರಸ್ತುತಪಡಿಸಿರುವ ರೆಂದು ಆಪಾದಿಸಿದ್ದಾನೆ. 'ಬಿಡುಗಡೆಯ ದಾರಿಗಳು' ಎಂಬ ಕಾದಂಬರಿ ಸರಣಿಯ ಮ್ಯಾಥ್ಯೂವಿನಂತಹ ಪಾತ್ರಗಳು ಷೇಕ್ಸಪಿಯರನ ಶೈಲಾಕನಂತಹ ಪಾತ್ರಗಳಿಗಿಂತ ಮೂಲಭೂತವಾಗಿ ಭಿನ್ನವಾಗಿವೆ. ಮ್ಯಾಥ್ಯೂನ 'ಇರುವಿಕೆ' ಪ್ರಾಮಾಣಿಕವಾದುದಲ್ಲ. ಆದರೂ ಅವನಲ್ಲಿ ಸಾಧ್ಯತೆಗಳು ಅಂತರ್ಗತವಾಗಿವೆ. 'ಅಸ್ತಿತ್ವ ಹಾಗೂ ಶೂನ್ಯತೆ' ಎಂಬ ತಾತ್ವಿಕ ಚಿಂತನೆ ಕುರಿತಾದ ತನ್ನ ಪ್ರಮುಖ ಗ್ರಂಥದಲ್ಲಿ ಸಾರ್ತ್ರ್ ಅಸ್ತಿತ್ವವಾದದ ರೂಪವಿನ್ಯಾಸಗಳನ್ನು ವಿವರಿಸಿ ಹೇಳಿದ್ದಾನೆ. ಸಾರ್ತ್ರ್ ಮೊದಲಿಗೆ ತನ್ನನ್ನು ಹಸ್ರೆಲ್ ಪಂಥಕ್ಕೆ ಸೇರಿದ 'ಫಿನಾಮಿನಾಲಜಿಸ್ಟ' ಎಂದೇ ಭಾವಿಸಿದ್ದ. ಆದುದರಿಂದಲೇ 'ಅಸ್ತಿತ್ವ ಹಾಗೂ ಶೂನ್ಯತೆ'ಗೆ 'ಫಿನಾಮಿನಾಲಜಿಯ ಮೂಲ ತತ್ವಗಳಿಗೆ ಸಂಬಂಧಿಸಿದ ಒಂದು ಪ್ರಬಂಧ' ಎಂಬ ಉಪನಾಮ ಕೊಡಲಾಗಿದೆ.

ಸಾರ್ತ್ರ್, ಪ್ರಜ್ಞೆಯ ವಿಶ್ಲೇಷಣೆ ಹಾಗೂ ಇಂದ್ರಿಯ ಗೋಚರ ವಿಷಯಗಳಿಂದ ತನ್ನ ಪ್ರತಿಪಾದನೆಯನ್ನು ಆರಂಭಿಸುತ್ತಾನೆ. ಪ್ರಜ್ಞೆ 'ಯಾವುದಾದರೊಂದರ' ಪ್ರಜ್ಞೆಯೇ ಆಗಿರುತ್ತದೆ. ಹಾಗೂ ಆ ಸ್ಥಿತಿಯಲ್ಲಿಯೇ ಅದು ಸ್ವ-ಪ್ರಜ್ಞವಾಗಿರುತ್ತದೆ. ಈ ರೀತಿಯ ಪ್ರಜ್ಞೆಯ ವಸ್ತು ದೃಷ್ಟಿಗೋಚರ ಸ್ವಭಾವ ಮಾತ್ರ ಉಳ್ಳದ್ದು. ಅದು ತೋರಿಕೆಯಿಂದಾಚೆ ಅಥವಾ ತೋರಿಕೆಯ ಹಿಂದೆ ಇರುವ ಕಾಂಟನ 'ತನ್ನಲ್ಲಿ-ತಾನಿರುವ' ವಸ್ತುವಲ್ಲ. ಇದನ್ನು ಸಾರ್ತ್ರ್ 'ಆಂಸ್ವಾ'–'ತನ್ನಲ್ಲೇ ಇರುವ ತಾನು' ಎನ್ನುತ್ತಾನೆ. ಪ್ರಜ್ಞೆಯುಳ್ಳ ವಿಷಯ ಅಥವಾ ವಿಷಯಗತ ಪ್ರಜ್ಞೆ ಸ್ವ-ಪ್ರಜ್ಞಾಯುಕ್ತವಾದದ್ದು. ಇದನ್ನು ಸಾರ್ತ್ರ್ 'ಪುರಸ್ವಾ'–'ತನಗಾಗಿ ಇರುವ ತಾನು' ಎನ್ನುತ್ತಾನೆ. ಈ ಪ್ರಜ್ಞೆಯ ವಸ್ತು ಹಾಗೂ ಪ್ರಜ್ಞೆಯುಳ್ಳ ವಿಷಯಗಳು ಪರಸ್ಪರ ಭಿನ್ನವಾದವುಗಳು. ಈ ವಿಶ್ಲೇಷಣೆಯ ಮೂಲಕ ಸಾರ್ತ್ರ್ 'ಜ್ಞಾನ'ವನ್ನು ನಿರ್ವಚಿಸುತ್ತಾನೆ. ಪ್ರಜ್ಞೆಯ ವಸ್ತು ಹಾಗೂ ಪ್ರಜ್ಞೆಯುಳ್ಳ ವಿಷಯಗಳ ನಡುವಣ ಅಂತರ ದಾಟಲು ಅಸಾಧ್ಯವಾದುದು. ಈ ಅಂತರವನ್ನು ಸಾರ್ತ್ರ್ 'ಶೂನ್ಯ' ಎನ್ನುತ್ತಾನೆ. ಈ ಶೂನ್ಯವನ್ನು ಕಂಡುಕೊಳ್ಳುವುದರಿಂದ 'ಭಯ' ಉಂಟಾಗುತ್ತದೆ, ಹಾಗೂ ಅದು 'ಹತಾಶ' ಸ್ಥಿತಿಯಲ್ಲಿ ಪರಿಣಮಿಸುತ್ತದೆ. ಈ ಅಂತರವನ್ನು ದಾಟುವುದು ಅಸಾಧ್ಯವೆಂದು ಕಂಡುಕೊಂಡರೂ ಸಹ ಮಾನವ ಅದನ್ನು ದಾಟಲು ಅವಿರತ ಪ್ರಯತ್ನ ಮಾಡುತ್ತಾನೆ. ಹಾಗೂ ಆ ಕಾರಣ ಅಪ್ರಾಮಾಣಿಕ ಜೀವನವನ್ನು ನಡೆಸುತ್ತಾನೆ.

ಅಪರಿಹಾರ್ಯ ನೆಲೆಗೆ ತಂದು ನಿಲ್ಲಿಸುವಂತಹ ಈ ವಿಶ್ಲೇಷಣೆ ಅಸ್ತಿತ್ವವಾದವು ನಿರಾಶೆಯ ತತ್ವಚಿಂತನವೆಂದು ಟೀಕಿಸಲು ಎಡೆಮಾಡಿಕೊಟ್ಟಿದೆ. ಆದರೆ 'ಅಸ್ತಿತ್ವವಾದಕ್ಕಿಂತ ಹೆಚ್ಚು ಭರವಸೆಯ ಸಿದ್ಧಾಂತ ಮತ್ತೊಂದಿಲ್ಲ' ಎನ್ನುತ್ತಾನೆ ಸಾರ್ತ್ರ್. ಮನುಷ್ಯನ ಭವಿಷ್ಯ ಅವನಲ್ಲೇ ಅಂತರ್ಗತವಾಗಿದೆ. ಕ್ರಿಯಾ ತತ್ಪರನಾಗಿರುವುದೊಂದೇ ಅವನಿಗಿರುವ ಭರವಸೆ. ಮನುಷ್ಯ ಜೀವಿಸುವುದನ್ನು ಸಾಧ್ಯವಾಗಿಸುವುದು ಕ್ರಿಯೆ ಒಂದೇ ಎಂದು ಈ ಸಿದ್ಧಾಂತ ತಿಳಿಸುತ್ತದೆ. ಸಾರ್ತ್ರ್ ಅಸ್ತಿತ್ವವಾದವನ್ನು "ಕ್ರಿಯೆ ಮತ್ತು ಅದರಲ್ಲಿ ತೊಡಗುವಿಕೆಯನ್ನು ಕುರಿತ ಒಂದು ನಡವಳಿಕೆಯ ಸಂಹಿತೆ"[5] ಎಂದು ಬಣ್ಣಿಸುತ್ತಾನೆ. ಈ ರೀತಿ ಅಸ್ತಿತ್ವವಾದ ಮನುಷ್ಯನಲ್ಲಿ ಮೂಲಭೂತವಾಗಿರುವ ಅಪಾರ ಸಾಧ್ಯತೆಗಳ ಅರಿವನ್ನು ಅವನಿಗೆ ಉಂಟುಮಾಡಿ ಭರವಸೆಯನ್ನು ನೀಡುವ ಒಂದು ಸಿದ್ಧಾಂತ.

ಆಸ್ತಿಕ ಅಸ್ತಿತ್ವವಾದ

"ಸುಸಂಗತ ನಾಸ್ತಿಕ ನೆಲೆಯಿಂದ ಎಲ್ಲ ಪರಿಣಾಮಗಳನ್ನು ಸಾಧಿಸುವ ಯತ್ನ"[1] ಎಂದು ಅಸ್ತಿತ್ವವಾದವನ್ನು ಸಾರ್ತ್ರ್ ನಿರ್ವಚಿಸಿದ್ದರೂ, ಈ ನಿರ್ವಚನ ನಾಸ್ತಿಕ ಅಸ್ತಿತ್ವವಾದಕ್ಕೆ ಮಾತ್ರ ಅನ್ವಯಿಸುತ್ತದೆಯೇ ಹೊರತು ಆಸ್ತಿಕ ಅಸ್ತಿತ್ವವಾದಕ್ಕಲ್ಲ. ನೀತ್ಸೆಯ 'ದೇವರು ಸತ್ತಿದ್ದಾನೆ" ಎಂಬ ತತ್ವ ನಾಸ್ತಿಕ ಅಸ್ತಿತ್ವವಾದದ ನೆಲೆಗಟ್ಟಾದರೆ, ಕೀರ್ಕೆಗಾರ್ಡನ 'ದೇವರು ಇದ್ದಾನೆ' ಎಂಬ ತತ್ವ ಆಸ್ತಿಕ ಅಸ್ತಿತ್ವವಾದದ ನೆಲೆಗಟ್ಟು. ಆಸ್ತಿಕ ಅಸ್ತಿತ್ವವಾದಿಗಳಲ್ಲಿ ಸೋರೆನ್ ಕೀರ್ಕೆಗಾರ್ಡ್, ಗೇಬ್ರಿಲ್ ಮಾರ್ಸೆಲ್, ಹಾಗೂ ಕಾರ್ಲ್ ಯಾಸ್ಪರ್ಸ್ ಮೊದಲಾದವರೇ ಪ್ರಮುಖರು. ಆಸ್ತಿಕ ಅಸ್ತಿತ್ವವಾದವನ್ನು ಕ್ರಿಶ್ಚಿಯನ್ ಅಸ್ತಿತ್ವವಾದ ಎಂದೂ ಕರೆಯುವುದುಂಟು.

''ಫ್ರೆಂಚ ಅಸ್ತಿತ್ವವಾದ ಇಂದು ನಾಸ್ತಿಕವಾದದ ಜೊತೆಗೆ ಇರುವ ಪ್ರವೃತ್ತಿಯದು; ಆದರೆ ಇದು ಮೂಲಭೂತ ಆವಶ್ಯಕತೆಯೇನಲ್ಲ.''[2] ಎಂದು ಸ್ವತಃ ಸಾರ್ತ್ರ್‌ನೇ ಒಂದು ಸಲ ಫ್ರೆಂಚ ಅಸ್ತಿತ್ವವಾದದ ಬಗ್ಗೆ ಮಾತನಾಡುತ್ತ ಒಪ್ಪಿಕೊಂಡ. ಸಾರ್ತ್ರ್‌ನೇ ಅನೇಕ ಬಾರಿ ಆಸ್ತಿಕವಾದಿಯ ಪರಿಭಾಷೆಯಲ್ಲಿ ಮಾತನಾಡುತ್ತಾನೆ; ಉದಾಹರಣೆಗೆ ಮಾನವನ ಅತಿ ಶ್ರೇಷ್ಠ ಯೋಜನೆ ದೇವರಾಗುವುದು ಎನ್ನುವಾಗ. ಅಸ್ತಿತ್ವವಾದವೂ ಆಸ್ತಿಕವಾಗಿರಲು ಸಾಧ್ಯ, ಏಕೆಂದರೆ ಮನೋವೈಜ್ಞಾನಿಕ ವಾಸ್ತವಿಕತೆಯ ಅಸ್ತಿತ್ವದ ವಿವರಣೆಯೇ ಅಸ್ತಿತ್ವವಾದ. ಅದು ಜೀವದ ಅಸ್ತಿತ್ವದ ರಚನಾಮೂಲ ವಿಶ್ಲೇಷಣೆಯ ಒಂದು ಪ್ರಯತ್ನ. ಮಾನವನ ಪ್ರಜ್ಞೆಯಲ್ಲಿ ಅಸ್ತಿತ್ವ ಹೊಂದಿರುವ ವಾಸ್ತವಿಕತೆಯು ಜ್ಞಾನ ಇಂದ್ರಿಯಗೋಚರ ಸ್ವಭಾವವುಳ್ಳದ್ದು. ಆದ್ದರಿಂದ ಆಂತರಿಕ ಹಾಗೂ ಬಾಹ್ಯ ಜಗತ್ತುಗಳ ನಡುವಿನ ಅಂತರ ಇಲ್ಲಿ ಇಲ್ಲವಾಗುತ್ತದೆ. ಅಸ್ತಿತ್ವವಾದ ಸತ್ಯಕ್ಕೆ ಸಂಬಂಧಪಟ್ಟಂತೆ ಜ್ಞಾನದ ಮೌಲ್ಯವನ್ನು ನಿರ್ಧರಿಸುವುದಿಲ್ಲ; ಮಾನವನ ಶುದ್ಧ ಪ್ರಜ್ಞೆಯಲ್ಲಿರುವ ಜೈವಿಕ ಮೌಲ್ಯಕ್ಕೆ ಸಂಬಂಧಪಟ್ಟಂತೆ ಜ್ಞಾನದ ಮೌಲ್ಯವನ್ನು ನಿರ್ಧರಿಸುತ್ತದೆ.

ಈ ದೃಷ್ಟಿಕೋಣ ಆಸ್ತಿಕ ಹಾಗೂ ನಾಸ್ತಿಕ ಅಸ್ತಿತ್ವವಾದಿಗಳಿಬ್ಬರಿಗೂ ಸಾಮಾನ್ಯವಾದುದು. ಇಬ್ಬರೂ ವಾಸ್ತವಿಕತೆಯನ್ನು ದೃಷ್ಟಿಗೋಚರ ಸ್ವಭಾವದ್ದೆಂದು ವಿವರಿಸಿ, ಅದು ಕಾಂಟನ ದೃಷ್ಟಿಗೆ ಅಗೋಚರವಾದ ಸ್ವಭಾವವುಳ್ಳದ್ದಲ್ಲವೆಂದು ಹೇಳುತ್ತಾರೆ. ಇಬ್ಬರೂ ಮನುಷ್ಯನನ್ನು ಒಂದು 'ನಿಜ ಸ್ಥಿತಿ' ಎಂದೂ, 'ಅಸ್ತಿತ್ವ' ಎಂದೂ ಭಾವಿಸುತ್ತಾರೆ. ಸಾರ್ತ್ರನದೇ ಶಬ್ದಗಳಲ್ಲಿ, "ಅವರಿಬ್ಬರಲ್ಲಿಯೂ ಸಾಮಾನ್ಯವಾದುದು ಏನೆಂದರೆ, ಅವರು ಸತ್ವಕ್ಕಿಂತ ಮೊದಲು ಅಸ್ತಿತ್ವ, ಅಥವಾ ವ್ಯಕ್ತಿನಿಷ್ಠೆಯೇ ಪ್ರಾರಂಭ ಬಿಂದುವಾಗಿರಬೇಕು ಎಂದು ಭಾವಿಸುತ್ತಾರೆ;"[3] ಇಬ್ಬರಲ್ಲಿಯೂ ಭೌತಿಕ ಹಾಗೂ ಮಾನಸಿಕದ ಮಧ್ಯದ ಅಂತರ ಇಲ್ಲವಾಗುತ್ತದೆ. ಈ ರೀತಿ ಆಸ್ತಿಕವಾದಿ ಹಾಗೂ ನಾಸ್ತಿಕವಾದಿ ಅಸ್ತಿತ್ವವಾದಗಳೆರಡನ್ನೂ ಒಳಗೊಳ್ಳುವ ಸಮಗ್ರ ಅಸ್ತಿತ್ವವಾದ, ತತ್ವಚಿಂತಕ ಲಾಕ್ ಹಾಗೂ ಬರ್ಕಲೆಗಳ ಹಲವು ವಿಚಾರಗಳ ಪುನರ್ ವಿಸ್ತಾರವೂ, ಕಾಂಟ ಹಾಗೂ ಹೆಗೆಲ್‌ರ ಹಲವು ವಿಚಾರಗಳ ವಿರುದ್ಧ ಬಂಡಾಯವೂ ಆಗಿದೆ.

ಅಸ್ತಿತ್ವವಾದದ ಪ್ರವರ್ತಕ ಎಂದು ಹೇಳಲಾದ ಡೆನ್ಮಾರ್ಕ ದೇಶದ ಧರ್ಮಗುರು ಸೋರೆನ್ ಕೀರ್ಕೆಗಾರ್ಡನೇ ಸ್ವತಃ ಆಸ್ತಿಕವಾದಿಯಾಗಿದ್ದ. ಹೀಡೆಗ್ಗರ್‌ನ 'ದಾಸೀನ್', ಅಂದರೆ 'ಅಲ್ಲಿ ಇರುವಿಕೆ' ಎಂಬುದು ಮಾತ್ರ ಒಂದು ಆಕಸ್ಮಿಕ ಸ್ಥಿತಿ ; ಸಾರ್ತ್ರ ಹೇಳುವ ಹಾಗೆ ಮಾನವನ ಜನ್ಮಕ್ಕೆ ಯಾವ ಉದ್ದೇಶವೂ ಇಲ್ಲ. ಅದುದರಿಂದ ಮಾನವ 'ತ್ಯಜಿಸಲ್ಪಟ್ಟವ' ನಾಗಿ 'ಏಕಾಕಿತನ'ವನ್ನು ಅನುಭವಿಸುತ್ತಾನೆ. "ಮಾನವನೊಂದು ನಿಷ್ಪ್ರಯೋಜಕ ತೀವ್ರಾಸಕ್ತಿ ಮಾತ್ರವಾದರೆ, ಅವನು ಸ್ವತಂತ್ರನಾಗಿಯೇ ಇರಬೇಕಾದರೆ, ಹಾಗೂ ಅವನ ಮುಂದಿನ ಸ್ವತಂತ್ರ ಕ್ರಿಯೆಗಳು ಹಿಂದಿನವುಗಳನ್ನು ತೊಡೆದು ಹಾಕುತ್ತವೆ ಎನ್ನುವುದಾದರೆ, ಮಾನವನ ಸ್ಥಿತಿ ಅತ್ಯಂತ ನಿರಾಶಾದಾಯಕವಾಗುತ್ತದೆ. ಇಂತಹ ಮನುಷ್ಯ ತಾನು ಜಗತ್ತಿನಲ್ಲಿ 'ಎಸೆಯಲ್ಪಟ್ಟವ' ಎಂದು, 'ತ್ಯಜಿಸಲ್ಪಟ್ಟವ' ಎಂದು ಭಾವಿಸುತ್ತಾನೆ.[4] ಆದರೆ ಆಸ್ತಿಕ ಅಸ್ತಿತ್ವವಾದಿಗೆ ಮಾನವ ತ್ಯಕ್ತನಲ್ಲ. ಅವನು ದೇವರ ಸುಮ್ಮುಖದಲ್ಲಿ ಇರುತ್ತಾನೆ. ಅವನು ಒಂದು ಆಕಸ್ಮಿಕ ಸ್ಥಿತಿ ಮಾತ್ರವಲ್ಲ ; ಬದಲಾಗಿ ಒಂದು ದೈವೀ ಉದ್ದೇಶದ ಚೌಕಟ್ಟಿನೊಳಗೆ ಇರುತ್ತಾನೆ. ಮಾರ್ಸಲಿನಿಗಂತೂ ಅವನೊಂದು ಉತ್ಕೃಷ್ಟ ರಹಸ್ಯ.

ಸ್ವಾತಂತ್ರ್ಯ ಎಂಬ ಪರಿಕಲ್ಪನೆ ಎಲ್ಲ ಅಸ್ತಿತ್ವವಾದಿಗಳಿಗೂ ಕೇಂದ್ರ ತತ್ವ. ಮಾನವ ಆಯ್ಕೆ ಮಾಡುವುದು ಅನಿವಾರ್ಯ. ಆದರೆ ಹಿಂದಿನ ಆಯ್ಕೆಗಳು ಅವನಿಗೆ ಬಂಧಕವಾಗಿರುತ್ತವೆ. ಆದರೆ ಸಾರ್ತ್ರನ ಪ್ರಕಾರ ಹೊಸ ಆಯ್ಕೆಯಿಂದಾಗಿ ಹಳೆಯವು ಅಳಿದು ಹೋಗುತ್ತವೆ. ಯಾಸ್ಪರ್ಸ ಇದನ್ನೇ 'ಐತಿಹಾಸಿಕತೆ' ಎನ್ನುತ್ತಾನೆ. ಆದರೆ ಈ ಚೌಕಟ್ಟಿನಲ್ಲಿ ಅವನ ಸ್ವಾತಂತ್ರ್ಯ ಸಂಪೂರ್ಣವಾದದ್ದು. ಮಾರ್ಸೆಲ್ ಸ್ವಾತಂತ್ರ್ಯವನ್ನು ಅತೀತಕ್ಕೆ ಜೋಡಿಸುತ್ತಾನೆ, "ತನಗೆ ಅತೀತವಾದುದರೊಡನೆ

ಸಂಬಂಧವಿಟ್ಟುಕೊಳ್ಳುವಷ್ಟರ ಮಟ್ಟಿಗೆ ಮಾತ್ರ ಅವನು ಸ್ವತಂತ್ರನಾಗಬಲ್ಲ; ಸ್ವತಂತ್ರನಾಗಿ ಉಳಿಯಬಲ್ಲ".[5] ಆಸ್ತಿಕ ಅಸ್ತಿತ್ವವಾದಿಗಳ ಸ್ವಾತಂತ್ರ್ಯದ ಕಲ್ಪನೆ ಸಾರ್ತ್ರ್‌ನ ಕಲ್ಪನೆಯಿಂದ ಭಿನ್ನವಾದುದು. ಸಾರ್ತ್ರ್‌ನಿಗೆ, 'ಇತರರು ನರಕ'[6] ಆದರೆ ಯಾಸ್ಪರ್ಸ್‌ನಿಗೆ ಇನ್ನೊಂದು ಅಸ್ತಿತ್ವದೊಡನೆ ಸಂವಹನೆ ಸಾಧಿಸುವುದೇ ಮುಕ್ತಿ. ಮಾರ್ಸೆಲನ ಪ್ರಕಾರ "ಯಾತನೆ ಎಂದರೆ ಒಂದೇ, ಅದು ಏಕಾಕಿತನ''.[7] ಸಾರ್ತ್ರ್‌ನಿಗೆ ತೀವ್ರ ಭಯ ಉಂಟಾಗುವುದು ಸ್ವಾತಂತ್ರ್ಯವನ್ನು ಪಡೆಯುವುದರಿಂದ. ಆದರೆ ಕೀರ್ಕೆಗಾರ್ಡನಿಗೆ ಭಯ ಹುಟ್ಟುವುದು ಮೂಲಪಾಪದ ಜ್ಞಾನದಿಂದ.

ಮನುಷ್ಯನಿಗೆ ಆಯ್ಕೆ ಮಾಡಬೇಕಾದ ಸ್ಥಿತಿ ಒದಗುವುದು ಸಾರ್ತ್ರ್ ಹೇಳುವ 'ಕ್ಷಣ'ಗಳಲ್ಲಿ ಅಲ್ಲ; ಬದಲಾಗಿ ಕೀರ್ಕೆಗಾರ್ಡ ಹೇಳುವ 'ಜೀವನ ವಿಧಾನ'ಗಳ ಮಧ್ಯೆ. ಕೀರ್ಕೆಗಾರ್ಡನಿಗೆ ಕ್ರಿಯೆಗಳು ಸುಸಂಗತ ಜೀವನದ ಅಂಗಗಳು; ಸೌಂದರ್ಯಪರ ಜೀವನದಲ್ಲಿ ಸುಖವಿದ್ದ ಹಾಗೆ, ಧಾರ್ಮಿಕ ಜೀವನದಲ್ಲಿ ದೇವರಿಗೆ ವಿಧೇಯನಾಗಿರುವ ಹಾಗೆ. ತನ್ನ 'ಐದರ್-ಆರ್'' ಎಂಬ ಗ್ರಂಥದಲ್ಲಿ ಕೀರ್ಕೆಗಾರ್ಡ ಎರಡು ಜೀವನ ವಿಧಾನಗಳನ್ನು ಮುಂದಿಡುತ್ತಾನೆ. ಸೌಂದರ್ಯಪರ ಹಾಗೂ ನೀತಿನಿಷ್ಠ—ಈ ಎರಡು ಜೀವನ ವಿಧಾನಗಳ ನಡುವೆ ಮಾನವ ಆಯ್ಕೆ ಮಾಡಬೇಕಾಗುತ್ತದೆ. ಸೌಂದರ್ಯಪರ ಜೀವನ ಸುಖದ ಲೋಲುಪತೆಯ ಜೀವನ; ಅದು ಕ್ಷಣಿಕ ಮಾತ್ರ. ಅದಕ್ಕೆ ಭೂತ ವಾಗಲೀ ಭವಿಷ್ಯವಾಗಲೀ ಇಲ್ಲ. ಆದುದರಿಂದ ಈ ಸ್ಥಿತಿಯಲ್ಲಿ ಮಾನವನಿಗೆ ಭರವಸೆ ಅಥವಾ ಆಸೆ ಇರುವುದು ಅಸಾಧ್ಯ. ಆದ್ದರಿಂದ ಸಹಜವಾಗಿ ಮನುಷ್ಯನಿಗೆ ಈ ಸ್ಥಿತಿಯಲ್ಲಿ ಜುಗುಪ್ಸೆ, ಹತಾಶೆಗಳು ಉಂಟಾಗುತ್ತವೆ. ಇದನ್ನು ಕೀರ್ಕೆಗಾರ್ಡ 'ಸಾವ ಕಡೆಗಿನ ರೋಗಗ್ರಸ್ಥ ಸ್ಥಿತಿ' ಎನ್ನುತ್ತಾನೆ. ಈ ಸಂದರ್ಭದಲ್ಲಿ ಮಾನವನಿಗೆ ಆಯ್ಕೆಯ ಅವಶ್ಯಕತೆಯೇ ಇಲ್ಲ. ಆದರೆ ಆತ ನೀತಿನಿಷ್ಠ ಜೀವನ ವಿಧಾನವನ್ನು ಆಯ್ಕೆ ಮಾಡಿದಾಗ ಅವನ ಸ್ವಾತಂತ್ರ್ಯವನ್ನು ಗುರುತಿಸಲಾಗುತ್ತದೆ. ಮಾನವ ಆಯ್ಕೆ ಮಾಡಲು ಸ್ವತಂತ್ರನಾದರೂ ಅವನ ಆಯ್ಕೆಗಳು ಆಧಾರರಹಿತವಾಗಿದ್ದರೂ, ಒಂದು ಆಯ್ಕೆ ಇನ್ನೊಂದು ಆಯ್ಕೆಗಿಂತ ಒಳ್ಳೆಯದಾಗಿರಲು ಸಾಧ್ಯ ಎಂದು ಕೀರ್ಕೆಗಾರ್ಡ ಭಾವಿಸುತ್ತಾನೆ. ಆದುದರಿಂದಲೇ ನೀತಿನಿಷ್ಠ ಜೀವನ ವಿಧಾನದ ಆಯ್ಕೆ ಸೌಂದರ್ಯಪರ ಜೀವನ ವಿಧಾನದ ಆಯ್ಕೆಗಿಂತ ಒಳ್ಳೆಯದು. ಹಾಗೂ ಧಾರ್ಮಿಕ ಜೀವನ ವಿಧಾನದ ಆಯ್ಕೆ ನೀತಿನಿಷ್ಠ ಜೀವನ ವಿಧಾನದ ಆಯ್ಕೆಗಿಂತ ಒಳ್ಳೆಯದು. ಧಾರ್ಮಿಕ ಜೀವನದ ಆಯ್ಕೆ ಮಾತ್ರ ಮಾನವನಿಗೆ ಭರವಸೆ ನೀಡ ಬಲ್ಲುದು. ಹತಾಶ ಸ್ಥಿತಿಯನ್ನು ಕೊನೆಗಾಣಿಸಬಲ್ಲುದು. ಏಕೆಂದರೆ ಆಸೆ ಅಥವಾ ಭರವಸೆ ಎಂದರೆ ಮಾರ್ಸಲ್‌ನ ಪ್ರಕಾರ 'ಪೂರ್ಣ ನಂಬಿಕೆ ಇಟ್ಟು ನಿಶ್ಚಿಂತನಾಗುವುದು'. ಆದರೆ ಈ ಆಯ್ಕೆ ಕೂಡಾ ಲಘುವಾದುದಲ್ಲ. ತನ್ನ ಮಗನಾದ ಐಸಾಕ್‌ನನ್ನೇ ಬಲಿಕೊಡ ಬೇಕೆಂದು ಕೇಳಲಾದ ಬೈಬಲ್ಲಿನ ಅಬ್ರಹಾಮ್‌ನ ಉದಾಹರಣೆಯನ್ನು ಕೀರ್ಕೆಗಾರ್ಡ

ಕೊಡುತ್ತಾನೆ. ಹಾಗೆ ತನ್ನ ಮಗನನ್ನು ತಾನೇ ಬಲಿಕೊಡುವುದು ನೈತಿಕ ಮೌಲ್ಯಗಳಿಗೆ ಸಂಪೂರ್ಣ ವಿರುದ್ಧವಾದದ್ದು. ಆದರೂ ಸಹ ಅಬ್ರಹಾಮ್ ಧಾರ್ಮಿಕ ಜೀವನವನ್ನೇ ಆಯ್ಕೆ ಮಾಡಬೇಕಾಗಿದೆ. ದೇವರಲ್ಲಿ ನಂಬಿಕೆ ಇಟ್ಟು ನೈತಿಕತೆಯನ್ನು ತ್ಯಜಿಸಬೇಕಾಗಿದೆ. ಅಬ್ರಹಾಮ್ ಹಾಗೂ ಐಸಾಕ್‌ರ ಈ ವ್ಯಥೆ ದೈವೀ ತಂದೆ ಹಾಗೂ ಮಗನ ವ್ಯಥೆಯ ಪ್ರತಿರೂಪ. ಏಕೆಂದರೆ ಧಾರ್ಮಿಕ ಜೀವನ ಕೊನೆಯಿಲ್ಲದ ವೇದನೆಯಿಂದ ಕೂಡಿದೆ. ಇಡೀ ಕ್ರಿಶ್ಚಿಯನ್ ಚಿಂತನೆಯೇ ವೇದನೆಯ ಸುತ್ತ—ಕ್ರಿಸ್ತನು ಶಿಲುಬೆಯ ಮೇಲೆ ಪಡುವ ವೇದನೆಯ ಸುತ್ತ—ಹೆಣೆದುಕೊಂಡಿದೆ.

ಮಾನವ ಅತೀತವನ್ನು ಎದುರಾಗುವುದು ವೇದನೆಯ ಮೂಲಕವೇ. 'ಭಯ' 'ನಡುಕ', 'ಅಪರಾಧ ಭಾವನೆ' ಹಾಗೂ 'ತೀವ್ರ ಭಯ' ಇವುಗಳ ಹುಟ್ಟು ಇಲ್ಲಿಯೇ. ಅಂತರ್ಮುಖತೆ ಅಂದರೆ ವ್ಯಕ್ತಿನಿಷ್ಠೆಯೇ ಇಲ್ಲಿ ಸತ್ಯವಾಗುತ್ತದೆ. ಕೀರ್ಕೆಗಾರ್ಡನ ಈ ವ್ಯಕ್ತಿನಿಷ್ಠೆಯನ್ನು ಸಾರ್ತ್ರ್ ಒಂದು ಬಲೆ ಎಂದು ಟೀಕಿಸುತ್ತಾನೆ. "ದೇವರಿಲ್ಲದ ಮನುಷ್ಯನ ನೋವನ್ನು ಓದುಗ ಮನದಟ್ಟು ಮಾಡಿಕೊಳ್ಳಲೆಂದೇ ಬಹುಶಃ ಕೀರ್ಕೆಗಾರ್ಡ ತನ್ನ ಓದುಗರನ್ನು ಅಂತರ್‌ಮುಖತೆಯ ಆಳಕ್ಕೆ ಒಯ್ಯುತ್ತಾನೇನೋ ಎಂದು ವಿಸ್ಮಯಪಡಬಹುದು".[8] ನಾಸ್ತಿಕವಾದಿಗೆ 'ಅಸಂಗತ'ವಾಗಿ ಕಾಣುವ ಜೀವನ ಕೀರ್ಕೆಗಾರ್ಡನಿಗೆ ವಿರೋಧಾಭಾಸಗಳಿಂದ ಮಾತ್ರ ಕೂಡಿದುದಾಗಿ ಕಾಣುತ್ತದೆ. ದೇವರು ಸರ್ವಶಕ್ತನಾಗಿದ್ದರೂ ಅವನ ಮಗನಾದ ಕ್ರಿಸ್ತ ಶಿಲುಬೆಯ ಮೇಲೆ ಅನುಭವಿಸುವ ಯಾತನೆಯ ವಿರೋಧಾಭಾಸವಂತೆ. 'ನಂಬಿಕೆ' ಮಾತ್ರ ಈ ವಿರೋಧಾಭಾಸಗಳನ್ನು ದಾಟಬಲ್ಲದು. ಮುಂಡಕ ಉಪನಿಷತ್ತಿನಲ್ಲಿಯೂ ಇದೇ ವಿಚಾರ ಧಾರೆಯನ್ನು ಕಾಣಬಹುದು. "ಮಾನವನ ಬುದ್ಧಿಯು ಎತ್ತುವ ಸಮಸ್ಯೆಗಳು, ಅವರು ತರ್ಕವನ್ನು ತ್ಯಜಿಸಿ ಧಾರ್ಮಿಕ ಜೀವನವನ್ನು ಪ್ರಾರಂಭಿಸಿದ ತಕ್ಷಣ ತಮ್ಮಷ್ಟಕ್ಕೆ ತಾವೇ ಪರಿಹಾರವಾಗುತ್ತವೆ..."[9] ತನ್ನ ಬಗ್ಗೆಯೇ ಜುಗುಪ್ಸೆ ಹೊಂದಿದ ಮಾನವ ತನ್ನಲ್ಲಿಯೇ ಶೂನ್ಯವನ್ನು ಕಾಣುತ್ತಾನೆ. ಈ ಶೂನ್ಯವನ್ನು ಸೌಂದರ್ಯಪರ ಜೀವನ, ನೀತಿನಿಷ್ಠ ಜೀವನ, ಇವಾವುಗಳಿಂದಲೂ ತುಂಬಲು ಸಾಧ್ಯವಿಲ್ಲ. ಧಾರ್ಮಿಕ ಜೀವನದಿಂದ ಮಾತ್ರ ತುಂಬಲು ಸಾಧ್ಯ. 'ನಂಬಿಕೆ'ಯನ್ನು ತ್ಯಜಿಸಿದರೆ ಜಗತ್ತೇ ಸರ್ವಸ್ವವೂ ಆಗಿ ಮಾನವನ ಭವಿಷ್ಯ ಪೂರ್ವನಿಶ್ಚಿತವಾಗಿ ಬಿಡುತ್ತದೆ.

ಮಾನವ ತನ್ನ ಕ್ಷಣಿಕ ಅಸ್ತಿತ್ವದಲ್ಲಿ ಅನಂತತೆಯನ್ನು ಸಾಧಿಸಲು ಯತ್ನಿಸುತ್ತಾನೆ. ಆದರೆ ಆತ ಸಾವು ಮುಂತಾದ ಕೆಲವು ಎಲ್ಲೆಗಳನ್ನು ದಾಟಲಾರ. ಆದ್ದರಿಂದಲೇ ಮಾನವ ನಿರಂತರ ಪ್ರಯಾಸಕ್ಕೆ ಅಸಹಾಯಕನಾಗಿ ಕಟ್ಟುಬಿದ್ದಿದ್ದಾನೆ, ಗ್ರೀಕ್ ಪುರಾಣಗಳ ಸಿಸಿಫಸ್ಸಿನಂತೆ. ಸಾರ್ತ್ರ್‌ನಂತಹ ನಾಸ್ತಿಕವಾದಿಗಳಿಗೆ ಸಾವು ಮಾನವನ ಸಾಧ್ಯತೆಗಳಿಗೆ ಒಂದು ಪರಿಮಿತಿ ಅಷ್ಟೆ. ಆದರೆ ಆಸ್ತಿಕವಾದಿಗಳಿಗೆ

ಅದೊಂದು ಅಂತಿಮ ಘಟನೆ ಮಾತ್ರ. ಅದರ ಸವಾಲನ್ನು ಆಸ್ತಿಕವಾದಿ 'ನಂಬಿಕೆ'ಯ ನೆರವಿನಿಂದ, ಧಾರ್ಮಿಕ ಜೀವನದ ಬಲದಿಂದ ಎದುರಿಸುತ್ತಾನೆ.

ಸಾರ್ತ್ರ್ ಸಹ ದೇವರನ್ನು ನಿರಾಕರಿಸುವುದಿಲ್ಲ. ಸಾರ್ತ್ರ್‌ನ "ಅಸ್ತಿತ್ವವಾದ ದೇವರಿಲ್ಲ ಎಂದು ಸಾಧಿಸುವಷ್ಟರಲ್ಲಿಯೇ ನಶಿಸಿ ಹೋಗುವಷ್ಟು ನಾಸ್ತಿಕವಾದಿಯಲ್ಲ. ದೇವರಿದ್ದರೂ ಕೂಡ, ಅದರಿಂದ ಯಾವ ಬದಲಾವಣೆ ಕೂಡಾ ಆಗುವುದಿಲ್ಲ ಎಂದು ಮಾತ್ರ ಅದು ಹೇಳುತ್ತದೆ...ನಾವೇನೂ ದೇವರಿದ್ದಾನೆ ಎಂದು ಹೇಳುವುದಿಲ್ಲ, ಆದರೆ ದೇವರ ಅಸ್ತಿತ್ವದ ಪ್ರಶ್ನೆ ಮುಖ್ಯವಾದುದಲ್ಲ ಎಂದು ಭಾವಿಸುತ್ತೇವೆ."[10] ಮಾರ್ಟಿನ್ ಹೀಡೆಗ್ಗರ್ ಸಹ ಅಸ್ತಿತ್ವವಾದವನ್ನು ದೇವರಿಲ್ಲದ ಸ್ಥಿತಿಯ ಆಧಾರದ ಮೇಲೆ ಪ್ರತಿಪಾದಿಸುತ್ತಾನೆ. ಆದರೂ ತಾನು ನಾಸ್ತಿಕನಲ್ಲ ಎಂದು ಆತ ಸ್ಪಷ್ಟವಾಗಿ ಹೇಳಿಕೊಳ್ಳುತ್ತಾನೆ. ಸಾರ್ತ್ರ್‌ನ ನಾಟಕ 'ದ ಫ್ಲೈಸ್'ನಲ್ಲಿ ಒರೆಸ್ಟಸ್ ಎಂಬ ಪಾತ್ರ ಹೇಳುವ ಮಾತು ಬಹಳ ಅರ್ಥಪೂರ್ಣವಿದೆ: "ನೀನು ದೇವರು, ಹಾಗೂ ನಾನು ಸ್ವತಂತ್ರ; ನಾವಿಬ್ಬರೂ ಏಕಾಕಿಗಳು, ನಮ್ಮಿಬ್ಬರ ಸಂಕಟ ಒಂದೇ."[11]

ಹೆಗೆಲ್, ಸಾತ್ರ್ ಮತ್ತು ಮಾರ್ಕ್ಸ್

"ಹೆಗೆಲ್ ನಂತರ ಬಂದ ಬಹಳಷ್ಟು ತತ್ವ ಚಿಂತನೆಗಳು ತಮ್ಮನ್ನು ನಿರ್ವಚಿಸಿ ಕೊಳ್ಳುವುದು ಹೆಗೆಲ್‌ನ ವಿರುದ್ಧ ತಳೆದ ನಿಲುವಿನ ಆಧಾರದ ಮೇಲೆ. ತತ್ವ ಶಾಸ್ತ್ರದ ಇತಿಹಾಸದಲ್ಲಿ ಹೆಗೆಲ್‌ನಿಗಿರುವ ಮಹತ್ವಕ್ಕೆ ಇದು ಸಾಕ್ಷಿ... ಈ ಶತಮಾನದ ಬಹುಪಾಲು ತತ್ವಚಿಂತನೆ ಹೆಗೆಲ್‌ನ ವಿರುದ್ಧದ ಪ್ರತಿಕ್ರಿಯೆಯೇ ಆಗಿದೆ. ಈ ಮಾತು ಫಿನಾಮಿನಾಲಜಿ, ಭಾಷಾ ಶಾಸ್ತ್ರೀಯ ವಿಶ್ಲೇಷಣೆ, ಫಲಪ್ರಮಾಣವಾದ, ಮಾರ್ಕ್ಸ್‌ವಾದ ಹಾಗೂ ಆಸ್ತಿತ್ವವಾದಗಳಿಗೂ ಅನ್ವಯಿಸುತ್ತದೆ".[1] ಹೆಗೆಲ್ ತನ್ನ ವಿಚಾರಮೂಲವಾದ ತತ್ವಶಾಸ್ತ್ರದಲ್ಲಿ 'ವ್ಯಕ್ತಿ'ಯನ್ನು 'ವಿಚಾರ'ದೊಂದಿಗೆ ಸಮೀಕರಿಸಿದ್ದ. ತನ್ನ ಮನನಾತ್ಮಕ ಅಧ್ಯಾತ್ಮದ ಆಧಾರದ ಮೇಲೆ ತತ್ವಶಾಸ್ತ್ರದ ಒಂದು ವ್ಯವಸ್ಥೆಯನ್ನೇ ಕಲ್ಪಿಸಿದ್ದ. ಹಾಗೂ ಆ ವ್ಯವಸ್ಥೆಯಲ್ಲಿ ವಸ್ತುನಿಷ್ಠ ಸತ್ಯ ವನ್ನು ಪಡೆಯುವ ಪ್ರಯತ್ನ ಮಾಡಿದ್ದ. ಭಾರತದ ಶಂಕರಾಚಾರ್ಯರಂತೆ ಅವನೂ ಶುದ್ಧ ತರ್ಕದ ಆರಾಧಕನಾಗಿದ್ದ. ಅವನ ಚಿಂತನೆಯಲ್ಲಿ ಮಾನವ ತಾನು ಭಾಗ ವಹಿಸುತ್ತಿರುವ ವ್ಯವಸ್ಥೆಯ ಒಂದು ಅಂಶ ಮಾತ್ರ. ಹೆಗೆಲ್‌ನಿಗೆ ಸತ್ವವೇ ಸರ್ವಸ್ವ ವಾಗಿತ್ತು.

ಹೆಗೆಲ್‌ನ ಈ ಚಿಂತನೆಯ ವಿರುದ್ಧ ಅಸ್ತಿತ್ವವಾದದ ಬಂಡಾಯ ತೀಕ್ಷ್ಣವೂ ಉಗ್ರವೂ ಆಗಿತ್ತು. ಡೆನ್ಮಾರ್ಕ್ ದೇಶದ ಅಸ್ತಿತ್ವವಾದಿ ಸೋರೆನ್ ಕೀರ್ಕೆಗಾರ್ಡ್ "ಅಸ್ತಿತ್ವವುಳ್ಳ ಒಬ್ಬ ವಿಶಿಷ್ಟ ವ್ಯಕ್ತಿಯನ್ನು ಬರಿ ಒಂದು 'ವಿಚಾರ' ಮಾತ್ರ ಎನ್ನಲು ಸಾಧ್ಯವೇ ಇಲ್ಲ".[2] ಎನ್ನುತ್ತಾನೆ. ಹೆಗೆಲ್‌ನ ಗತಿತಾರ್ಕಿಕ ಚಿಂತನೆಯಲ್ಲಿಯ ದ್ವಂದ್ವಮಾನ ವಿರೋಧಗಳು ಕೀರ್ಕೆಗಾರ್ಡನಲ್ಲಿ ಕ್ರಿಯೆಯ ಪರ್ಯಾಯ ಮಾರ್ಗಗಳೂ, ಸಾತ್ರ್‌ನಲ್ಲಿ ಮೂಲತತ್ವ ಶಾಸ್ತ್ರದ ಅಸ್ತಿತ್ವ ಹಾಗೂ ಶೂನ್ಯತೆ ಗಳೂ ಆಗುತ್ತವೆ. ಅಸ್ತಿತ್ವವಾದದ ಇದು ಇಲ್ಲವೇ ಅದು ಎಂಬ ಕ್ರೂರ

ಪರ್ಯಾಯಗಳಲ್ಲಿ ಹೆಗೆಲ್‌ನ ತ್ರಿಕೋಣಾತ್ಮಕ ತರ್ಕದ ಸಂಶ್ಲೇಷಣೆ ಇಲ್ಲ. ಅಸ್ತಿತ್ವವಾದ 'ವಿಷಯವಾದಿ', ಅದು ಹೆಗೆಲ್‌ನ ವಸ್ತುಗತ ಸತ್ಯಕ್ಕೆ ವಿರೋಧಿ. ಆದುದರಿಂದ ಸಾರ್ತ್ರ್ ಫಿನಾಮೆನಾಲಜಿಯ ನೆಲೆಗಟ್ಟಿನಿಂದ ಮಾನವನ ಅಂತರಾನುಭವಗಳನ್ನು ಶೋಧಿಸುತ್ತಾನೆ. ಅವನ ಪ್ರಕಾರ ಒಂದು ವ್ಯವಸ್ಥೆಯಲ್ಲಿ ಭಾಗವಹಿಸುತ್ತಿದ್ದರೂ ಸಹ ಮಾನವ ಅದರಿಂದ ಆಚೆ ನಿಂತುಕೊಳ್ಳಬಲ್ಲ. "ಒಂದು ಪರಿಸ್ಥಿತಿಯಿಂದ ಹೊರ ನಿಂತು ಒಂದು ದೃಷ್ಟಿಕೋಣವನ್ನು ಸಾಧಿಸುವುದಿದೆಯಲ್ಲ......ಅದನ್ನೇ ನಾವು 'ಸ್ವಾತಂತ್ರ್ಯ' ಎನ್ನುವುದು"[3]. ಅಸ್ತಿತ್ವವಾದಿಗೆ ಸತ್ವ ಮೊದಲಲ್ಲ; ಅಸ್ತಿತ್ವ ಮೊದಲು.

ಮಾರ್ಕ್ಸ್‌ವಾದ ಹಾಗೂ ಅಸ್ತಿತ್ವವಾದಗಳೆರಡೂ ಹೆಗೆಲ್‌ನ ವಿರುದ್ಧ ಪ್ರತಿಕ್ರಿಯೆಗಳಾಗಿದ್ದರೂ ಇವೆರಡೂ ಚಿಂತನೆಗಳು ಅವನಿಗೆ ಬಹಳ ವಿಷಯಗಳಲ್ಲಿ ಋಣಿಯಾಗಿವೆ. ಹೆಗೆಲ್‌ನ ಗತಿತಾರ್ಕಿಕ ವಾದವನ್ನು ಮೂಲವಾಗಿಟ್ಟುಕೊಂಡು ಮಾರ್ಕ್ಸ್ ಮಾನವ ಚರಿತ್ರೆಗೆ ಒಂದು ಪ್ರಭಾವಪೂರ್ಣ ವ್ಯಾಖ್ಯೆ ನೀಡಿದ. ಹೆಗೆಲ್‌ನ 'ತನ್ನಲ್ಲಿ ತಾನಿರುವ' ಹಾಗೂ 'ತನಗಾಗಿ-ತಾನಿರುವ' ಅಸ್ತಿತ್ವಗಳ ಪರಿಕಲ್ಪನೆಗಳನ್ನು ಸ್ವೀಕರಿಸಿ ಸಾರ್ತ್ರ್ ಅವುಗಳಿಗೆ ಫಿನಾಮೆನಾಲಜಿಯ ಬಣ್ಣ ನೀಡಿದ. 'ಮನಸ್ಸು' ಹಾಗೂ 'ಸತ್ಯ' ಇವುಗಳನ್ನು ಸಂಪೂರ್ಣವಾಗಿ ಬೇರ್ಪಡಿಸಲಾಗದು ಎನ್ನುವ ವಿಚಾರವನ್ನು ಮಾರ್ಕ್ಸ್ ಹಾಗೂ ಸಾರ್ತ್ರ್ ಇಬ್ಬರೂ ಒಪ್ಪುತ್ತಾರೆ.

ಆದರೆ ಹೆಗೆಲ್‌ನ ವಿರುದ್ಧ ತಾವು ತಳೆಯುವ ನಿಲುವಿನ ಆಧಾರದ ಮೇಲೆ ಮಾರ್ಕ್ಸ್‌ವಾದ ಹಾಗೂ ಅಸ್ತಿತ್ವವಾದಗಳು ತಮ್ಮನ್ನು ನಿರ್ವಚಿಸಿಕೊಂಡರೂ ಕೂಡಾ ಇವೆರಡರಲ್ಲಿ ಅನೇಕ ಮೂಲಭೂತ ಭಿನ್ನಾಭಿಪ್ರಾಯಗಳಿವೆ. ಮಾರ್ಕ್ಸ್‌ವಾದ ಸಮಾಜ ಮೂಲವಾದುದು. ಅಸ್ತಿತ್ವವಾದ ವ್ಯಕ್ತಿಮೂಲವಾದುದು. ಮಾನವನ ಬಗ್ಗೆ ಇವೆರಡರ ದೃಷ್ಟಿಕೋಣ ಮೂಲಭೂತವಾಗಿ ಭಿನ್ನ. "ಅಸ್ತಿತ್ವವಾದ ಹಾಗೂ ಮಾರ್ಕ್ಸ್‌ವಾದಗಳೆರಡೂ ಒಂದೇ ಗುರಿಯನ್ನು ಹೊಂದಿವೆ, ಆದರೆ ಮಾರ್ಕ್ಸ್‌ವಾದ ಮಾನವನನ್ನು 'ವಿಚಾರ'ದೊಂದಿಗೆ ಪುನರ್‌ಸಮೀಕರಿಸಿದೆ. ಆದರೆ ಅಸ್ತಿತ್ವವಾದ ಅವನನ್ನು ಅವನ ಕೆಲಸದಲ್ಲಿ, ಅವನ ಮನೆಯಲ್ಲಿ, ರಸ್ತೆಯಲ್ಲಿ, ಅವನೆಲ್ಲಿರುವನೋ ಅಲ್ಲಿ, ಎಲ್ಲೆಡೆಯಲ್ಲಿ ಅವನನ್ನು ಹುಡುಕುತ್ತದೆ...."[4] ಸಾರ್ತ್ರ್ ಪ್ರಜ್ಞೆಯ ಅಂತರಾಳದಿಂದ ತನ್ನ ಹುಡುಕನ್ನು ಪ್ರಾರಂಭಿಸುತ್ತಾನೆ, ಆದರೆ ಮಾರ್ಕ್ಸ್, ತನ್ನ ಹುಡುಕನ್ನು ಮಾನವನ ಜೈವಿಕ ಹಾಗೂ ಸಾಮಾಜಿಕ ಸ್ಥಿತಿಯಿಂದ ಅಂದರೆ ಪ್ರಜ್ಞೆಯ ಬಾಹ್ಯದಿಂದ ಪ್ರಾರಂಭಿಸುತ್ತಾನೆ.

ಮಾನವನನ್ನು ಆತನ 'ಭೂತ'ದಿಂದ ಬಿಡುಗಡೆ ಮಾಡಬೇಕು ಎನ್ನುವಲ್ಲಿ ಫ್ರಾಯಿಡ್, ಮಾರ್ಕ್ಸ್ ಹಾಗೂ ಸಾರ್ತ್ರ್, ಎಲ್ಲರದೂ ಒಂದೇ ಮತ. ಆದರೆ ಚರಿತ್ರೆಯ ಬಗ್ಗೆ ಸಾರ್ತ್ರ್‌ನ ವಿಚಾರಗಳು ಮಾರ್ಕ್ಸ್‌ನ ವಿಚಾರಗಳಿಗಿಂತ ಭಿನ್ನವಾದದ್ದು.

"ಚರಿತ್ರೆಯನ್ನು ಸೃಷ್ಟಿಸುವ ಮಾನವನನ್ನೇ ಬಿಟ್ಟುಬಿಟ್ಟಿರುವ ಚರಿತ್ರೆ ಬರಿ ಅಮೂರ್ತ ಹಾಗೂ ಜಡ ಕಲ್ಪನೆ ಮಾತ್ರವಾಗುತ್ತದೆ. ಚರಿತ್ರೆಗೊಂದು ಗುರಿ ಇದೆ ಎಂದೂ ಹೇಳುವಹಾಗಿಲ್ಲ, ಇಲ್ಲವೆಂದೂ ಹೇಳುವಹಾಗಿಲ್ಲ. ಹಾಗೂ ನಿಜವಾದ ಸಮಸ್ಯೆ ಇರುವುದು ಅದರ ಧ್ಯೇಯವನ್ನು ಅರಿಯುವುದಲ್ಲ, ಅದಕ್ಕೊಂದು ಧ್ಯೇಯವನ್ನು ಕೊಡುವುದು."[5] ಆದರೆ ಭೌತಿಕವಾದ-ವಿಧಿವಾದಿಯಾದುದರಿಂದ ಮಾನವನನ್ನು ಅದು ಒಂದು ವರ್ತನಾ ಮಾದರಿಯನ್ನಾಗಿ ಮಾತ್ರ ಮಾಡುತ್ತದೆ. ಇಂತಹ ವರ್ತನಾ ಮಾದರಿಗಳ ಜಗತ್ತಿನಲ್ಲಿ ಕ್ರಾಂತಿ ಹೇಗೆ ಸಾಧ್ಯ ? ವಿಷಯನಿಷ್ಠನಾಗಿರದೇ ಇದ್ದರೆ ಕ್ರಾಂತಿಕಾರಿ ಹೇಗೆ ಕ್ರಿಯಾತ್ಮಕನಾಗಬಲ್ಲ ? "ಕ್ರಾಂತಿಕಾರಿ ತತ್ವಶಾಸ್ತ್ರ ಸ್ವಾತಂತ್ರ್ಯದ ಅನೇಕತ್ವವನ್ನು ದೃಷ್ಟಿಯಲ್ಲಿಟ್ಟುಕೊಂಡಿರಬೇಕಾಗುತ್ತದೆ. ಹಾಗೂ ತನ್ನ ದೃಷ್ಟಿಯಲ್ಲಿ ತಾನು ಸ್ವತಂತ್ರನಾಗಿದ್ದರೂ ಸಹ ಮಾನವ ಹೇಗೆ ಬೇರೆಯವನ ದೃಷ್ಟಿಯಲ್ಲಿ ಒಂದು ವಸ್ತುಮಾತ್ರ ಆಗಿರುತ್ತಾನೆ ಎಂಬುದನ್ನು ಅದು ತೋರಿಸಬೇಕಾಗುತ್ತದೆ."[6] ಹಾಗಿದ್ದಲ್ಲಿ ಮಾರ್ಕ್ಸ್‌ವಾದ ಕ್ರಾಂತಿಕಾರಿ ತತ್ವವಾದರೂ ಹೇಗಾದೀತು ?

ಅಸ್ತಿತ್ವವಾದ ಹಾಗೂ ಮಾರ್ಕ್ಸ್‌ವಾದ ಎರಡೂ, 'ಅನುಭವದ ಮೂರ್ತ ಸಂಶ್ಲೇಷಣೆಯನ್ನು ಪಡೆಯುವ ಪ್ರಯತ್ನ ಮಾಡಿದರೂ, ಮಾರ್ಕ್ಸ್‌ವಾದದಲ್ಲಿ ಮಾನವ ಹಾಗೂ ವಸ್ತುಗಳು ಅನುಭವಪೂರ್ವದ 'ವಿಚಾರ'ದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಜೊತೆಗೆ, ಭವಿಷ್ಯದ ಕಥನಕ್ಕೆ ಅನುಭವ ಅನುಗುಣವಾಗಿರದಿದ್ದಲ್ಲಿ, ಅಂತಹ ಅನುಭವವೇ ತಪ್ಪು.' ಸಾರ್ತ್ರ್ ಮಾರ್ಕ್ಸ್‌ವಾದಿಗಳನ್ನು ಇಲ್ಲಿ ಮೂದಲಿಸುತ್ತಾನೆ : "ಬುಡಾಪೆಸ್ಟ್ ನಗರದ ಭೂಗತ ರಸ್ತೆ ರಾಕೋಸಿಯ ತಲೆಯಲ್ಲಿ ಅಸ್ತಿತ್ವ ಪಡೆದಿತ್ತು, ಆದರೆ ಬುಡಾಪೆಸ್ಟ್‌ನ ಮಣ್ಣು ಅಂತಹ ಭೂಗತ ರಸ್ತೆಯನ್ನು ನಿರ್ಮಿಸುವಲ್ಲಿ ಸಹಾಯಕವಾಗದಿದ್ದರೆ ಅದಕ್ಕೆ ಆ ಮಣ್ಣು ಪ್ರತಿಗಾಮಿಯಾಗಿದ್ದುದೇ ಕಾರಣ."[7] ಈ ರೀತಿ ಮಾರ್ಕ್ಸ್‌ವಾದ ಶುದ್ಧ ವಿಚಾರವಾದದಲ್ಲಿ ಕೊನೆಯಾಗುತ್ತದೆ. ಹಂಗೆರಿಯಲ್ಲಿ ಸೋವಿಯತ್ ದೇಶ ನಡೆಸಿದ ಎರಡನೇ ಹಸ್ತಕ್ಷೇಪವನ್ನು ಪ್ರಸ್ತಾಪಿಸುತ್ತ, ಸಾರ್ತ್ರ್, "ಘಟನೆಗಳು ನಡೆಯುವ ಮೊದಲೇ ಕಮ್ಯುನಿಸ್ಟರು ತಾವು ಹಸ್ತಕ್ಷೇಪವನ್ನು ನೋಡುತ್ತಿದ್ದೇವೋ, ಅಥವಾ ಪ್ರತಿಕ್ರಾಂತಿಯನ್ನು ನೋಡುತ್ತಿದ್ದೇವೋ ಎಂಬುದನ್ನು ನಿರ್ಧರಿಸಿಬಿಟ್ಟಿದ್ದರು. ನಂತರ ಸಮಾಚಾರ ಬಂದಿತು, ಸಾಕಷ್ಟು ಸಮಾಚಾರ ಬಂದಿತು, ಆದರೆ ಒಬ್ಬ ಮಾರ್ಕ್ಸ್‌ವಾದಿಯೂ ತನ್ನ ವಿಚಾರಗಳನ್ನು ಬದಲಿಸಿದ ಎಂದು ನಾನು ಇದುವರೆಗೆ ಕೇಳಿಲ್ಲ."[8] ಎನ್ನುತ್ತಾನೆ. ಇಲ್ಲಿ ಮಾರ್ಕ್ಸ್‌ವಾದ ನಿಂತುಹೋಗುತ್ತದೆ. ಅದೊಂದು ಹುಸಿ-ತತ್ವಶಾಸ್ತ್ರವಾಗುತ್ತದೆ. "ಅದು ಚರಿತ್ರೆಯೊಂದಿಗೆ ಬಾಳುವುದನ್ನು ಬಿಟ್ಟು ಬಿಟ್ಟಿದೆ......ನೌಕರಶಾಹೀ ವರ್ಗದ ಸಂಪ್ರದಾಯಪಾಲಕ ಪ್ರವೃತ್ತಿಯ ಮೂಲಕ

ಅದು ಬದಲಾವಣೆಯನ್ನು ಜಡ ಸ್ವರೂಪಕ್ಕೆ ಮಾರ್ಪಡಿಸಲು ಪ್ರಯತ್ನಿಸುತ್ತದೆ..."[9]

ಇದಕ್ಕೆ ವಿರುದ್ಧವಾಗಿ, ಸಾರ್ತ್ರ್‌ನ ಅಸ್ತಿತ್ವವಾದವನ್ನು 'ಮಧ್ಯಮ ವರ್ಗದ ತತ್ವಶಾಸ್ತ್ರ' ಎಂದು ಮಾರ್ಕ್ಸ್‌ವಾದಿಗಳು ಮೂದಲಿಸುತ್ತಾರೆ. "ಸಮಸ್ಯೆಗೆ ಪರಿಹಾರ ಎನ್ನುವುದೇ ಇಲ್ಲವಾದುದರಿಂದ, ಈ ಜಗತ್ತಿನಲ್ಲಿ ಕ್ರಿಯೆ ಎಂಬುದೇ ಅಸಾಧ್ಯ ಎಂದು ಪರಿಗಣಿಸಬೇಕಾಗುತ್ತದೆ. ಹೀಗಾದಲ್ಲಿ ನಾವು ಬರಿ ಚಿಂತನಾಪರ ತತ್ವಶಾಸ್ತ್ರವನ್ನು ಒಪ್ಪಬೇಕಾಗುತ್ತದೆ; ಹಾಗೂ ಬರಿಯ ಚಿಂತನೆ ಒಂದು ಭೋಗ ಸಾಮಗ್ರಿ ಮಾತ್ರವಾದುದರಿಂದ ಕೊನೆಗೆ ನಾವು ಮಧ್ಯಮ ವರ್ಗದ ತತ್ವಶಾಸ್ತ್ರವನ್ನು ತಲುಪುತ್ತೇವೆ."[10] ಆದರೆ ಸಾರ್ತ್ರ್ ಪ್ಯಾರಿಸ್ಸಿನಲ್ಲಿ ಮಾಡಿದ ಒಂದು ಭಾಷಣದಲ್ಲಿ (ಇದನ್ನೇ ನಂತರ 'ಅಸ್ತಿತ್ವವಾದ ಮತ್ತು ಮಾನವತಾವಾದ' ಎಂಬ ಶೀರ್ಷಿಕೆಯೊಂದಿಗೆ ಗ್ರಂಥ ರೂಪದಲ್ಲಿ ಪ್ರಕಟಿಸಲಾಗಿದೆ) ಅಸ್ತಿತ್ವವಾದವನ್ನು ಸಮರ್ಥಿಸಿದ. ದೇವರು ಇಲ್ಲ ಎನ್ನುವುದಾದರೆ ಕೊನೆಯ ಪಕ್ಷ ಮಾನವನಲ್ಲಿ ಸತ್ವಕ್ಕಿಂತ ಅಸ್ತಿತ್ವ ಮೊದಲಾಗಬೇಕು, ಹಾಗೂ ಮಾನವ ತಾನೇನಾಗಬೇಕು ಎಂದು ಆಯ್ಕೆ ಮಾಡುವುದರಲ್ಲಿ ಸಂಪೂರ್ಣ ಸ್ವತಂತ್ರ, ಜೊತೆಗೆ ಆ ಕಾರಣದಿಂದ ಅವನು ತಾನೇನಾಗಿರುತ್ತಾನೋ ಅದಕ್ಕೆ ತಾನೇ ಪೂರ್ಣ ಹೊಣೆಗಾರ. ಆದುದರಿಂದ ಅಸ್ತಿತ್ವವಾದ ಮಧ್ಯಮ ವರ್ಗದ ಚಿಂತನಾಪರ ತತ್ವಶಾಸ್ತ್ರ ಹೇಗಾದೀತು ? ಬದಲಾಗಿ ಅದು ಒಂದು ಕ್ರಿಯಾಮೂಲ ಸಿದ್ಧಾಂತ ಎಂದು ಸಾರ್ತ್ರ್ ಸಮರ್ಥಿಸಿಕೊಳ್ಳುತ್ತಾನೆ.

ಆದರೂ, ಮಾರ್ಕ್ಸ್ ಚರಿತ್ರೆಗೆ ನೀಡುವ ವ್ಯಾಖ್ಯೆಯಿಂದ ಸಾರ್ತ್ರ್ ಬಹಳ ಪ್ರಭಾವಿತನಾಗಿದ್ದಾನೆ. ಚರಿತ್ರೆಗೆ ವ್ಯಾಖ್ಯೆ ನೀಡುವ ಮಾರ್ಕ್ಸ್‌ನ ಪ್ರಯತ್ನವನ್ನು ಸಾರ್ತ್ರ್, 'ಚರಿತ್ರೆಯ ಗತಿಯನ್ನು ಅದರ ಸಮಗ್ರತೆಯಲ್ಲಿ ವಿಶ್ಲೇಷಿಸುವ ಅತಿ ಮೂಲಭೂತ ಪ್ರಯತ್ನ' ಎಂದು ಕರೆಯುತ್ತಾನೆ. 'ಆದರೆ ಅದೇ ರೀತಿ, ಚರಿತ್ರೆಯ ಒಂದೇ ಒಂದು ಸರಿಯಾದ ವ್ಯಾಖ್ಯೆಯನ್ನು ಚಾರಿತ್ರಿಕ ಭೌತವಾದ ನೀಡುತ್ತದೆ, ಹಾಗೂ ಅಸ್ತಿತ್ವವಾದವೊಂದೇ 'ಸತ್ಯ'ಕ್ಕೆ ಮೂರ್ತ ಮಾರ್ಗವೆಂದೂ ಚೆನ್ನಾಗಿ ಮನದಟ್ಟಾಗಿದೆ' ಎನ್ನುತ್ತಾನೆ ಸಾರ್ತ್ರ್. ಹಾಗೆಯೇ "ಚರಿತ್ರೆಯ ಈ ಹೊತ್ತಿನಲ್ಲಿ ಉತ್ಪಾದನಾ ಸಾಧನಗಳು ಉತ್ಪಾದನಾ ಸಂಬಂಧಗಳೊಂದಿಗೆ ಸಂಘರ್ಷಿಸುತ್ತಿವೆ"[11] ಎಂದೂ ಸಾರ್ತ್ರ್‌ನ ನಂಬಿಕೆ. ಈ ನಂಬಿಕೆಗಳೇ ಮುಂದೆ ಸಾರ್ತ್ರ್‌ನ 'ಗತಿತಾರ್ಕಿಕವಾದದ ಸಮಾಲೋಚನೆ' ಎಂಬ ಕೃತಿಯ ನೆಲೆಗಟ್ಟನ್ನು ಒದಗಿಸಿದವು. ಮೇಲ್ನೋಟಕ್ಕೆ ಪರಸ್ಪರ ವಿರೋಧಿಗಳಾಗಿ ಕಾಣುವ ಅಸ್ತಿತ್ವವಾದ ಮತ್ತು ಮಾರ್ಕ್ಸ್‌ವಾದಗಳ ನಡುವೆ ಸಾಮಂಜಸ್ಯ ಸಾಧಿಸುವ ಪ್ರಯತ್ನವನ್ನು ಸಾರ್ತ್ರ್ ಇಲ್ಲಿ ಮಾಡಿದ್ದಾನೆ.

ಸಾರ್ತ್ರನ 'ಸ್ವಾತಂತ್ರ್ಯ'ಕ್ಕೆ ಮೂರು ಪರಿಮಿತಿಗಳಿವೆ ; ನಾವು, ಸ್ವಾತಂತ್ರ್ಯ ದಿಂದಲೇ ಸ್ವತಂತ್ರನಾಗಲು ಸಾಧ್ಯವಾಗದೇ ಇರುವುದು, ಹಾಗೂ 'ಇನ್ನಿತರರ' ಸ್ವಾತಂತ್ರ್ಯ. ಇವುಗಳಲ್ಲಿ ಮೂರನೆಯ ಪರಿಮಿತಿಯಿಂದ ಪ್ರಾರಂಭಿಸಿ ತನ್ನ 'ಗತಿ ತಾರ್ಕಿಕವಾದದ ಸಮಾಲೋಚನೆ' ಎಂಬ ಗ್ರಂಥದಲ್ಲಿ ಸಾರ್ತ್ರ ನಿಜವಾಗಿಯೂ ಸಾಮಾಜಿಕ ತತ್ವಚಿಂತನೆಯೊಂದನ್ನು ರೂಪಿಸುತ್ತಾನೆ. 'ಆಂಸ್ವಾ' ಮಾತ್ರವಲ್ಲ, 'ಅಭಾವ'ವೂ ಸಹ ಮಾನವನ ಸ್ವಾತಂತ್ರ್ಯಕ್ಕೆ ಮಿತಿಗಳನ್ನುಂಟುಮಾಡುತ್ತದೆ. ಮನುಷ್ಯರು ಮೊದಲು ಬರಿ 'ಅನುಕ್ರಮತೆ' ಮಾತ್ರ ಆಗಿರುತ್ತಾರೆ, ಉದಾಹರಣೆಗೆ ಬಸ್ಸಿಗಾಗಿ ಸಾಲಿನಲ್ಲಿ ನಿಂತಾಗ, ಹಾಗೂ ಅಭಾವವನ್ನು ದೂರಗೊಳಿಸಲು ಅವರು ಗುಂಪುಗಳಾಗಿ ಪರಿವರ್ತಿತರಾಗಬೇಕಾಗುತ್ತದೆ. (ಈ ರೀತಿಯ 'ಅನುಕ್ರಮತೆ' ಹಳ್ಳಿಗಾಡಿನ ಸಂದರ್ಭದಲ್ಲಿ ಸಾಧ್ಯವೇ ಎಂದು ಪ್ರಶ್ನಿಸಿ ಶ್ರೀಮತಿ ಮಾರ್ಗಾರೆಟ್ ಚಟರ್ಜಿಯವರು ಸಾರ್ತ್ರನನ್ನು ನಗರ-ಮೂಲ ಪ್ರಜ್ಞೆಯುಳ್ಳವ ಎಂದು ಟೀಕಿಸುತ್ತಾರೆ.) ಈ ಗುಂಪುಗಳಿಂದ ಕೊನೆಗೆ ಸಂಸ್ಥೆ ಹಾಗೂ ನೌಕರಶಾಹೀ ವರ್ಗಗಳು ಜನ್ಮ ತಳೆಯುತ್ತವೆ. ಹೀಗಾಗಿ ಕೊನೆಗೆ ಮಾನವ ಸ್ವಾತಂತ್ರ್ಯದಿಂದ ಪರಕೀಯನಾಗುತ್ತಾನೆ. ಈ ಪ್ರಕ್ರಿಯೆಯನ್ನು ಸಾರ್ತ್ರ, 'ಸಾಮಾಜಿಕ ಗತಿತಾರ್ಕಿತ ಶಾಸ್ತ್ರ' ಎನ್ನುತ್ತಾನೆ. ಅವನ 'ಗತಿತಾರ್ಕಿಕ ವಾದದ ಸಮಾಲೋಚನೆ' ಎಂಬ ಗ್ರಂಥದಲ್ಲಿ 'ವ್ಯಕ್ತಿಗತ ಮೂಲತತ್ವಶಾಸ್ತ್ರದಿಂದ ಸಮಾಜಶಾಸ್ತ್ರ ಹಾಗೂ ಸಾಮಾಜಿಕ ಮನಃಶಾಸ್ತ್ರಗಳ ಕಡೆಗೆ ಬದಲಾವಣೆಯನ್ನು ನಾವು ಕಾಣಬಹುದು.'[12] ಈ ರೀತಿ ಸಾರ್ತ್ರ ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಯ ವಿಷಯಗತ ಸ್ಥಿತಿಯನ್ನು ಉಳಿಸಿಕೊಂಡು ಬರುವಂತಹ ತತ್ವಚಿಂತನೆಯನ್ನು ರೂಪಿಸಲು ಪ್ರಯತ್ನಿಸುತ್ತಾನೆ. 'ಆತ ಮಾರ್ಕ್ಸ್ ವಾದವನ್ನು ಪುನರ್‌ನಿರ್ಮಿಸುತ್ತಾನೆ, ಹಾಗೂ ಮಾನವನ ಸ್ವಾತಂತ್ರ್ಯದ ಅಳತೆಗೋಲಿನಿಂದ ಅದಕ್ಕೆ ವಿವರಣೆ ನೀಡಲು ಪ್ರಯತ್ನಿಸುತ್ತಾನೆ.'[13] ಅಸ್ತಿತ್ವವಾದ ಹಾಗೂ ಮಾರ್ಕ್ಸ್‌ವಾದಗಳ ಈ ಸಮೀಕರಣದ ಪ್ರಯತ್ನದಲ್ಲಿ ಸಾರ್ತ್ರ ಎಷ್ಟರ ಮಟ್ಟಿಗೆ ಸಫಲನಾಗುತ್ತಾನೆ ಎಂಬುದು ವಿವಾದಾಸ್ಪದ ಹಾಗೂ ಈ ವಿವಾದವನ್ನು ಪರಿಹರಿಸಲು ಇನ್ನೂ ಆಳವಾದ ವಿಶ್ಲೇಷಣೆಯ ಆವಶ್ಯಕತೆ ಇದೆ.

ಅಸ್ತಿತ್ವವಾದ ಮತ್ತು ಸಾಹಿತ್ಯ

ಅಸ್ತಿತ್ವವಾದ ಯುರೋಪಿನಲ್ಲಿ ಎಷ್ಟು ಜನಪ್ರಿಯವೋ, ಅಷ್ಟೇ ಮಟ್ಟಿಗೆ ಅದರ ಬಗ್ಗೆ ತಪ್ಪು ತಿಳಿವಳಿಕೆಯೂ ಇದೆ. ಪ್ರಮುಖ ಅಸ್ತಿತ್ವವಾದಿ ಜ್ಯಾಂ-ಪಾಲ ಸಾರ್ತ್ರ್ ಪ್ಯಾರಿಸ್ಸಿನಲ್ಲಿ ಒಂದು ಸಲ ಮಾತನಾಡುತ್ತ "...ಈಗ ಈ ಶಬ್ದ ಎಷ್ಟು ಬಳಕೆಯಲ್ಲಿದೆ ಎಂದರೆ ಒಬ್ಬ ಸಂಗೀತಗಾರನ ಕೃತಿಯನ್ನು ಅಥವಾ ಚಿತ್ರಕಾರನ ಚಿತ್ರವನ್ನು ಸಹ 'ಅಸ್ತಿತ್ವವಾದಿ' ಎನ್ನಲಾಗುತ್ತದೆ"[1] ಎಂದು ತನ್ನ ವಿಷಾದ ವ್ಯಕ್ತ ಪಡಿಸಿದ. ಸಾಹಿತ್ಯ ಮಾತ್ರ ಅಸ್ತಿತ್ವವಾದಿಯಾಗಬಲ್ಲುದು, ಸಂಗೀತವಾಗಲೀ, ಚಿತ್ರ ವಾಗಲೀ ಅಲ್ಲ. ಏಕೆಂದರೆ "ಇಬ್ಬರೂ (ತತ್ವಚಿಂತಕ ಹಾಗೂ ಸಾಹಿತಿ) ಶಬ್ದ ಹಾಗೂ ವಸ್ತುಗಳ ಮಧ್ಯೆ ಮೂಲಭೂತವಾಗಿರುವ ಅಂತರವನ್ನು ಅನುಭವಿಸುತ್ತಾರೆ. ಚಿತ್ರಕಾರ ಹಾಗೂ ಶಿಲ್ಪಿ ಅರಿಯದ ಒಂದು ದ್ವಂದ್ವವನ್ನವರು ಅರಿತಿರುತ್ತಾರೆ."[2]

ಪ್ರಾಯಶಃ ಸಾಹಿತ್ಯವನ್ನು ಅಸ್ತಿತ್ವವಾದ ಆವರಿಸಿಕೊಂಡಷ್ಟು ಬೇರೆ ಯಾವ ತತ್ವಚಿಂತನೆಯೂ ಆವರಿಸಿಕೊಂಡಿಲ್ಲ. ಸಾಹಿತ್ಯ ಮತ್ತು ತತ್ವಚಿಂತನೆಗಳ ನಡುವಣ ಅಂತರವೇ ಸಾರ್ತ್ರ್‌ನಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ. ಇವನ 'ನಾಸಿಯ' ಕಾದಂಬರಿಯಲ್ಲಂತೂ ಈ ಅಂತರವೇ ಇಲ್ಲ. ಈ ಕಾದಂಬರಿಯನ್ನು ತತ್ವಚಿಂತನೆ ಎಂದಾಗಲೀ, ಸಾಹಿತ್ಯವೆಂದಾಗಲೀ ವಿಂಗಡಿಸುವುದು ಬಹಳ ಕಷ್ಟ. ಬಹುಶಃ ಇದಕ್ಕೆ ತತ್ವಚಿಂತಕ ಹಾಗೂ ಸಾಹಿತಿ ಇಬ್ಬರೂ ಶಬ್ದ ಹಾಗೂ ವಸ್ತುಗಳ ಮಧ್ಯದ ಅಂತರ ವನ್ನು ಅರ್ಥಮಾಡಿಕೊಂಡಿರುವುದೇ ಕಾರಣವಾಗಿರಬಹುದು. ಅವರಿಬ್ಬರೂ ವಸ್ತು ಮತ್ತು ಪ್ರಜ್ಞೆಯ ದ್ವಂದ್ವವನ್ನು ದಾಟಲು ಪ್ರಯತ್ನಿಸುತ್ತಾರೆ; ಹಾಗೂ ಅವುಗಳ ಮಧ್ಯೆ ಸಂಬಂಧವನ್ನು ಕಾಣದಾದಾಗ ಒಬ್ಬ ಶೂನ್ಯವನ್ನೂ ಇನ್ನೊಬ್ಬ ಅಸಂಗತತೆ ಯನ್ನೂ ಅನುಭವಿಸುತ್ತಾನೆ.

ಯುದ್ಧದಿಂದ ತತ್ತರಿಸಿದ ಯುರೋಪಿನಲ್ಲಿ ಅನುಭವ ಹಾಗೂ ವಾಸ್ತವತೆಗೆ ಸಂಬಂಧವೇ ಇಲ್ಲದಂತಾಗಿ ಜೀವನ 'ಅಸಂಗತ' ಹಾಗೂ ಅರ್ಥಹೀನವೂ ಆಗಿ ಕಾಣಿಸಿತು. ಧರ್ಮದ ಆಶ್ವಾಸನೆ ನಿಜವಾಗದೆ ಅದಕ್ಕಾಗಿ ಆಸೆ ಇಟ್ಟುಕೊಂಡಿರುವುದು ಅರ್ಥಹೀನ ಎನಿಸಿತು. ಹೀಗಾಗಿ ಬುದ್ಧಿಜೀವಿ ಯುರೋಪು ತತ್ವಚಿಂತಕ ನೀತ್ಸೆಯ 'ದೇವರು ಸತ್ತಿದ್ದಾನೆ' ಎಂಬ ನಾಸ್ತಿಕತೆಗೆ ಜೋತು ಬಿದ್ದಿತು. 'ಸುಖಾಂತ' ಹಾಗೂ 'ದುಃಖಾಂತ'ಗಳ ನಡುವಣ ಅಂತರ ಅರ್ಥಹೀನವಾಗಿ ಅದು ಬೆಕೆಟ್‌ನಲ್ಲಿ ಟ್ರ್ಯಾಜಿ-ಕಾಮೆಡಿಯಾಗಿ. ಅಯನೆಸ್ಕೋವಿನಲ್ಲಿ ಹಿಂಸೆಯ ರಂಗಭೂಮಿಯಾಗಿ ಪರಿಣಮಿಸಿತು.

ಅಸ್ತಿತ್ವವಾದ ಹಾಗೂ ಫ್ರಾಯಡ್‌ನ ಮನೋವಿಶ್ಲೇಷಣಾ ಸಿದ್ಧಾಂತಗಳು 'ವಿಚಾರ'ವೆಂಬ ಪರಿಕಲ್ಪನೆಯನ್ನು ಭಗ್ನಗೊಳಿಸಿದ್ದವು. ಭಾವನಾಪರ ಮಾನವ ವಿಚಾರಪರ ಮಾನವನಿಗಿಂತ ಅಗ್ರಸ್ಥಾನ ಪಡೆದ. "ಇದರಿಂದ ಪ್ರಜ್ಞೆ ಚೂರು ಚೂರಾಗಿ, ಅದರ ಪರಿಣಾಮವಾಗಿ ಪ್ರಜ್ಞೆ ಹಾಗೂ ಜಗತ್ತಿನ ನಡುವಣ ಸಂಬಂಧದ ಪ್ರಾತಿನಿಧಿಕ ದೃಷ್ಟಿಕೋಣ ಅಸಾಧ್ಯವಾಯಿತು."[3] ಕೋಪರ್ನಿಕಸ್‌ನ ಖಗೋಳ ಶಾಸ್ತ್ರದಲ್ಲಿಯ ಕ್ರಾಂತಿ ಸಾಹಿತ್ಯ ಹಾಗೂ ತತ್ವಶಾಸ್ತ್ರಗಳನ್ನು ವಿಶ್ವಕೇಂದ್ರಿತವನ್ನಾಗಿ ಮಾಡಿದಂತೆ, ಫ್ರಾನ್ಸಿನ ಆಕ್ರಮಣ ಹಾಗೂ ಪರಾಭವ ಅಲ್ಲಿ ಸಾಹಿತ್ಯವನ್ನು ಹಾಗೂ ತತ್ವಶಾಸ್ತ್ರವನ್ನು 'ಅಸ್ತಿತ್ವವಾದಿ'ಯನ್ನಾಗಿ ಮಾಡಿತು.

ಅಸ್ತಿತ್ವವಾದಿಗಳು ಸಾಹಿತ್ಯಕ್ಕೆ ಹಲವಾರು ವ್ಯಾಖ್ಯೆಗಳನ್ನು ನೀಡಿದ್ದಾರೆ. ಅವೆಲ್ಲವೂ ಸಾಹಿತ್ಯವನ್ನು ಸಮಗ್ರವಾಗಿ ಅಸ್ತಿತ್ವವಾದಿ ತತ್ವಚಿಂತನೆಯ ದೃಷ್ಟಿಯಿಂದ ವಿವರಿಸಲು ಮಾಡಿದ ಪ್ರಯತ್ನಗಳು. ಅಸ್ತಿತ್ವವಾದಿಗಳಿಗೆ ಜಗತ್ತನ್ನು ಅವಲೋಕಿಸಲು ಹಲವಾರು ಶಿಖರಸ್ಥಾನಗಳಿವೆ. "ಸಾಹಿತ್ಯ ಅಂತಹ ಶಿಖರಸ್ಥಾನಗಳಲ್ಲೊಂದು. ಹಾಗೂ ಸಾಹಿತ್ಯದ ಪ್ರಯೋಜನ, ಅದು ಎಷ್ಟರಮಟ್ಟಿಗೆ ವಾಸ್ತವಿಕ ಜಗತ್ತನ್ನು ನೋಡುತ್ತದೆ ಅಥವಾ ಕಾಲ್ಪನಿಕ ವಿಶ್ವವನ್ನು ನೋಡುತ್ತದೆ ಎಂಬುದರ ಮೇಲೆ ಅವಲಂಬಿಸುತ್ತದೆ."[4] ಗತ ಶತಮಾನಗಳ ಸಾಹಿತ್ಯ ವಿಶ್ವದ ಕಿಟಕಿ ನೋಟವನ್ನು ಮಾತ್ರ ತೋರಿಸುವುದರಿಂದ ಸಾರ್ತ್ರ್ ಅದನ್ನು "ಬರಿ ಕಣ್ಣಿನಿಂದ ಗ್ರಹಿಸಿದ ಹಾಗೆ, ಆದರೆ ನಿಜವಾಗಿಯೂ ಅನುಭವಿಸಿದ ಹಾಗಲ್ಲ..."[5] ಎಂದು ದೂಷಿಸಿದ್ದಾನೆ. ಮಾನವ ವಸ್ತುನಿಷ್ಠ ಪ್ರೇಕ್ಷಕ ಮಾತ್ರವಲ್ಲ, ಅವನು ಅನುಭವಿಸುತ್ತಾನೆ ಕೂಡ. ಅವನು 'ಜಗತ್ತಿನಲ್ಲಿ' ಇರುತ್ತಾನೆ. 'ಜಗತ್ತಿನ-ಮಧ್ಯೆ' ಅಲ್ಲ. ಅದು ಸಾರ್ತ್ರ್‌ನ ಪಾತ್ರಗಳ ಮೊದಲ ವೈಶಿಷ್ಟ್ಯ. ನಾಸಿಯ ಕಾದಂಬರಿಯ ರಾಕ್ವೆಂಟಿನ್ ಇದಕ್ಕೊಂದು ಉತ್ತಮ ಉದಾಹರಣೆ.

ನಾಸಿಯ, ವಾಸ್ತವಿಕತೆಯನ್ನು ದೃಷ್ಟಿಗೋಚರವಾದದ ನೆಲೆಯಿಂದ ನೋಡುವ ಒಂದು ಪ್ರಯತ್ನ; ಅಥವಾ ವಾಸ್ತವಿಕತೆಯನ್ನು 'ಜಗತ್ತಿನಲ್ಲಿ' ಇರುವವನಿಗೆ ಇಂದ್ರಿಯ ಗೋಚರವಾಗುವಂತೆ ತೋರಿಸುವ ಯತ್ನ. "ತಲೆಕೆಳಗಾದ ರಕ್ತಮಯ

ಬಾತು ಹೋಪ ಉಬ್ಬಿದ ಈ ದೊಡ್ಡ ಹೊಟ್ಟೆ, ಅದರೆಲ್ಲ ಸತ್ತ ಕಾಲುಗಳ ಜೊತೆಗೆ ಈ ಡಬ್ಬದಲ್ಲಿ ಈ ಬೂದು ಆಕಾಶದಲ್ಲಿ, ತೇಲುತ್ತಿರುವ ಈ ದೊಡ್ಡ ಹೊಟ್ಟೆ ಬರಿ ಬೆಂಚಲ್ಲ"[6] ಇದು ನಿಜವಾಗಿಯೂ ಬಸ್ಸಿನಲ್ಲಿಯ ಬೆಂಚಿನ ವಿವರಣೆ ರಾಕ್ವೆಂಟಿನ್‌ಗೆ ಕಾಣಿಸಿದಂತೆ. ನಾಸಿಯಿಂದ ರಾಕ್ವೆಂಟಿನ್ 'ಜಗತ್ತಿನಲ್ಲಿ' ಇರುವವ, 'ಜಗತ್ತಿನ-ಮಧ್ಯೆ' ಅಲ್ಲ.

'ಸ್ವಾತಂತ್ರ್ಯಕ್ಕೆ ದಾರಿಗಳು' ಎಂಬ ತನ್ನ ಕಾದಂಬರಿ ಸರಣಿಯಲ್ಲಿ ದ್ವಿತೀಯ ಕಾದಂಬರಿಯಾದ 'ದ ರಿಪ್ರೈವ್'ನಲ್ಲಿ ಸಾರ್ತ್ರ್‌ನ ಶೈಲಿ ಅರಿಸ್ಟಾಟಲ್‌ನ ಐಕ್ಯತೆ (Unity) ತತ್ವವನ್ನು ನಾಶಪಡಿಸುವುದೇ ಆಗಿದೆ. ಈ ಕಾದಂಬರಿಯ ಹಲವಾರು ಪ್ಯಾರಾಗಳಲ್ಲಿ ಎಷ್ಟೋ ಸಲ ಒಂದೊಂದೇ ವಾಕ್ಯಗಳಲ್ಲಿ ಹಲವಾರು ಸ್ಥಳಗಳ, ಹಲವಾರು ವ್ಯಕ್ತಿಗಳ ಹಾಗೂ ಹಲವಾರು ಸಮಯಗಳ ಉಲ್ಲೇಖವನ್ನು ಕಾಣಬಹುದು. ಸಾವಿರಾರು ಮೈಲಿ ದೂರದಲ್ಲಿರುವ ಪಾತ್ರಗಳು, ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳ ಬಗ್ಗೆ ಒಂದೇ ವಾಕ್ಯದಲ್ಲಿ ಮಾತನಾಡುತ್ತವೆ. ಮೊದಲ ನೋಟಕ್ಕೆ ಇದೆಲ್ಲವೂ ಅಸಂಬದ್ಧವಾಗಿ ಕಂಡರೂ ಇದು ಸಾರ್ತ್ರ್‌ನ ಮೂರ್ತ ಅಭಿವ್ಯಕ್ತಿಯ ಪ್ರಯತ್ನಕ್ಕೆ ಒಗ್ಗುವ ಪರಿಣಾಮಕಾರಿ ಶೈಲಿ.

ಸಾರ್ತ್ರ್‌ನ ಪಾತ್ರಗಳನ್ನು 'ಬೆನ್ನೆಲುಬಿಲ್ಲದವುಗಳು' ಎಂದು ಟೀಕಿಸಲಾಗುತ್ತಿತ್ತು. ಸಾರ್ತ್ರ್‌ನನ್ನು, "ಇವೆಲ್ಲ ಎಷ್ಟು ಹೇಳಿದರೂ ಬೆನ್ನೆಲುಬಿಲ್ಲದ ಪಾತ್ರಗಳು ಹೇಡಿಗಳು, ಇಂಥ ಪಾತ್ರಗಳಿಂದ ನೀವು ಕಥಾನಾಯಕನನ್ನು ಹೇಗೆ ನಿರ್ಮಿಸಬಲ್ಲಿರಿ" ಎಂದು ಕೇಳಲಾಗುತ್ತಿತ್ತು. ಇವರಿಗೆ ಸಾರ್ತ್ರ್, "ಈ ಥರದ ಮಾತಿನಿಂದ ನನಗೆ ನಗು ಬರುತ್ತದೆ. ಏಕೆಂದರೆ ಈ ಟೀಕೆಯ ಹಿಂದೆ ಇರುವುದು ಮನುಷ್ಯರು ಹುಟ್ಟು ನಾಯಕರಾಗಿರುತ್ತಾರೆ ಎಂಬ ಪೂರ್ವನಿಶ್ಚಿತ ಕಲ್ಪನೆ"[7] ಎಂದು ಉತ್ತರಿಸುತ್ತಾನೆ. ಮನುಷ್ಯ ಹುಟ್ಟುವಾಗಲೇ ಶೂರ ಅಥವಾ ಹೇಡಿ ಆಗಿರುವುದಿಲ್ಲ. ಅವನ ಅಸ್ತಿತ್ವಕ್ಕಿಂತ ಮುಂಚೆ ಅವನ ಸತ್ವವನ್ನು ರೂಪಿಸಲು ದೇವರು ಇಲ್ಲವಾದುದರಿಂದ ಅವನು ಮೊದಲು ಮನುಷ್ಯ, ನಂತರ ಶೂರ ಅಥವಾ ಹೇಡಿ. ನಾಜಿಗಳೊಡನೆ ಹೋರಾಡಲು ನಿರ್ಧರಿಸುವುದರ ಮೂಲಕ ಆತ ಶೂರನಾಗುತ್ತಾನೆ, ಅಥವಾ ಹೋರಾಡದಿರಲು ನಿರ್ಧರಿಸುವುದರ ಮೂಲಕ ಹೇಡಿಯಾಗುತ್ತಾನೆ. ಸಾರ್ತ್ರ್‌ನ ಪಾತ್ರಗಳಿಗೆ ಮುಕ್ತನಾಗಿ ಆಯ್ಕೆಮಾಡುವ, 'ಆಗುವ'ಸಾಧ್ಯತೆ ಇದೆ, ಸಾರ್ತ್ರ್‌ನ ಮಾತಿನಲ್ಲೇ ಹೇಳುವುದಾದರೆ 'ಆವಿಷ್ಕರಿಸುವ' ಯೋಗ್ಯತೆ ಮೂಲಭೂತವಾಗಿದೆ. ಈ ಪಾತ್ರಗಳು ಶೇಕ್ಸಪಿಯರನ ಶೈಲಾಕ್‌ನಂತಲ್ಲ. 'ದ ಫ್ಲೈಸ್'ನ ಒರೆಸ್ಟಸ್‌ನಂತೆ. "ಓ, ನೀನು ಹೇಗೆ ಬದಲಾಗಿದ್ದೀಯ . . . . ಆದರೆ ಈಗ ನೀನು ನನ್ನ ಕನಸಿನ ಒರೆಸ್ಟಸ್ಸಿನಂತೆ ಮಾತನಾಡುತ್ತಿದ್ದೀಯ".[8] ಒರೆಸ್ಟಸ್ಸಿನ ತನ್ನನ್ನು ತಾನೇ ಬದಲಿಸಿಕೊಳ್ಳುವ ಈ ಶಕ್ತಿಯನ್ನು ಎಲೆಕ್ಟ್ರಾ ಸ್ಪಷ್ಟವಾಗಿ ಗುರುತಿಸುತ್ತಾಳೆ. ಸಾರ್ತ್ರ್‌ನ ಪಾತ್ರಗಳು

ಹೇಡಿಗಳಂತೆ ಕಂಡರೂ ಅವು ಶೂರರಾಗಬಲ್ಲವು, ಅವುಗಳು ತಮ್ಮನ್ನು ತಾವೇ ಬದಲಾಯಿಸಿಕೊಳ್ಳಬಲ್ಲವು. 'ದ ರಿಪ್ರೈವ್' ಕಾದಂಬರಿಯ ಮ್ಯಾಥ್ಯೂವಿನಂತೆ ತಮ್ಮ ಸ್ವಾತಂತ್ರ್ಯವನ್ನು ತಾವೇ ಸಾಧಿಸಿಕೊಳ್ಳಬಲ್ಲವು. ಆದ್ದರಿಂದ ಸಾರ್ತ್ರ್‌ನಲ್ಲಿ "ಸಿದ್ಧ ಪಾತ್ರಗಳೆಂಬುವಿಲ್ಲ, ಅವನ ನಾಯಕರೆಲ್ಲ ನಿರ್ದಿಷ್ಟ ಗುಣಬದ್ಧರಲ್ಲ"[9]. ಆದುದರಿಂದ "ಸಾಹಿತ್ಯ ಸ್ವಾತಂತ್ರ್ಯವನ್ನು ಧ್ಯೇಯವನ್ನಾಗಿಸಿಕೊಂಡ ಒಂದು ಮುಕ್ತ ಸ್ಥಿತಿ."[10].

"ಬರಹಗಾರನಿಗೆ–ಸ್ವತಂತ್ರ ವ್ಯಕ್ತಿಗಳನ್ನು ಉದ್ದೇಶಿಸುತ್ತಿರುವ ಸ್ವತಂತ್ರ ವ್ಯಕ್ತಿಗೆ–ಇರುವುದು ಒಂದೇ ಒಂದು ವಿಷಯ–ಸ್ವಾತಂತ್ರ್ಯ".[11] "ಆದರೆ ಸಮಾಜದ ವಾಸ್ತವಿಕ ರಚನೆ ದಮನಪರವಾದುದರಿಂದ ಕಾದಂಬರಿಕಾರ ತನ್ನ ಓದುಗರಿಗೆ ಬಿಡುಗಡೆಯ ದಾರಿಗಳನ್ನು ಮಾತ್ರ ತೋರಿಸಬಲ್ಲ".[12] ಆದುದರಿಂದಲೇ ಸಾರ್ತ್ರ್‌ನ ಕಾದಂಬರೀ ಸರಣಿಯ ಹೆಸರು 'ಬಿಡುಗಡೆಯ ದಾರಿಗಳು'. ಸಾರ್ತ್ರ್ ಬರಹಗಾರನ ಈ ಸ್ವಾತಂತ್ರ್ಯದ ಕರೆಯನ್ನು ಸಾಹಿತ್ಯದಲ್ಲಿ ಬರಹಗಾರನ ನಿಷ್ಠೆ ಎಂದು ಕರೆಯುತ್ತಾನೆ. "ಇನ್ನು ನಾವು ಜಗತ್ತನ್ನು ವಶಪಡಿಸಿಕೊಳ್ಳಬೇಕೆನ್ನುವವರ ಜೊತೆ ಇಲ್ಲ, ಜಗತ್ತನ್ನು ಬದಲಿಸಬೇಕೆನ್ನುವವರ ಜೊತೆ"[13] ಎಂದು ಘೋಷಿಸಿದ್ದಾನೆ. ಆದುದರಿಂದ 'ಬರಹಗಾರ ಅಂತಿಮ ಧ್ಯೇಯವಾದ ಸಮಾಜವಾದಿ ಪ್ರಜಾಪ್ರಭುತ್ವದ ಸಾಧನೆಗಾಗಿ ಬರೆಯಬೇಕು', ಏಕೆಂದರೆ "ವರ್ಗರಹಿತ ಸಮಾಜ ಸಾಹಿತ್ಯವನ್ನು ಮುಕ್ತಗೊಳಿಸುತ್ತದೆ"[14]. ಈ ರೀತಿ ಅಸ್ತಿತ್ವವಾದದಲ್ಲಿ "ವಿವರಣಾತ್ಮಕ ಹಾಗೂ ಕಥಾತ್ಮಕ ಸಾಹಿತ್ಯದ ಪ್ರಾಚೀನ ಕಲ್ಪನೆಯಿಂದ ಸ್ವಾತಂತ್ರ್ಯದ ನಿಶ್ಚಿತ ಯೋಜನೆಯಲ್ಲಿ ತೊಡಗಿದ ಕ್ರಿಯಾತ್ಮಕ ಸಾಹಿತ್ಯದವರೆಗಿನ ಪರಿವರ್ತನೆ"[15]ಯನ್ನು ಕಾಣುತ್ತೇವೆ.

ಈ ರೀತಿ ಸಾಹಿತ್ಯ ಸ್ವಾತಂತ್ರ್ಯದ ಒಂದು ವಿಸ್ತರಣೆ. "ಪ್ರತಿಯೊಂದು ಪುಸ್ತಕ ಒಂದು ನಿರ್ದಿಷ್ಟ ಪರಕೀಯತೆಯಿಂದ ವಿಮೋಚನೆಯನ್ನು ಸಾಧಿಸುವ ಗುರಿ ಇಟ್ಟುಕೊಂಡಿರುತ್ತದೆ".[16] ಬಿಳಿಯರ ಬಗ್ಗೆ ತೀವ್ರ ದ್ವೇಷದಿಂದ ಕೂಡಿದ ನಿಗ್ರೋನ ಒಂದು ಕಾದಂಬರಿ ನೀಗ್ರೋಗಳ ಮುಕ್ತಿಗೆ ಕರೆ ನೀಡುವುದರಿಂದ ಒಂದು ಒಳ್ಳೆಯ ಕಾದಂಬರಿ. "ಈ ರೀತಿ ಕಾದಂಬರಿಗಳಲ್ಲಿ ಒಳ್ಳೆಯ ಹಾಗೂ ಕೆಟ್ಟ ಕಾದಂಬರಿಗಳು ಮಾತ್ರ ಇರುತ್ತವೆ. ಕೆಟ್ಟ ಕಾದಂಬರಿಗಳು ಹೊಗಳಿಕೆಯ ಮೂಲಕ ಆನಂದಪಡಿಸುವ ಗುರಿಯನ್ನು ಇಟ್ಟುಕೊಂಡಿರುತ್ತವೆ. ಆದರೆ ಒಳ್ಳೆಯ ಕಾದಂಬರಿ ಒತ್ತಡವುಳ್ಳ ಹಾಗೂ ಶ್ರದ್ಧೆಯ ಒಂದು ಕೃತಿ".[17]

ಸಾರ್ತ್ರ್ ಸಾಹಿತ್ಯದ ಬಗ್ಗೆ ಸಾಮಾನ್ಯವಾಗಿ ಮಾತನಾಡುವಾಗ ಗದ್ಯದ ಬಗ್ಗೆ ಮಾತನಾಡುತ್ತಾನೆ, ಕಾವ್ಯದ ಬಗ್ಗೆ ಅಲ್ಲ. ಕಾವ್ಯದ ಬಗ್ಗೆ ಸಾರ್ತ್ರ್‌ನ ವಿಚಾರಗಳು ಪ್ಲೇಟೋವಿನ ವಿಚಾರಗಳಂತೆಯೇ. "ಕಾವ್ಯ ಬರಿ ಕಲ್ಪನೆಯ, ಅವಾಸ್ತವಿಕದ, ಅಸತ್ಯದ ಜಗತ್ತು", "ಯಾವ ಕಾಲದಲ್ಲೇ ಆಗಲಿ ಕವಿಯ ಕೆಲಸ ಮಾನವನ ದಂತ ಕತೆ

ಯನ್ನು ಸೃಜಿಸುವುದು."[18] ಆದುದರಿಂದ ಸಾರ್ತ್ರ್ ಕಾವ್ಯವನ್ನು ತ್ಯಜಿಸಿ ಗದ್ಯದಲ್ಲಿ ಬರೆಯುತ್ತಾನೆ. ಯಾವುದೇ ಕಾದಂಬರಿ ಸಾಮಾಜಿಕ ಕ್ರಿಯೆಯ ಕಾದಂಬರಿಯಾಗಿರಬೇಕಾದರೂ, ಅದೊಂದು ವೈಯಕ್ತಿಕ ಪರ್ಯಾಲೋಚನೆಯ ಒಂದು ಉದಾಹರಣೆ. ಆದುದರಿಂದ ಸಾರ್ತ್ರ್ ಕಾದಂಬರಿಗಳನ್ನೂ ತ್ಯಜಿಸಿ ಇನ್ನೂ ಕ್ರಿಯಾಶಾಲಿ ಮಾಧ್ಯಮವಾದ ನಾಟಕವನ್ನು ಆಯ್ದುಕೊಳ್ಳುತ್ತಾನೆ. "ಕಾದಂಬರಿಯ 'ಕ್ರಿಯೆ' ಯನ್ನು ಓದುಗ ಮಾತ್ರ ಕಲ್ಪನೆ ಮಾಡುತ್ತಾನೆ. ಆದರೆ ನಾಟಕದಲ್ಲಿ 'ಕ್ರಿಯೆ' ನಟನ ಅಭಿನಯದಲ್ಲಿ ಸೇರಿ ಹೋಗಿರುತ್ತದೆ. ನಟ ತನ್ನ ಅಭಿನಯದ ಮೂಲಕ ತಾನು ಅಭಿನಯಿಸುತ್ತಿರುವ ಪಾತ್ರದೊಂದಿಗೆ ಸಾಮರಸ್ಯವನ್ನು ಹೊಂದುತ್ತಾನೆ, ಹಾಗೂ ಆ ಪಾತ್ರವನ್ನು ಪ್ರೇಕ್ಷಕರು ತಿಳಿದುಕೊಳ್ಳುತ್ತಾರೆ".[19] ಸಾರ್ತ್ರ್‌ನು ಕಾದಂಬರಿಗಳಿಗಿಂತ ಹೆಚ್ಚು ನಾಟಕಗಳನ್ನು ರಚಿಸಿರುವುದನ್ನು ನಾವು ಕಾಣುತ್ತೇವೆ. ಅವನ 'ಸ್ವಾತಂತ್ರ್ಯದ ದಾರಿಗಳು' ಕಾದಂಬರೀ ಸರಣಿಯಲ್ಲಿಯ ನಾಲ್ಕನೆಯ ಕಾದಂಬರಿ ಇನ್ನೂ ಬಂದಿಲ್ಲ. (ಅವನ ಕೊನೆಯ, ಅಂದರೆ ಸರಣಿಯ ಮೂರನೆಯ ಕಾದಂಬರಿ 'ಅಯರ್ನ್ ಇನ್ ದ ಸೋಲ್' ಪ್ರಕಾಶಿತವಾದದ್ದು 1949 ರಲ್ಲಿ).

ಸಾಹಿತ್ಯದಲ್ಲಿ ಕಾರ್ಯ ಕಾರಣ ವಿಧಾನವಿಲ್ಲ; ಅಂತಿಮತೆ ಮಾತ್ರ ಇದೆ. ಆದುದರಿಂದ ಬರಹಗಾರ ತನ್ನದೇ ಕೃತಿಯನ್ನು 'ಓದಲು' ಸಾಧ್ಯವಿಲ್ಲ. ಏಕೆಂದರೆ ಏನು ಬರೆಯಲಾಗಿದೆ ಎಂಬುದು ಅವನಿಗೆ ಗೊತ್ತಿರುತ್ತದೆ. ಸಾರ್ತ್ರ್‌ನ ಸೌಂದರ್ಯತತ್ವವು ತತ್ವಚಿಂತಕ ಕಾಂಟನ 'ಅಂತಿಮತಾವಾದ' ಹಾಗೂ ಕ್ರೋಚೆಯ 'ಸಹಯೋಗ' ವಾದ ಇವುಗಳ ಸಮೀಕರಣ. ಸಾಹಿತ್ಯಕ್ಕೆ ಓದುಗನ ಸಹಕಾರ ಅಗತ್ಯ. ಏಕೆಂದರೆ ಬುಗುರಿ ಚಲನೆಯಲ್ಲಿ ಮಾತ್ರವೇ ಜೀವಿಸುವಂತೆ ಸಾಹಿತ್ಯ ಓದಿನಲ್ಲಿ ಮಾತ್ರವೇ ಜೀವಿಸುತ್ತದೆ. ಹಾಗೂ ಬರಹಗಾರ ಹೇಳುವುದನ್ನು ನಂಬಲು ಅಥವಾ ಬಿಡಲು ಓದುಗ ಸ್ವತಂತ್ರನಾದುದರಿಂದ ಸಾಹಿತ್ಯ-ಬರಹಗಾರನ ಮನದಲ್ಲಿ ಸೃಷ್ಟಿಯಾದುದನ್ನು ಪುನಃ ಸೃಷ್ಟಿಸಲು ಓದುಗನ ಸ್ವಾತಂತ್ರ್ಯಕ್ಕೆ ಬರಹಗಾರ ನೀಡುವ ಕರೆ. "ಬರಹಗಾರ ತನ್ನ ಕೃತಿಯ ಅನುಸೃಷ್ಟಿಗೆ ಸಹಕರಿಸಲು ಓದುಗನ ಸ್ವಾತಂತ್ರ್ಯಕ್ಕೆ ಕರೆ ನೀಡುತ್ತಾನೆ".[20] ಓದುವಿಕೆ ಇಲ್ಲದಿದ್ದರೆ ಸಾಹಿತ್ಯ ಅಪೂರ್ಣ, ಅದು ಓದಿನಲ್ಲಿ ತನ್ನ ಸಾರ್ಥಕತೆಯನ್ನು ಪಡೆಯುತ್ತದೆ. 1964ರಲ್ಲಿ ತನಗೆ ನೀಡಲಾದ ಸಾಹಿತ್ಯ ಕ್ಷೇತ್ರದ ಸರ್ವಶ್ರೇಷ್ಠ ಪುರಸ್ಕಾರವಾದ ನೊಬೆಲ್ ಪುರಸ್ಕಾರವನ್ನು ತಿರಸ್ಕರಿಸಿ, ಸಾರ್ತ್ರ್, "ನನಗೆ ಹಾಗೂ ಯಾವುದೇ ಅಕೆಡಮಿಗಾಗಲೀ, ಬಹುಮಾನಕ್ಕೇ ಆಗಲಿ ಸಂಬಂಧವಿದೆ ಎಂದು ನಾನು ಭಾವಿಸಿಲ್ಲ. ನಾನು ಬರೆದುದನ್ನು ಓದುವುದೇ ನನಗೆ ಕೊಡಬಹುದಾದ ಶ್ರೇಷ್ಠ ಮರ್ಯಾದೆ ಎಂದು ನಾನು ಭಾವಿಸುತ್ತೇನೆ"[21] ಎಂದ. ಈ ಮಾತು ಸಾರ್ತ್ರ್‌ನಿಗೆ ಮಾತ್ರವಲ್ಲ, ಅಸ್ತಿತ್ವವಾದದ ದೃಷ್ಟಿಕೋನದಲ್ಲಿ ಎಲ್ಲ ಸಾಹಿತ್ಯಕ್ಕೂ ಅನ್ವಯಿಸುತ್ತದೆ.

ಅಸ್ತಿತ್ವವಾದಿ ಮನೋವಿಶ್ಲೇಷಣೆ

"ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ ಸಾಹಿತ್ಯ ಹಾಗೂ ತತ್ವಜ್ಞಾನದ ಮೇಲೆ ಅತಿ ಶಕ್ತಿಯುತ ಪ್ರಭಾವ ಬೀರಿದವ ಯಾವ ಸಾಹಿತಿಯಾಗಲೀ, ತತ್ವಚಿಂತಕನಾಗಲೀ ಅಲ್ಲ, ಮನೋವೈಜ್ಞಾನಿಕ ಸಿಗ್ಮಂಡ್‌ಫ್ರಾಯಡ್. ಈಗ ಸಾಹಿತ್ಯ ಹಾಗೂ ತತ್ವಚಿಂತನೆ, ಸಾರ್ತ್ರ 'ಅಸ್ತಿತ್ವವಾದಿ ಮನೋವಿಶ್ಲೇಷಣೆ' ಎಂದು ಕರೆಯುವ ಮನೋವಿಶ್ಲೇಷಣೆಯನ್ನು ರೂಪಿಸುವುದರ ಮೂಲಕ ಆ ಉಪಕಾರ ತೀರಿಸುತ್ತಿವೆ"[1]. ಸಾಹಿತಿ ಹಾಗೂ ತತ್ವಚಿಂತಕನಾದ ಸಾರ್ತ್ರ ಈ ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಬುನಾದಿ ಹಾಕಿದ್ದಾನೆ. ನಿಜವಾಗಿಯೂ ನೋಡಿದರೆ ಅಸ್ತಿತ್ವವಾದಿ ಮನೋವಿಶ್ಲೇಷಣೆಯನ್ನೇ ಅಸ್ತಿತ್ವವಾದ ಎನ್ನುತ್ತಾರೆಯೇ ಹೊರತು, ಎಲ್ಲರೂ ಭಾವಿಸುವಂತೆ ಅಸ್ತಿತ್ವವಾದಿ ಚಿಂತನೆಯನ್ನಲ್ಲ. ಅಸ್ತಿತ್ವವಾದಿ ಮನೋವಿಶ್ಲೇಷಣೆ ಎಂದರೆ, ದೃಷ್ಟಿಗೋಚರವಾದ ಮತ್ತು ಅಸ್ತಿತ್ವವಾದಿ ತತ್ವಚಿಂತನೆಯನ್ನು ಅನ್ವಯಿಸಲಾದ ಮನೋವಿಶ್ಲೇಷಣೆ.

"ಮಾನವನ ಸತ್ಯ ಒಂದು ವೇಳೆ......ತಾನು ಅರಸುವ ಗುರಿಗಳ ಮೂಲಕ ತನ್ನನ್ನು ನಿರ್ವಚಿಸಿಕೊಳ್ಳುವುದಾದರೆ, ಆ ಗುರಿಗಳ ವರ್ಗೀಕರಣ ಹಾಗೂ ವಿಚಾರಣೆ ಅನಿವಾರ್ಯವಾಗುತ್ತದೆ"[2]. ಈ ವಿಚಾರಣೆಯ ಹಾಗೂ ವರ್ಗೀಕರಣದ ಕಾರ್ಯವನ್ನು ಅಸ್ತಿತ್ವವಾದಿ ಮನೋವಿಶ್ಲೇಷಣೆ ವಹಿಸಿಕೊಳ್ಳುತ್ತದೆ. ಸಾಹಿತಿ ಫ್ಲಾಬರ್‌ನ ಮನಃಸ್ಥಿತಿಯನ್ನು ವಿಶ್ಲೇಷಿಸಲು ಪ್ರಯತ್ನಿಸುವ ಅನುಭವವಾದಿ ಮನೋವಿಶ್ಲೇಷಣೆಯ ಒಂದು ಪ್ರಯತ್ನವನ್ನು ಉದಾಹರಿಸುತ್ತ ಸಾರ್ತ್ರ, ಅನುಭವವಾದಿ ಮನೋವಿಶ್ಲೇಷಣೆ ವ್ಯರ್ಥ ಎಂದು ತೋರಿಸುತ್ತಾನೆ. ಅಮೂರ್ತ ಸರ್ವಸಾಮಾನ್ಯ ವಿಧಾನಗಳ ಪರಸ್ಪರ ಸಂಬಂಧದಿಂದ ಒಂದು ವೈಯಕ್ತಿಕ ಸತ್ಯ ಉತ್ಪತ್ತಿಯಾಗುತ್ತದೆ, ಇದು ಅನುಭವವಾದಿ ಮನೋವಿಶ್ಲೇಷಣೆಯ ಮೂಲ ಆಧಾರ. ಆದುದರಿಂದ ಫ್ಲಾಬರ್‌ನ

ಸಾಹಿತ್ಯದಲ್ಲಿಯ ಅಭಿರುಚಿ ಹಲವು ಅಮೂರ್ತ ಸಾಂಕೇತಿಕ ಇಚ್ಛೆಗಳ ಸಮಾಕರಣ ಮಾತ್ರವಾಗುತ್ತದೆ. ಆದುದರಿಂದ ಈ ಮನೋವಿಶ್ಲೇಷಣೆಯಲ್ಲಿ ಮೂರ್ತಕ್ಕಿಂತ ಅಮೂರ್ತ ಮೊದಲು. ಆದರೆ ಅಸ್ತಿತ್ವವಾದದಲ್ಲಿ ಅಮೂರ್ತಕ್ಕಿಂತ ಮೂರ್ತ ಮೊದಲು. ಅನುಭವವಾದಿ ಮನೋವಿಶ್ಲೇಷಣೆಯಲ್ಲಿ, 'ಚಿತ್ರಕಲೆ ಅಥವಾ ಸಂಗೀತ ಬಿಟ್ಟು ಸಾಹಿತ್ಯದ ಕಡೆಗೇ ಫ್ಲಾಬರ್ ಏಕೆ ವಾಲುತ್ತಾನೆ', ಎಂಬ ಪ್ರಶ್ನೆಗೆ ಉತ್ತರವಿಲ್ಲ. 'ಆದರೂ ಇದನ್ನು ಮನೋವಿಶ್ಲೇಷಣೆ ಎನ್ನಲಾಗುತ್ತದೆ' ಎಂದು ಮೂದಲಿಸುತ್ತಾನೆ ಸಾರ್ತ್ರ್.

ಸಾರ್ತ್ರ್ ಅನುಭವವಾದಿ ಮನೋವಿಶ್ಲೇಷಣೆಯ ಎರಡು ಅಪಾಯಕರ ಸ್ಥಿತಿಗಳ ಬಗ್ಗೆ ನಮ್ಮನ್ನು ಎಚ್ಚರಿಸುತ್ತಾನೆ. "ಮೊದಲನೆಯದಾಗಿ, ಅನುಭವಾದಿ ಮನೋವಿಶ್ಲೇಷಕ ಮಾನವನನ್ನು ಅವನ ಇಚ್ಛೆಗಳ ಆಧಾರದಮೇಲೆ ಪರಿಕಲ್ಪಿಸುವಾಗ ಮೂರ್ತ ಪದಾರ್ಥದ ಮರೀಚಿಕೆಗೆ ಬಲಿಯಾಗುತ್ತಾನೆ. ಮಾನವನಲ್ಲಿ ಇಚ್ಛೆ, ಪ್ರಜ್ಞೆಯು 'ವಸ್ತು'ವಾಗಿ ಇರುತ್ತದೆ ಎಂದು ಅವನು ಭಾವಿಸುತ್ತಾನೆ[2]". ಅನುಭವವಾದಿ ಮನೋವಿಶ್ಲೇಷಣೆಯ ಈ ಮೂಲ ಕಲ್ಪನೆಯನ್ನು ಸಾರ್ತ್ರ್ ತಿರಸ್ಕರಿಸುತ್ತಾನೆ. ಏಕೆಂದರೆ ಪ್ರಜ್ಞೆ ಯಾವಾಗಲೂ "ಯಾವುದಾದರೂ" ವಸ್ತುವಿನ ಪ್ರಜ್ಞೆಯೇ ಆಗಿರುವುದರಿಂದ ಪ್ರಜ್ಞೆಯು ವಸ್ತು ಎಂಬುದು ಇರಲು ಸಾಧ್ಯವಿಲ್ಲ. ಆದ್ದರಿಂದ ಸಾರ್ತ್ರ್ ಕೇಳುತ್ತಾನೆ; "ನಾನು ಒಂದು ಮನೆಯನ್ನು ಅಥವಾ ಒಂದು ಲೋಟ ನೀರನ್ನು ಅಥವಾ ಒಂದು ಹೆಂಗಸಿನ ಶರೀರವನ್ನು ಬಯಸಿದರೆ, ಈ ಶರೀರ, ಲೋಟ, ಮನೆ ನನ್ನ 'ಬಯಕೆಯಲ್ಲಿ' ಇರಲು ಹೇಗೆ ಸಾಧ್ಯ. ಹಾಗೂ ನನ್ನ ಬಯಕೆ ಈ ವಸ್ತುಗಳ 'ಬಯಸಲು ಯೋಗ್ಯ' ವೆಂಬ ಪ್ರಜ್ಞೆಯೇ ಹೊರತು ಬೇರೇನೂ ಅಲ್ಲ"[2] ಎರಡನೆಯದಾಗಿ, ಬಯಕೆಗಳ ಒಂದು ಮೂರ್ತವಲಯ ತಲುಪಿದಾಗ ಈ ವಿಶ್ಲೇಷಣೆ ನಿಂತು ಹೋಗುತ್ತದೆ. ಹೀಗಾಗಿ "ಮಾನವನನ್ನು ಅನುಭವವಾದಿ ಅವಲೋಕನದಿಂದ ಸಿದ್ಧಪಡಿಸಲು ಸಾಧ್ಯವಾದ ಬಯಕೆಗಳ ಅಥವಾ ಪ್ರವೃತ್ತಿಗಳ ವಲಯ ಮಾತ್ರ ಮಾನವ"[2] ಎಂದು ಅದು ಮಾನವನನ್ನು ನಿರ್ವಚಿಸುತ್ತದೆ. ಆದರೆ ಅಸ್ತಿತ್ವವಾದ ಮಾನವನನ್ನು ಒಂದು ಅಸ್ತಿತ್ವವೆಂದು ಪರಿಭಾವಿಸುವ ಕಾರಣದಿಂದ ಅನುಭವವಾದಿ ಮನೋವಿಶ್ಲೇಷಣೆ ಅಸ್ತಿತ್ವವಾದದ ಬೇಡಿಕೆಯನ್ನು ಪೂರ್ಣಗೊಳಿಸುವುದಿಲ್ಲ. ''ಬರಿ ಪ್ರವೃತ್ತಿಗಳ, ಮನೋಭಾವಗಳ, ವ್ಯವಹಾರಗಳ, ಮಾದರಿಗಳ ಸೂಚಿಯೊಂದನ್ನು ತಯಾರಿಸುವುದರಿಂದ ಪ್ರಯೋಜನವಿಲ್ಲ, ಅವುಗಳನ್ನು ಅವುಗಳ ಒಳಗುಟ್ಟನ್ನು ಅರ್ಥಮಾಡಿಕೊಳ್ಳಬೇಕು''[3]. ಈ ಪ್ರವೃತ್ತಿಗಳ, ಮನೋಭಾವಗಳ, ವ್ಯವಹಾರಗಳ ಮಾದರಿಗಳ ಒಳ ಗುಟ್ಟನ್ನು ಅರ್ಥ ಮಾಡಿಕೊಳ್ಳುವುದೇ ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಗುರಿ. ''ಮಾನವ ತನ್ನನ್ನು ಮಾನವನನ್ನಾಗಿ ಮಾಡಿಕೊಳ್ಳಲು ಆಧಾರವನ್ನಾಗಿ ಮಾಡುವ ವ್ಯಕ್ತಿಗತ ಆಯ್ಕೆಗಳನ್ನು ವಸ್ತುಗತ

ವಾಗಿ ಪ್ರಕಟಪಡಿಸುವ ಒಂದು ವಿಧಾನವೇ ಅಸ್ತಿತ್ವವಾದಿ ಮನೋವಿಶ್ಲೇಷಣೆ''.[4] ಹಾಗೂ "ಈ ಮನೋವಿಶ್ಲೇಷಣೆಯ ಅಧ್ಯಯನದ ಪರಿಮಿತಿಯಲ್ಲಿ ಬರಿ ಕನಸುಗಳು, ಜುಗುಪ್ಸೆ, ತೀವ್ರ ಆಸಕ್ತಿ ಹಾಗೂ ನರಗಳ ಅಸ್ವಸ್ಥತೆ ಮಾತ್ರವೇ ಇರುವುದಿಲ್ಲ. ಜಾಗ್ರತ ಸ್ಥಿತಿಯಲ್ಲಿಯ ವಿಚಾರಗಳು, ಸಫಲವಾದ ಹೊಂದಾಣಿಕೆಗಳೂ ಸಹ ಒಳಗೊಂಡಿರುತ್ತವೆ.''[5]

'ಅನುಭವ' ಅಸ್ತಿತ್ವವಾದಿ ತತ್ವಚಿಂತನೆಯ ಪ್ರಾರಂಭ ಬಿಂದು. ಅದೇ ರೀತಿ ಅದು ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಪ್ರಾರಂಭ ಬಿಂದು ಕೂಡ. "ಅದರ ಮೂಲ ಆಧಾರ ಸ್ತಂಭ, ಮೂಲಭೂತ, ಮೂಲತತ್ವಪೂರ್ವದ ಮಾನವನ ವ್ಯಕ್ತಿತ್ವದ ಗ್ರಹಿಕೆ.''[3] ಅತಿ ಮಹತ್ವವಿಲ್ಲದಂತೆ ಕಾಣುವ ಶಬ್ದಗಳು, ಸನ್ನೆಗಳು ಮೊದಲಾದವುಗಳ ವ್ಯಕ್ತಿತ್ವ ಪ್ರಕಟಗೊಳಿಸುವ ಶಕ್ತಿಯ ಅನುಭವಪೂರ್ವದ ಒಂದು ಅರ್ಥವನ್ನು ಮಾನವ ಪಡೆದಿರುತ್ತಾನೆ, ಹಾಗೂ ಅವುಗಳ ವ್ಯಾಖ್ಯೆಯನ್ನು ಆತ ಮಾಡಬಲ್ಲ. ಈ ಮನೋವಿಶ್ಲೇಷಣೆ ಮಾನವನನ್ನು ಒಂದು ಸಮಗ್ರತೆ ಎಂದು ಭಾವಿಸುತ್ತದೆಯೇ ಹೊರತು ಸಮಷ್ಟಿ ಎಂದಲ್ಲ. ಹಾಗೂ ಮಹತ್ವವಿಲ್ಲದಂತಿರುವ ಅವನ ನಡತೆಯ ಮೂಲಕವೂ ಈ ಸಮಗ್ರತೆಯನ್ನು ನಾವು ಗ್ರಹಿಸಬಹುದು. ಮಾನವನ ಬೇರೆ ಬೇರೆ ನಡತೆಗಳನ್ನು ತುಲನೆ ಮಾಡುವುದರ ಮೂಲಕ ಅವನ ಸಮಗ್ರತೆಯನ್ನು ಗ್ರಹಿಸುವ ಫ್ರಾಯಡ್ ಹಾಗೂ ಅವನ ಅನುಯಾಯಿಗಳು ರೂಪಿಸಿದ ಈ ತುಲನಾತ್ಮಕ ರೀತಿಯನ್ನೇ ಸಾರ್ತ್ರ ತನ್ನ ಅಸ್ತಿತ್ವವಾದಿ ಮನೋವಿಶ್ಲೇಷಣೆಯಲ್ಲಿ ಅನುಸರಿಸುತ್ತಾನೆ. ಮಾನವ ಸ್ವತಂತ್ರ ಎನ್ನುವುದು ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಮೊದಲ ಮೂಲಭೂತ ಹಾಗೂ ಪ್ರತ್ಯೇಕ ತತ್ವ. ಅದು ಅನುವಂಶಿಕತೆ, ಮಾನವನ ಚಾರಿತ್ರ್ಯ ಇವೇ ಮೊದಲಾದ ಅನುಭವಪೂರ್ವ ಕಲ್ಪನೆಗಳನ್ನು ನಿರಾಕರಿಸುತ್ತದೆ. ಅದು ಅಸ್ತಿತ್ವಕ್ಕಿಂತ ಮೊದಲು ಇನ್ನಾವುದೂ ಇಲ್ಲ ಎಂದು ಭಾವಿಸುತ್ತದೆ. ಮಾನವ ಮುಕ್ತ ಹಾಗೂ ಅವನ ಆಯ್ಕೆಗಳು ಆಧಾರರಹಿತವಾದುವು; ಆದುದರಿಂದ ಪರಿಸರ ಯಾಂತ್ರಿಕವಾಗಿ ಅವನ ಮೇಲೆ ಪ್ರಭಾವ ಬೀರುತ್ತದೆ ಎನ್ನುವುದು ಸರಿಯಲ್ಲ. ಆದರೂ ಅವನು ಪರಿಸರವನ್ನು ಸಾರ್ತ್ರ 'ಸನ್ನಿವೇಶ' ಎನ್ನುವ ಸ್ಥಿತಿಯಲ್ಲಿ ಪರಿವರ್ತಿಸುತ್ತಾನೆ, ಹಾಗೂ ಅಷ್ಟರಮಟ್ಟಿಗೆ ಅದರಿಂದ ಪ್ರಭಾವಿತನಾಗುತ್ತಾನೆ. ಹಾಗಿದ್ದರೂ ಸಹ ಅಸ್ತಿತ್ವವಾದಿ ಮನೋವಿಶ್ಲೇಷಣೆಯಲ್ಲಿ ಪರಿಸರದ ವಸ್ತುನಿಷ್ಠ ವಿವರಣೆಯ ಅವಶ್ಯಕತೆಯಿಲ್ಲ. ಮಾನವನ ರೂಪುಗೊಳ್ಳುವ ಸಾಧ್ಯತೆಯನ್ನು ಇತಿಹಾಸಕ್ಕಿಂತ ಮೊದಲಿನ ರೂಪುಗೊಳ್ಳದ ಮೇಣ ಎನ್ನುವಾಗ ಅನುಭವವಾದಿ ಮನೋವಿಶ್ಲೇಷಣೆಯೂ ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಇದೇ ವಿಚಾರಕ್ಕೆ ಬಹಳ ಹತ್ತಿರ ಬರುತ್ತದೆ. ಆದರೆ ಇದರ ಅರ್ಥ ಅಸ್ತಿತ್ವವಾದಿ ಮನೋವಿಶ್ಲೇಷಣೆ ಮಾನವನನ್ನು ಅವನ ಪರಿಸರದ ಹೊರತಾಗಿ ಭಾವಿಸುತ್ತದೆ ಎಂದಲ್ಲ. ಮಾನವನನ್ನು

ಅರ್ಥಮಾಡಿಕೊಳ್ಳಲು ಸಮಗ್ರ ಪರಿಸರವನ್ನು ದೃಷ್ಟಿಯಲ್ಲಿಟ್ಟುಕೊಳ್ಳಲೇಬೇಕು ಎನ್ನುತ್ತದೆ.

ಆಯ್ಕೆ ಆಧಾರರಹಿತವಾದದ್ದು ಎನ್ನಲಾಗುತ್ತದೆ, ಅಂದರೆ ಆಯ್ಕೆಗೆ ಯಾವುದಾದರೂ ಆಧಾರ ಇದ್ದಲ್ಲಿ, ಅದೂ ಸಹ ಮಾನವನಿಂದಲೇ ಆಯ್ಕೆ ಮಾಡಲಾಗಿದ್ದೇ; ಯಾವುದಾದರೂ ಸನ್ನಿವೇಶ ಆಯ್ಕೆಯ ಆಧಾರಕ್ಕೆ ಸಹಾಯಕವಾಗಿದ್ದರೆ ಅಂತಹ ಸನ್ನಿವೇಶ ಸಹ ಅವನಿಂದ ಆಯ್ಕೆ ಮಾಡಲಾದದ್ದೇ. ಈ ರೀತಿ ವಿಚಾರ ಮಾಡುತ್ತ ಹೋದರೆ ನಾವು ಯಾವುದೇ ಆಧಾರವೂ ಇಲ್ಲದ ಒಂದು ಮೂಲಭೂತ ಮುಕ್ತ ಆಯ್ಕೆಗೆ ಬಂದು ತಲುಪುತ್ತೇವೆ. ಈ ಮೂಲಭೂತ ಆಯ್ಕೆ ಎಲ್ಲ ತರ್ಕಕ್ಕೂ ಪೂರ್ವದ್ದು. ಅಸ್ತಿತ್ವವಾದಿ ಮನೋವಿಶ್ಲೇಷಣೆ ಇದೇ ಮೂಲಭೂತ ಆಯ್ಕೆಯನ್ನು ನಿರ್ದಿಷ್ಟಪಡಿಸಲು ಪ್ರಯತ್ನಿಸುತ್ತದೆ. ಅನುಭವವಾದಿ ಮನೋವಿಶ್ಲೇಷಣೆ ನಿರ್ದಿಷ್ಟಪಡಿಸಲು ಪ್ರಯತ್ನಪಡುವ ಮನೋಗ್ರಂಥಿಯೂ ಸಹ ತರ್ಕಪೂರ್ವದ್ದಾದುದರಿಂದ, ಅಷ್ಟರಮಟ್ಟಿಗೆ ಇವೆರಡೂ ಮನೋವಿಶ್ಲೇಷಣೆಗಳು ಸಾದೃಶ್ಯವೆನ್ನಬಹುದು.

ಅಸ್ತಿತ್ವವಾದಿ ಮನೋವಿಶ್ಲೇಷಣೆಯ ಎರಡನೆಯ ಮೂಲಭೂತ ಹಾಗೂ ಪ್ರತ್ಯೇಕ ತತ್ವವೆಂದರೆ ಸುಪ್ತ ಚೇತನವನ್ನು ಅಲ್ಲಗಳೆಯುವುದು. ಇದಕ್ಕೆ ತದ್ವಿರುದ್ಧವಾಗಿ ಅನುಭವವಾದಿ ಮನೋವಿಶ್ಲೇಷಣೆ ಸುಪ್ತ ಚೇತನದ ಕಾಲ್ಪನಿಕ ಅಸ್ತಿತ್ವದ ಮೇಲೆಯೇ ಆಧಾರಿತವಾಗಿದೆ. ಈ ಸುಪ್ತ ಚೇತನವು ಮಾನವನ ಪ್ರಜ್ಞೆಯಿಂದ ಕೂಡಿದ ಕಾರ್ಯಗಳನ್ನು ಪೂರ್ವನಿಶ್ಚಿತಪಡಿಸುವುದರಿಂದ ಅದು ಅಸ್ತಿತ್ವವಾದದ ಸತ್ವಕ್ಕಿಂತ ಅಸ್ತಿತ್ವ ಮೊದಲು ಎನ್ನುವ ಮೂಲತತ್ವಕ್ಕೆ ತದ್ವಿರುದ್ಧ ತತ್ವವಾಗುತ್ತದೆ. ಸಾರ್ತ್ರ ಇಲ್ಲಿ ಪ್ರಶ್ನೆಗಳ ಸುರಿಮಳೆ ಮಾಡುತ್ತಾನೆ. ''ಮನೋಗ್ರಂಥಿ ಒಂದು ವೇಳೆ ನಿಜವಾಗಿಯೂ ಸುಪ್ತ ಚೇತನೆಯಲ್ಲಿಯೇ ಇರುವುದಾದರೆ, ಅಂದರೆ ಸಂಕೇತವನ್ನು ಹಾಗೂ ಸಂಕೇತದ ವಸ್ತುವನ್ನು ಬೇರ್ಪಡಿಸುವ ಗೋಡೆ ಒಂದು ಇದ್ದಲ್ಲಿ –ಪ್ರಜ್ಞೆ ಅದನ್ನು ಹೇಗೆ ಗುರುತಿಸಲು ಸಾಧ್ಯ? ಸುಪ್ತ ಚೇತನ ಮನೋಗ್ರಂಥಿ ತನ್ನನ್ನು ತಾನೇ ಗುರುತಿಸಿಕೊಳ್ಳುವುದೇ? ಆದರೆ ಅದಕ್ಕೆ ಅರ್ಥಮಾಡಿಕೊಳ್ಳುವ ಶಕ್ತಿ ಇಲ್ಲವೆಂದು ಹೇಳಲಾಗುವುದಿಲ್ಲವೆ? ಸಂಕೇತಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇದೆ ಎಂದು ಒಂದು ವೇಳೆ ಭಾವಿಸಿದ್ದೇ ಆದಲ್ಲಿ, ಅದನ್ನು ಸುಪ್ತ ಚೇತನ ಪ್ರಜ್ಞೆಯನ್ನಾಗಿ ಮಾಡಿದಂತಾಗುವುದಿಲ್ಲವೆ?''[6] ಇದಕ್ಕೂ ಹೆಚ್ಚಾಗಿ ಸುಪ್ತ ಚೇತನೆಯ ಅಸ್ತಿತ್ವವಾದರೂ ಹೇಗೆ ಸಾಧ್ಯ? ಫ್ರಾಯಿಡ್ ದಮನ ಹಾಗೂ ರೋಧಕ ಗ್ರಂಥಿ ಎಂದು ಕರೆಯುವ ಮಾನಸಿಕ ಸ್ಥಿತಿಗಳನ್ನು ಸಾರ್ತ್ರ ಪೂರ್ತಿ ಅಲ್ಲಗಳೆಯುತ್ತಾನೆ. ರೋಧಕ ಗ್ರಂಥಿ ಹಲವು ಮಾನಸಿಕ ಪ್ರವೃತ್ತಿಗಳನ್ನು ಪ್ರಜ್ಞಾಯುತವಾಗಲು ಬಿಡುತ್ತದೆ, ಹಾಗೂ ಬೇರೆ ಹಲವು ಪ್ರವೃತ್ತಿಗಳನ್ನು

ಹಾಗಾಗಲು ಬಿಡುವುದಿಲ್ಲ ಎಂದು ಹೇಳಿದರೆ ಒಗಟುಗಳಲ್ಲಿ ಮಾತನಾಡಿದ ಹಾಗಾಗುತ್ತದೆ. ದಮನ ಕಾರ್ಯದ ಹಾಗೂ ದಮನ ಮಾಡಲ್ಪಡುವ ಪ್ರವೃತ್ತಿಗಳ ಪ್ರಜ್ಞೆ ಇಲ್ಲದೆಯೇ ರೋಧಕ ಗ್ರಂಥಿ ಪ್ರವೃತ್ತಿಗಳನ್ನು ಆ ಕಾರ್ಯಕ್ಕಾಗಿ ಆಯ್ದುಕೊಳ್ಳಲು ಹೇಗೆ ತಾನೇ ಸಾಧ್ಯ ? ಆದುದರಿಂದ ಸಾರ್ತ್ರನಿಗೆ ರೋಧಕ ಶಕ್ತಿ ಒಂದು ಕೆಟ್ಟ ನಂಬಿಕೆ ಮಾತ್ರ. ನಮಗೆ ದಮನ ಕಾರ್ಯದ ಹಾಗೂ ದಮನ ಮಾಡಲಾದ ಪ್ರವೃತ್ತಿಗಳ ಪ್ರಜ್ಞೆ ಇದ್ದೇ ಇರುತ್ತದೆ. ಆದರೂ ನಾವು ಅವು ಸುಪ್ತ ಚೇತನೆಯಲ್ಲಿ ಇರುತ್ತವೆ ಎಂದು ಹೇಳುತ್ತೇವೆ. ಹೀಗಾಗಿ ಮೋಸ ಮಾಡುವವರೂ ನಾವೇ, ಮೋಸ ಹೋಗುವವರೂ ನಾವೇ. ಈ ಕಾರಣಗಳಿಂದಾಗಿ ಅಸ್ತಿತ್ವವಾದಿ ಮನೋವಿಶ್ಲೇಷಣೆ ಸುಪ್ತ ಚೇತನೆಯ ಕಲ್ಪನೆಯನ್ನೇ ನಿರಾಕರಿಸುತ್ತದೆ. "ಮಾನಸಿಕ ಕೃತಿಯನ್ನು ಅದು ಪ್ರಜ್ಞೆಯೊಂದಿಗೆ ಸಹ ಅಸ್ತಿತ್ವವುಳ್ಳದ್ದನ್ನಾಗಿ ಮಾಡುತ್ತದೆ."[7]

ಆದರೆ ಫ್ರಾಯಿಡ್‌ನ ಈಡಿಪಸ್ ಕಾಂಪ್ಲೆಕ್ಸನ್ನಾಗಲೀ, ಆ್ಯಡ್ಲರನ ಕೀಳರಿಮೆ ಮನೋಗ್ರಂಥಿಯನ್ನಾಗಲೀ, ಅಥವಾ ನೀತ್ಸೆಯ ಅಧಿಕಾರೀ ಸಂಕಲ್ಪವನ್ನಾಗಲೀ ಸಾರ್ತ್ರ ಪೂರ್ತಿಯಾಗಿ ನಿರಾಕರಿಸುವುದಿಲ್ಲ. ಅವುಗಳನ್ನು ಇನ್ನೂ ಮೂಲಭೂತ ಪ್ರವೃತ್ತಿಗಳಲ್ಲಿ ವಿಭಜಿಸಲು ಅಸಾಧ್ಯ ಎಂಬ ಭಾವನೆಯನ್ನು ಮಾತ್ರ ನಿರಾಕರಿಸುತ್ತಾನೆ. ಹಾಗೆ ನೋಡಿದರೆ ಸಾರ್ತ್ರನೇ ಎಕ್ಟಿಯನ್* ಹಾಗೂ ಜೋನಾಹ್** ಎಂಬೆರಡು ಮನೋಗ್ರಂಥಿಗಳನ್ನು ಮನೋಗ್ರಂಥಿಗಳ ಸೂಚಿಗೆ ಸೇರಿಸಿದ್ದಾನೆ ಎನ್ನಲಾಗುತ್ತದೆ. ಯಾವುದೇ ಮನುಷ್ಯ ಕೀಳುತನದ ಮನೋಭಾವನೆಯಿಂದ ವ್ಯಥೆಪಡುತ್ತಿದ್ದರೆ ಅದೂ ಅವನ ಆಯ್ಕೆಯೇ. ತನ್ನ ಆಯ್ಕೆಯ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಮನುಷ್ಯ ಕೀಳುತನದ ಭಾವನೆಯನ್ನು ಅಪ್ಪುತ್ತಾನೆ ಎನ್ನುತ್ತಾನೆ ಸಾರ್ತ್ರ. ಹೀಗಾಗಿ ಆ ಮನುಷ್ಯ ಕೆಟ್ಟ ನಂಬಿಗೆಯ ಜೀವನ ನಡೆಸುತ್ತಾನೆ. ಫ್ರಾಯಿಡ್ ಹೇಳುವ ಕಾಮವಾಂಛೆ ಅಥವಾ ಆ್ಯಡ್ಲರ ಹೇಳುವ ಕೀಳುತನದ ಭಾವನೆಗಳು ಮೂಲಭೂತ ಪ್ರವೃತ್ತಿಗಳಾಗಿದ್ದು ಮನುಷ್ಯ ಬಾಲ್ಯದಲ್ಲಿಯೇ ಅವುಗಳಿಗೆ ಅಂಟಿಕೊಳ್ಳುವುದಾದರೆ, ಅವನ ಭವಿಷ್ಯ ಪೂರ್ವ ನಿಶ್ಚಿತವಾಗಿ ಬಿಡುತ್ತದೆ. ಆದುದರಿಂದ ಈ ಮನೋಗ್ರಂಥಿಗಳು ಅಸ್ತಿತ್ವವಾದಿ ಮನೋವಿಶ್ಲೇಷಣೆ ನಿರ್ದಿಷ್ಟಪಡಿಸಬೇಕೆನ್ನುವ ಮೂಲಭೂತ ಆಯ್ಕೆ, ಅಥವಾ ಮೂಲಭೂತ ಯೋಜನೆಗಳಾಗುವುದಿಲ್ಲ. "ಕಾಮವಾಂಛೆ ಅಥವಾ ಅಧಿಕಾರೀ ಸಂಕಲ್ಪ ಎಂದರೆ ಅದು ವಾಸ್ತವಿಕವಾಗಿ ಮಾನಸಿಕ–ಜೈವಿಕ ಸತ್ವಶೇಷ. ಆದರೆ ಅದು ತನ್ನಲ್ಲಿಯೇ ಅಸ್ಪಷ್ಟವಾಗಿರುತ್ತದೆ; ಹಾಗೂ 'ಅವಿಭಾಜ್ಯ ಮೂಲ'ಕ್ಕಿಂತ ಪೂರ್ವದ ಅಸ್ತಿತ್ವದಂತೆಯೂ ನಮಗೆ ಅದು ಕಾಣಿಸುವುದಿಲ್ಲ."[7]

ಮಾನವ ಶರೀರದಲ್ಲಿರುವ ರಂಧ್ರಗಳ ಬಗ್ಗೆ ಮಕ್ಕಳಿಗೆ ಇರುವ ಆಸಕ್ತಿಯನ್ನು ಅನುಭವವಾದಿ ಮನೋವಿಶ್ಲೇಷಣೆ ಅವುಗಳ ಯೌನಾಸಕ್ತಿ ಎಂದು ವಿವರಿಸು

ತ್ತದೆ. ಮಕ್ಕಳ ಯೌನಾಸಕ್ತಿಯಲ್ಲಿ ಪ್ರಥಮಾವಸ್ಥೆ ಬಾಯಿಗೆ ಸಂಬಂಧಿಸಿದ್ದು ಹಾಗೂ ದ್ವಿತೀಯಾವಸ್ಥೆ ಗುದದ್ವಾರಕ್ಕೆ ಸಂಬಂಧಿಸಿದ್ದು ಎಂದು ಫ್ರಾಯಿಡ್ ಹೇಳುತ್ತಾನೆ. ಆದರೆ ಸೆಕ್ಸ ಬಗ್ಗೆ ಸಾರ್ತ್ರನ ವಿಚಾರಗಳೇ ಬೇರೆ. ನಮಗೆ ಗುಹ್ಯ ಅಂಗಗಳಿರುವುದರಿಂದ ನಾವು ಯೌನಾಸಕ್ತಿಯನ್ನು ಪಡೆದಿರುವುದಿಲ್ಲ, ನಮಗೆ ಯೌನಾಸಕ್ತಿ ಇರುವುದರಿಂದ ನಮಗೆ ಗುಹ್ಯಾಂಗಗಳು ಇರುತ್ತವೆ ಎನ್ನುತ್ತಾನೆ ಸಾರ್ತ್ರ. ಆದ್ದರಿಂದ ಯೌನಾಸಕ್ತಿ ಮನುಷ್ಯನಲ್ಲಿ ಪ್ರಾಥಮಿಕವಾದುದು. ಆದುದರಿಂದಲೇ ಹೆಂಗಸರಲ್ಲಿ ಋತುಬಂಧವಾದನಂತರವೂ ಯೌನಾಸಕ್ತಿ ಇದ್ದೇ ಇರುತ್ತದೆ. ಮಗು ಮೊದಲು 'ಇದ್ದು' ನಂತರ 'ಆಗು'ವುದರಿಂದ ಸ್ವಂತ ಅನುಭವಕ್ಕಿಂತ ಮೊದಲು ಆ ಮಗುವಿಗೆ ತಂದೆ ತಾಯಿಗಳ ಅನುಭವದ ಪರಿಣಾಮದಿಂದಾಗಿ 'ಪಿತ್ರಾರ್ಜಿತ'ದಂತೆ ಯೌನಾಸಕ್ತಿ ಬರುವುದಿಲ್ಲ, ಆದ್ದರಿಂದ ಸಾರ್ತ್ರನ ಪ್ರಕಾರ ಮಗು ತನ್ನ ಶರೀರದಲ್ಲಿರುವ ರಂಧ್ರಗಳಲ್ಲಿ ಶೂನ್ಯತೆಯನ್ನು ಅನುಭವಿಸುವುದರಿಂದಾಗಿ ಅವುಗಳಲ್ಲಿ ಆಸಕ್ತಿ ಹೊಂದುತ್ತದೆ.

ಮನೋವಿಶ್ಲೇಷಣೆಯ ಉದ್ದೇಶ್ಯ ಸುಪ್ತ ಚೇತನದಲ್ಲಿ ಅಡಗಿರುವ, ದಮನ ಮಾಡಲಾದ, ಅವರೋಧಿಸಲಾದ ಪ್ರವೃತ್ತಿಗಳನ್ನು ಪ್ರಜ್ಞಾಸ್ಥಿತಿಗೆ ತರುವುದು. ಆದುದರಿಂದ ಅಸ್ತಿತ್ವವಾದಿ ಮನೋವಿಶ್ಲೇಷಣೆ ಸುಪ್ತ ಚೇತನೆಯನ್ನೇ ಅಲ್ಲಗಳೆಯುವುದಾದರೆ, ಅಂತಹ ಮನೋವಿಶ್ಲೇಷಣೆಯ ಉದ್ದೇಶ್ಯವಾದರೂ ಏನು ಎಂಬುದು ಅನುಭವವಾದಿ ಮನೋವಿಶ್ಲೇಷಕರ ಪ್ರಶ್ನೆ.

ಪ್ರಜ್ಞೆ ಹಾಗೂ ಜ್ಞಾನಗಳ ನಡುವೆ ಭೇದ ಕಲ್ಪಿಸುವುದರ ಮೂಲಕ ಸಾರ್ತ್ರ ಈ ಪ್ರಶ್ನೆಗೆ ಉತ್ತರಿಸುತ್ತಾನೆ. ದೆಕಾರ್ತನ 'ಪ್ರಜ್ಞೆ' ಪರ್ಯಾಲೋಚಿಸುತ್ತಿರುವ ಪ್ರಜ್ಞೆ. ಇಲ್ಲಿ ಜ್ಞಾನ ಪ್ರಥಮಿಕ. ಆದರೆ ಸಾರ್ತನ ಪ್ರಕಾರ ಪ್ರಜ್ಞೆ ಪರ್ಯಾಲೋಚನಾಪೂರ್ವದ್ದು. ಇಲ್ಲಿ ಪ್ರಜ್ಞೆ ಪ್ರಾಥಮಿಕ; ಜ್ಞಾನ ನಂತರದ್ದು. ಆದುದರಿಂದ ಒಬ್ಬ ಮನುಷ್ಯ ತನ್ನ ಜೀವನದ ಮೂಲಭೂತ ಯೋಜನೆಯನ್ನು ಪ್ರಜ್ಞಾಪೂರ್ವಕವಾಗಿ ನಿರ್ವಹಿಸಿದರೂ ಅದರ ಅರ್ಥ, ಅವನು ಅದನ್ನು ಜ್ಞಾನಪೂರ್ವಕವಾಗಿ ನಿರ್ವಹಿಸುತ್ತಾನೆ ಎಂದೇನಲ್ಲ.

ಅಸ್ತಿತ್ವವಾದಿ ಮನೋವಿಶ್ಲೇಷಣೆ ಅಸ್ತಿತ್ವವಾದಿ ತತ್ವಚಿಂತನೆಯಂತೆ ಇನ್ನೂ ಪೂರ್ಣ ವಿಜ್ಞಾನವಾಗಿ ರೂಪಗೊಂಡಿಲ್ಲ. ಅದಿನ್ನೂ ವಿಕಾಸಸ್ಥಿತಿಯಲ್ಲಿದೆ. ಸಾರ್ತ್ರನೂ ಸಹ ಅದಕ್ಕೆ ಮೂಲ ನೆಲೆಗಟ್ಟನ್ನು ಒದಗಿಸದೇ, ಅದರ ರೇಖಾಚಿತ್ರವನ್ನು ಮಾತ್ರ ಒದಗಿಸುತ್ತಾನೆ. ಆದರೂ ಈ ಮನೋವಿಶ್ಲೇಷಣೆಗೆ ಭವಿಷ್ಯ ಇದೆಯೆಂದು ಸಾರ್ತ್ರನಿಗೆ ಗೊತ್ತು. ಆದುದರಿಂದ ಆತ ಹೇಳುತ್ತಾನೆ : ''ಈ ಮನೋವಿಶ್ಲೇಷಣೆ ಇನ್ನೂ ತನ್ನ ಫ್ರಾಯಿಡ್‌ನನ್ನು ಪಡೆದಿಲ್ಲ. ಬಹಳೆಂದರೆ ಹಲವು ಸಾರ್ಥಕ ಜೀವನ ಚರಿತ್ರೆಗಳಲ್ಲಿ ಅದರ ಪೂರ್ವ ರೂಪವನ್ನು ಮಾತ್ರ ಕಾಣಬಹುದು. ಬೇರೆ ಕಡೆಗೆ ನಾನು ಫ್ಲಾಬರ್ ಹಾಗೂ ದೋಸ್ತೋವ್‌ಸ್ಕಿಯರ ಜೀವನ ಚರಿತ್ರೆಗಳ ಮೂಲಕ ಇದನ್ನು

ಪ್ರಯತ್ನಿಸಬೇಕೆಂದಿದ್ದೇನೆ. ಆದರೆ ಇದು ಈಗ ಅಸ್ತಿತ್ವದಲ್ಲಿದೆ ಅಥವಾ ಇಲ್ಲ ಎನ್ನುವುದು ನಮಗೆ ಮುಖ್ಯವಲ್ಲ. ಈ ಮನೋವಿಶ್ಲೇಷಣೆಯೂ ಸಾಧ್ಯ ಎನ್ನುವುದೇ ಮುಖ್ಯ".[9] ವಿಜ್ಞಾನದಲ್ಲಿ ತಾತ್ವಿಕವಾಗಿ ಸಾಧ್ಯವಾದದ್ದು ಅಸ್ತಿತ್ವದಲ್ಲೂ ಇರುತ್ತದೆ ಎಂಬುದು ಸರ್ವ ವಿದಿತ.

ಅಸ್ತಿತ್ವವಾದ ಮತ್ತು ನೈತಿಕತೆ

"ಒಬ್ಬ ಮಹಿಳೆ ಮಾತನಾಡುತ್ತ ಕೋಪದ ರಭಸದಲ್ಲಿ ಒಂದು ಅಶ್ಲೀಲ ಶಬ್ದವನ್ನು ಉಪಯೋಗಿಸಿ, 'ಬಹುಶಃ ನಾನೂ ಅಸ್ತಿತ್ವವಾದಿಯಾಗುತ್ತಿದ್ದೇನೋ ಏನೋ?' ಎಂದು ಹೇಳಿ ಜಾರಿಕೊಂಡಳೆಂದು ಇತ್ತೀಚೆಗೆ ನನಗಾರೋ ಒಬ್ಬರು ಹೇಳಿದರು..."[1] ಎಂದು ಸಾರ್ತ್ರ್ ಪ್ಯಾರಿಸ್ಸಿನಲ್ಲಿ ಒಂದು ಸಲ ತನ್ನ ಭಾಷಣದಲ್ಲಿ ಹೇಳಿ, "ಅಸ್ತಿತ್ವವಾದವನ್ನು ಅಸಹ್ಯವಾದುದೆಂದು ಭಾವಿಸಲಾಗುತ್ತಿದೆ" ಎಂದು ವ್ಯಥೆಪಟ್ಟ. ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಮೌಲ್ಯಗಳನ್ನು ನಿರ್ಧರಿಸಲು ದೇವರು ಎನ್ನುವ ಮಾನದಂಡ ಇಲ್ಲದೇ ಹೋದಲ್ಲಿ ನೈತಿಕ ಮೌಲ್ಯಗಳ ಪ್ರಶ್ನೆ ಬಹಳ ತೊಡಕಿನದಾಗುತ್ತದೆ. ಆದರೆ ದೇವರಿಲ್ಲ ಎಂಬ ಆಧಾರದಮೇಲೆ ಯಶಸ್ವಿಯಾಗಿ ನೈತಿಕ ವ್ಯವಸ್ಥೆಯನ್ನು ಹಲವಾರು ಜನ ರೂಪಿಸಿದ್ದಾರೆ. ಉದಾಹರಣೆಗೆ ಭಾರತದಲ್ಲಿ ಗೌತಮಬುದ್ಧ. ಅಸ್ತಿತ್ವವಾದ ನಾಸ್ತಿಕವಾದಿಯಾಗಿರುವುದರ ಜೊತೆಗೆ ಮೂಲತತ್ವಶಾಸ್ತ್ರದ ಮೇಲೆ ಆಧಾರಿತವಾಗಿದೆ. ಹಾಗೂ ಸಾರ್ತ್ರ್ ಮೊದಲು ಅಸ್ತಿತ್ವವಾದೀ ತತ್ವಚಿಂತಕ, ಆದುದರಿಂದ ಅವನು ಮೊದಲು ಅಸ್ತಿತ್ವವಾದಿ ಮೂಲತತ್ವವನ್ನು ನಿರೂಪಿಸುತ್ತಾನೆ. ಆದರೆ "ಮೂಲತತ್ವದಮೇಲೆ ಆಧಾರಿತವಾದ ಮಾನವನ ಸತ್ಯದ ನಿರೂಪಣೆಯಿಂದ ನೈತಿಕ ನಿರೂಪಣೆಗೆ ಬದಲಾವಣೆ ಅಪಾಯಕಾರಿಯಾಗಬಹುದು."[2] ಸಾರ್ತ್ರ್‌ನಿಗೂ ಈ ಪರಿಮಿತಿಯ ತಿಳಿವು ಇದೆ. "ಬರಿ ಮೂಲ ತತ್ವಗಳು ನೈತಿಕ ಮೌಲ್ಯಗಳನ್ನು ರೂಪಿಸಲಾರವು, ಅವು ಮಾತ್ರ 'ಏನು ಇದೆ' ಎಂಬುದಕ್ಕೆ ಸಂಬಂಧಪಟ್ಟವುಗಳು, ಹಾಗೂ ಬಹುಶಃ ಮೂಲತತ್ವಗಳ ಸೂಚಕಗಳಿಂದ ನೈತಿಕತೆಯನ್ನು ಪಡೆಯಲಾಗದು."[3] ಎಂದು ಸಾರ್ತ್ರ್ ಒಪ್ಪುತ್ತಾನೆ. ಆದರೆ ದೇವರ ಬಗ್ಗೆ ಉದಾಸೀನನಾಗಿದ್ದಂತೆ ನೈತಿಕತೆಯ ಬಗ್ಗೆ ಸಾರ್ತ್ರ್ ಉದಾಸೀನನಲ್ಲ. ಮೂಲತತ್ವಶಾಸ್ತ್ರವೂ ನೈತಿಕ ಪರಿಣಾಮಗಳಿಂದ ಹೊರತಲ್ಲ. ಆದುದರಿಂದ ಮೂಲತತ್ವಶಾಸ್ತ್ರ "ಒಂದು ಪರಿಸ್ಥಿತಿಯಲ್ಲಿ ಮಾನವೀಯ ಸತ್ಯವನ್ನು ಎದುರಿಸಿದಾಗ

ಎಂತಹ ನೈತಿಕ ಮೌಲ್ಯಗಳು ಮಹತ್ವ ಪಡೆಯುತ್ತವೆ ಎಂಬುದರ ಇಣುಕು ನೋಟ ವನ್ನು ಅದು ಒದಗಿಸುತ್ತದೆ."[4] ಆದರೆ ನೈತಿಕತೆಯ ಪರಿಪೂರ್ಣ ವ್ಯವಸ್ಥೆಯೊಂದನ್ನು ಸಾತ್ರ್ ಕಲ್ಪಿಸುವುದಿಲ್ಲ. ನೈತಿಕತೆಯ ಬಗ್ಗೆ ಅವನಿಗಿರುವ ವಿಚಾರಗಳನ್ನು ಅವನ ಸಾಹಿತ್ಯಿಕ ಹಾಗೂ ತಾತ್ವಿಕ ಬರವಣಿಗೆಗಳಿಂದ ಹಾಗೂ ಮುಖ್ಯವಾಗಿ ಪ್ಯಾರಿಸ್ಸಿನಲ್ಲಿ ಆತ ಮಾಡಿದ ಒಂದು ಭಾಷಣದಿಂದ ಸಂಗ್ರಹಿಸಬಹುದು.

ಆಸ್ತಿಕನಿಗೆ ದೇವರೇ ನೈತಿಕ ಮೌಲ್ಯಗಳ ಅಳತೆಗೋಲು. ಆದರೆ ಯಾವ 'ದೇವರು' ಎಂಬ ಅಳತೆಗೋಲಿನಿಂದ ಮಾನವ ನೈತಿಕ ಹಾಗೂ ಅನೈತಿಕ ಇವುಗಳ ನಡುವೆ ಭೇದ ಕಲ್ಪಿಸಲು ಸಾಧ್ಯವೋ, ಅಂತಹ ದೇವರು ಇಲ್ಲ ಎಂದಾಗ ಆ ರೀತಿ ಭೇದ ಕಲ್ಪಿಸುವುದು ಕಷ್ಟಕರವಾಗುತ್ತದೆ. ಹಾಗೂ ಅನೈತಿಕ ಕಾರ್ಯ ಮಾಡು ವವರನ್ನು ಶಿಕ್ಷಿಸಲು ದೇವರೇ ಇಲ್ಲ ಎನ್ನುವುದಾದಲ್ಲಿ ಮಾನವ ನೈತಿಕ ಜೀವಿ ಯಾದರೂ ಏಕೆ ಆಗಿರಬೇಕು ? ದೇವರು ಇಲ್ಲದ ಜಗತ್ತಿನಲ್ಲಿ ಮಾನವ ಹೇಗೆ ನೈತಿಕ ಜೀವಿಯಾಗಿರಬಲ್ಲ ಎನ್ನುವುದಕ್ಕೆ ಇರುವ ಹಲವಾರು ವಿವರಣೆಗಳಲ್ಲಿ, ಮಾನವ ಸ್ವಾಭಾವಿಕವಾಗಿಯೇ ನೈತಿಕ ಜೀವಿ ಎನ್ನುವುದು ಒಂದು ವಿವರಣೆ. ಅಂದರೆ ನೈತಿಕ ಹಾಗೂ ಅನೈತಿಕಗಳಲ್ಲಿ ಭೇದ ಕಲ್ಪಿಸುವ ಶಕ್ತಿ ಅನುಭವ ಪೂರ್ವದ್ದು ಹಾಗೂ ಅದು ಅವನಿಗೆ ನಿಸರ್ಗದತ್ತವಾದುದು ಎನ್ನುವುದು. ಆದರೆ ಇದನ್ನು ಒಪ್ಪಿಕೊಳ್ಳು ವುದು ಅಸ್ತಿತ್ವವಾದಿ ಮೂಲತತ್ವವಾದ 'ಸತ್ವಕ್ಕಿಂತ ಅಸ್ತಿತ್ವ ಮೊದಲು' ಎನ್ನುವ ತತ್ವಕ್ಕೆ ವಿರೋಧಿಯಾಗುತ್ತದೆ. ಏಕೆಂದರೆ ಮಾನವ ಸ್ವಾಭಾವಿಕವಾಗಿಯೇ ನೈತಿಕ ಜೀವಿಯಾಗಿದ್ದು, ನೈತಿಕ ಅನೈತಿಕಗಳ ನಡುವಣ ಭೇದದ ಕಲ್ಪನೆ ಅವನಿಗೆ ನಿಸರ್ಗ ದತ್ತವಾಗಿದ್ದಲ್ಲಿ, ಅದು ಅವನ ಕೃತಿಗಳನ್ನು ಪೂರ್ವನಿಶ್ಚಿತಪಡಿಸುತ್ತದೆ, ಹಾಗೂ ಅದರ ಅರ್ಥ ಅವನು ಅಸ್ತಿತ್ವವಾದೀ ಪರಿಭಾಷೆಯಲ್ಲಿ 'ಮುಕ್ತ' ನಲ್ಲ ಎಂದ ಹಾಗಾ ಗುತ್ತದೆ. ಆದರೆ ಅಸ್ತಿತ್ವವಾದದ ಪ್ರಕಾರ ಸ್ವಾಭಾವಿಕ ನೈತಿಕತೆಯ ಮಾತಿರಲಿ, ಯಾವುದೂ ಅಸ್ತಿತ್ವಕ್ಕಿಂತ ಮೊದಲಲ್ಲ.

ಆದುದರಿಂದ ಸಾರ್ವತ್ರಿಕ ನೈತಿಕ ಮೌಲ್ಯಗಳಿವೆ ಎನ್ನುವುದು ತಪ್ಪು. ದೇವರು ಅಥವಾ ಸ್ವಾಭಾವಿಕ ನೈತಿಕತೆ ಎನ್ನುವುದು ಮಾನವ ನೈತಿಕ ಜೀವಿಯಾಗಿರಲು 'ನೆಪ' ಗಳು ಮಾತ್ರ. "ಆದರೆ ದೇವರು ಇಲ್ಲದಿದ್ದಲ್ಲಿ, ನಮ್ಮ ಕೃತಿಗಳನ್ನು ಸಮರ್ಥಿಸಿ ಕೊಳ್ಳಲು ಯಾವುದೇ ಮೌಲ್ಯಗಳಾಗಲೀ ಆಜ್ಞೆಗಳಾಗಲೀ ನಮಗೆ ಸಿಕ್ಕುವುದಿಲ್ಲ. ಮೌಲ್ಯಗಳ ಕಾಂತಿಮಯ ಪ್ರದೇಶದಲ್ಲಿ ನಮ್ಮ ಹಿಂದೆ ಯಾವ ನೆಪಗಳೂ ಇಲ್ಲ, ನಮ್ಮ ಮುಂದೆ ಯಾವ ಸಮರ್ಥನೆಗಳೂ ಇಲ್ಲ. ನಾವು ನೆಪಗಳಿಲ್ಲದೇ ಏಕಾಕಿಗಳಾಗಿದ್ದೇವೆ".[5] ಮಾನವನು ಮುಕ್ತನಾಗಿಯೇ ಇರಬೇಕಾಗಿರುವ ಸ್ಥಿತಿಯಿಂದ ಬರುವ ಈ ಏಕಾಕಿತನವೇ, ಮಾನವ ನೈತಿಕ ಆಯ್ಕೆಗಳನ್ನು ಮಾಡಲು ಹಾಗೂ ಆ ಆಯ್ಕೆಗಳ ಹೊಣೆಯನ್ನು ಹೊರಲು ಚೌಕಟ್ಟಾಗುತ್ತದೆ. ಯಾವುದೂ ತನ್ನಲ್ಲಿ ತಾನೇ ಒಳ್ಳೆಯದು ಅಥವಾ

ಕೆಟ್ಟದ್ದು ಆಗಿರುವುದಿಲ್ಲ. ಇದು ಕ್ರಿಶ್ಚಿಯನ್ ನೈತಿಕ ಮೌಲ್ಯವಾದ ಪ್ರೇಮಕ್ಕಿಂತ ಭಿನ್ನವಾದದ್ದು.

ವಿಷಯನಿಷ್ಠವಾಗಿರುವುದೇ ಅಸ್ತಿತ್ವವಾದದ ಮೂಲವಾದುದರಿಂದ, ಅದು ಸಾರ್ವತ್ರಿಕ ನೈತಿಕ ಮೌಲ್ಯಗಳಿವೆ ಅನ್ನುವುದನ್ನು ಅಲ್ಲಗಳೆಯುತ್ತದೆ. ಒಂದು ಸಲ ಹೇಗೆ ತನ್ನ ಒಬ್ಬ ವಿದ್ಯಾರ್ಥಿ ತನ್ನ ಸಲಹೆಯನ್ನು ಕೇಳುವುದರ ಮೂಲಕ ಸಾರ್ವತ್ರಿಕ ಮೌಲ್ಯಗಳಿವೆ ಎನ್ನುವುದರ ವ್ಯರ್ಥತೆಯನ್ನು ಮನದಟ್ಟು ಮಾಡಿಸಿದ ಎಂಬುದನ್ನು ಸಾರ್ತ್ರ್ ಒಂದೆಡೆ ವಿವರಿಸುತ್ತಾನೆ. ಅವನ ವಿದ್ಯಾರ್ಥಿಯ ಮುಂದೆ ಒಂದು ದ್ವಂದ್ವ ವಿತ್ತು. ಅವನ ಸಹೋದರ ಯುದ್ಧದಲ್ಲಿ ಸತ್ತುಹೋಗಿದ್ದ. ಆದುದರಿಂದ ಅವನ ಸಾವಿನ ಸೇಡನ್ನು ತೀರಿಸಲು ಈ ವಿದ್ಯಾರ್ಥಿ ಫ್ರಾನ್ಸ ದೇಶದ ಮುಕ್ತಿ ಸೇನೆಯನ್ನು ಸೇರ ಬಯಸಿದ್ದ. ಆದರೆ ಪತಿಯಿಂದ ತಿರಸ್ಕೃತಳಾದ ಅವನ ತಾಯಿ ಸಂಪೂರ್ಣ ವಾಗಿ ಅವನನ್ನೇ ನಂಬಿದ್ದಳು. ಈ ಸಂದರ್ಭದಲ್ಲಿ ಹೇಗೆ ಕ್ರಿಶ್ಚಿಯನ್ ಹಾಗೂ ಕಾಂಟನ ನೈತಿಕತೆ ಆ ವಿದ್ಯಾರ್ಥಿಯ ದ್ವಂದ್ವವನ್ನು ಪರಿಹರಿಸುವಲ್ಲಿ ಸೋಲುತ್ತವೆ ಎನ್ನುವುದನ್ನು ಸಾರ್ತ್ರ್ ತೋರಿಸುತ್ತಾನೆ. "ಕ್ರಿಶ್ಚಿಯನ್ ಸಿದ್ಧಾಂತ, 'ಕರುಣೆ ತೋರಿಸು, ನಿನ್ನ ನೆರೆಹೊರೆಯವರನ್ನು ಪ್ರೀತಿಸು, ಹೆಚ್ಚು ಕಠಿಣವಾದ ಮಾರ್ಗ ಹಿಡಿ' ಎಂದೆಲ್ಲ ಹೇಳುತ್ತದೆ. ಆದರೆ ಇಲ್ಲಿ ಹೆಚ್ಚು ಕಠಿಣವಾದ ಮಾರ್ಗವಾದರೂ ಯಾವುದು ? ಯಾರನ್ನು ಆತ ಸಹೋದರನಂತೆ ಪ್ರೀತಿಸಬೇಕು ? ಯುದ್ಧ ಮಾಡು ತ್ತಿರುವ ಸೈನಿಕನನ್ನೇ ಅಥವಾ ತಾಯಿಯನ್ನೇ ? . . . . ಅನುಭವಕ್ಕಿಂತ ಮೊದಲು ಯಾರು ಇದನ್ನು ನಿರ್ಧರಿಸಬಲ್ಲರು ? . . ."[6] ಕಾಂಟನ ನೈತಿಕತೆಯೂ ಹೇಗೆ ವಿಫಲ ವಾಗುತ್ತದೆ ಎನ್ನುವುದನ್ನೂ ಸಾರ್ತ್ರ್ ತೋರಿಸುತ್ತಾನೆ. ಕಾಂಟನ ನೈತಿಕತೆ, " 'ಯಾವ ವ್ಯಕ್ತಿಯನ್ನೂ ಸಾಧನವೆಂದು ಪರಿಗಣಿಸಬೇಡ, ಗುರಿ ಎಂದು ಪರಿಗಣಿಸು', ಎನ್ನುತ್ತದೆ. ಆದರೆ ನಾನು ನನ್ನ ತಾಯಿಯೊಡನೆ ಇದ್ದರೆ ಅವಳನ್ನು 'ಗುರಿ' ಎಂದು ಪರಿಗಣಿಸಿದ ಹಾಗೇನೋ ಆಗುತ್ತದೆ, ಆದರೆ ಈ ರೀತಿ ಮಾಡುವಾಗಲೇ ನಾನು ಯುದ್ಧ ಮಾಡುತ್ತಿರುವ ಸೈನಿಕರನ್ನು 'ಸಾಧನ'ವೆಂದು ಪರಿಗಣಿಸುವ ಅಪಾಯು ಕ್ಕೊಳಗಾಗುತ್ತೇನೆ. ಇದೇ ರೀತಿ, ನಾನು ಯುದ್ಧ ಮಾಡುತ್ತಿರುವ ಸೈನಿಕರನ್ನು ಹೋಗಿ ಸೇರಿದರೆ, ಅವರನ್ನು 'ಗುರಿ' ಎಂದು ಪರಿಗಣಿಸಿದಂತಾದರೂ, ನನ್ನ ತಾಯಿ ಯನ್ನು 'ಸಾಧನ'ವೆಂದು ಪರಿಗಣಿಸಿದ ಹಾಗೆ ಆಗುತ್ತದೆ."[7] ಆ ತರುಣ ವಿದ್ಯಾರ್ಥಿ ತನ್ನ ಸಹಜ ಪ್ರವೃತ್ತಿಯನ್ನೇ ಆಧರಿಸಿ ಇವೆರಡರಲ್ಲಿ ಆಯ್ಕೆಮಾಡಲು ಪ್ರಯತ್ನಿಸಿದ. ತನ್ನ ಭಾವನೆಗಳು ತಾಯಿಯೊಡನೆ ಇರಲು ಪ್ರೇರೇಪಿಸಿದರೆ ತಾಯಿಯೊಡನೆ ಇರುವೆ, ಸೈನ್ಯ ಸೇರಲು ಪ್ರೇರೇಪಿಸಿದರೆ ಸೈನ್ಯ ಸೇರುವೆ ಎನ್ನುವುದೇ ಅವನ ಸ್ವಂತ ಉತ್ತರ ವಾಗಿತ್ತು. ಆದರೆ ಅವನ ಭಾವನೆಗಳ ನಿರ್ಧಾರಕ ಶಕ್ತಿ ಯಾವುದು ? "ಅವನು ತಾಯಿಯೊಡನೆ ಇರಲು ನಿರ್ಧರಿಸಿದುದೇ ಅವನ ಭಾವನೆಗಳ ನಿರ್ಧಾರಕ"ಎನ್ನುತ್ತಾನೆ

ಸಾರ್ತ್ರ್. ನೈತಿಕ ಆಯ್ಕೆ ವೈಯಕ್ತಿಕವಾದುದರಿಂದ ಸಾರ್ತ್ರ್ ಅವನಿಗೆ ಯಾವ ಸಲಹೆಯನ್ನೂ ಕೊಡಲು ನಿರಾಕರಿಸಿದ.

ಈ ರೀತಿ ನೈತಿಕತೆಯ ಆಯ್ಕೆ ಯಾದೃಚ್ಛಿಕವಾಗುತ್ತದೆ; ಆಧಾರರಹಿತವಾಗುತ್ತದೆ. ಹಾಗೂ ಆ ರೀತಿ ಆಯ್ಕೆ ಮಾಡುವ 'ಸ್ವಾತಂತ್ರ್ಯ'ವೇ ನೈತಿಕತೆಯ ಆಧಾರವಾಗುತ್ತದೆ. 'ಜಗತ್ತಿನಲ್ಲಿ-ಇರುವ-ವ್ಯಕ್ತಿ' ಈ ಸ್ವಾತಂತ್ರ್ಯವನ್ನರಿತು, ಹಾಗೂ ಅದರ ಹೊಣೆಯನ್ನು ಹೊತ್ತು 'ಪ್ರಾಮಾಣಿಕ' ಜೀವನ ನಡೆಸುತ್ತಾನೆ. ಜೀವನದಲ್ಲಿಯ ಈ ಪ್ರಾಮಾಣಿಕತೆಯೇ ಒಂದು ನೈತಿಕ ಮೌಲ್ಯವಾಗುತ್ತದೆ. ಶ್ರೀಮತಿ ಮಾರ್ಗಾರೆಟ್ ಗ್ರೀನ್ ಈ ಪ್ರಾಮಾಣಿಕತೆಯನ್ನು ಅಸ್ತಿತ್ವವಾದಿ ನೈತಿಕ ಮೌಲ್ಯ ಎನ್ನುತ್ತಾರೆ.[8] ಈ ಪ್ರಾಮಾಣಿಕತೆ ಕ್ರಿಶ್ಚಿಯನ್ ಮೌಲ್ಯವಾದ ಪ್ರೇಮದ ಸ್ಥಾನವನ್ನು ಆಕ್ರಮಿಸುತ್ತದೆ, ಹಾಗೂ ನೈತಿಕತೆಯ ಅಸ್ತಿತ್ವವಾದಿ ರೂಪವನ್ನು ಇದು ಪ್ರತಿನಿಧಿಸುತ್ತದೆ ಎನ್ನುತ್ತಾರೆ ಶ್ರೀ ನಾರ್ಮನ್ ಗ್ರೀನ್.[9] ಇದಕ್ಕೆ ತದ್ವಿರುದ್ಧವಾಗಿ, "ಸತ್ವವಾದಿ ಚಿಂತನೆಯ ಮೇಲೆ ಆಧಾರಿತ ನೈತಿಕತೆ, ಸರ್ವಸಾಮಾನ್ಯವಾಗಿರುವ ಸಾರ ತುಂಬಿದ ಮೌಲ್ಯ ಅಥವಾ ನಡತೆಯ ವಿಶಿಷ್ಟ ನಿಯಮವಾಗುತ್ತದೆ. ಇದನ್ನು ಸಾರ್ತ್ರ್ ಒಪ್ಪಲಾರ, ಒಪ್ಪುವುದೂ ಇಲ್ಲ."[9] ಈ ಪ್ರಾಮಾಣಿಕತೆಯ ಮೌಲ್ಯ ಲಭಿಸುವುದು ಮಾನವನ ಆಯ್ಕೆಯ ಸ್ವಾತಂತ್ರ್ಯದಿಂದ. ಈ ಸ್ವಾತಂತ್ರ್ಯ ಎಂಬ ಪರಿಕಲ್ಪನೆ ಅಸ್ತಿತ್ವವಾದಿ ತತ್ವಶಾಸ್ತ್ರ, ಅಸ್ತಿತ್ವವಾದಿ ಮನೋವಿಶ್ಲೇಷಣೆಗಳ ಆಧಾರ ತತ್ವವಾಗಿರುವಂತೆಯೇ ಅಸ್ತಿತ್ವವಾದಿ ನೈತಿಕತೆಯ ಆಧಾರವೂ ಆಗುತ್ತದೆ. ನೈತಿಕ ನಡವಳಿಕೆಯು ಯಾವುದೇ ಬಾಹ್ಯ ಮಾನದಂಡಗಳಿಗೆ ಕಟ್ಟುಬಿದ್ದದ್ದೇ ಆದಲ್ಲಿ, ಅದು 'ಸ್ವಾತಂತ್ರ್ಯ'ದಿಂದ ಪಲಾಯನ ಮಾಡಿದ ಹಾಗಾಗುತ್ತದೆ; ಹಾಗೂ ಅವನ ಆಯ್ಕೆ ಪೂರ್ವ ನಿರ್ಧಾರಿತವಾಗಿ ಅದು ಅಪ್ರಾಮಾಣಿಕ ಜೀವನದಲ್ಲಿ ಕೊನೆಯಾಗುತ್ತದೆ. ಆಗ ಅದೊಂದು 'ಪಾಪ'ವಾಗುತ್ತದೆ. ಈ ರೀತಿ, ಅಸ್ತಿತ್ವವಾದದಲ್ಲಿ 'ಪಾಪ' ಎನ್ನುವ ಪರಿಕಲ್ಪನೆ ಇಲ್ಲ. ಅದು ಸಾರ್ತ್ರ್ ಹೇಳುವ 'ಕೆಟ್ಟ ನಂಬಿಕೆ' ಮಾತ್ರವಾಗುತ್ತದೆ. ಈ ವಿಶ್ಲೇಷಣೆಯೇ ಅಸ್ತಿತ್ವವಾದಿ ನೈತಿಕತೆಯಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಭೇದಕ್ಕೆ ಆಧಾರವಾಗುತ್ತದೆ.

ಅಸ್ತಿತ್ವವಾದದಲ್ಲಿ ವ್ಯಕ್ತಿ ಇನ್ನಿತರರನ್ನೂ ಆಯ್ಕೆ ಮಾಡುವುದರಿಂದ ಅವನು ಆ ಇನ್ನಿತರರಿಗೂ ಹೊಣೆಗಾರ. ಅವನು ಆ ಇನ್ನಿತರರ ಕಣ್ಣುಗಳ ಮುಂದೆಯೇ ತನ್ನನ್ನು ಸೃಷ್ಟಿಸಿಕೊಳ್ಳುತ್ತಾನೆ. ಬೇರೊಬ್ಬ ಹೇಗೆ ನನಗೆ 'ತನ್ನಲ್ಲಿ–ತಾನಿರುವ–ವಸ್ತು'ವೋ, ಅದೇ ರೀತಿ ನಾನು ಬೇರೆಯವರಿಗೆ 'ತನ್ನಲ್ಲಿ-ತಾನಿರುವ-ವಸ್ತು'. ಸಾರ್ತ್ರ್‌ನ ಈ ಅನ್ಯರ ಹೊಣೆಗಾರಿಕೆಯ ತತ್ವದಲ್ಲಿಯೇ, ಅಥವಾ ಸಾರ್ತ್ರ್‌ನ ಶಬ್ದಗಳಲ್ಲಿಯೇ ಹೇಳುವುದಾದರೆ 'ಪರಸ್ಪರ-ವಿಷಯನಿಷ್ಠತೆ'ಯಲ್ಲಿಯೇ ಸಾರ್ತ್ರ್‌ನ ಸಾಮಾಜಿಕ ನೈತಿಕತೆಯನ್ನು ಕಾಣಬಹುದು. "ಬೇರೆಯವರು ನಮಗೆ ಏನು ಮಾಡ

ಬೇಕೆಂದು ನಾವು ಇಚ್ಛಿಸುತ್ತೇವೆಯೋ, ಅದೇ ರೀತಿ ನಾವು ಇನ್ನಿತರರಿಗೆ ಮಾಡಬೇಕು ಎಂದು ಪ್ರಾಮಾಣಿಕ ಜೀವನ ಕೇಳುತ್ತದೆ ಎಂದು ಸಾರ್ತ್ರ್ ವಾದಿಸುತ್ತಾನೆ."[10] ಆದುದರಿಂದ ನನಗೆ ಬೇರೆಯುವರು ಹಿಂಸಿಸಬಾರದು ಎಂದು ನಾನು ಬಯಸಿದರೆ, ನಾನು ಇನ್ನಿತರರನ್ನು ಹಿಂಸಿಸಬಾರದು. ಏಕೆಂದರೆ ಇನ್ನಿತರರಿಗೆ ಹಿಂಸೆ ಕೊಡುವುದರ ಮೂಲಕ ನಾನು ಹಿಂಸಾಮಯ ಜಗತ್ತನ್ನು ಆಯ್ಕೆ ಮಾಡಿದ ಹಾಗಾಗುತ್ತದೆ; ಆದುದರಿಂದ ಬೇರೆಯುವರು ಹಿಂಸ್ರರಾಗಕೂಡದು ಎಂದು ನಾನು ಬಯಸಲಾಗದು.

ಈ ವೈಯಕ್ತಿಕ ಹಾಗೂ ಸಾಮಾಜಿಕ ನೈತಿಕತೆಯ ಆಧಾರವಾದ 'ಸ್ವಾತಂತ್ರ್ಯ' ಅಸ್ತಿತ್ವವಾದಿ ಮನೋವಿಶ್ಲೇಷಣೆಯಲ್ಲಿ 'ಸ್ವ-ಪ್ರಜ್ಞೆ'ವಾಗುತ್ತದೆ. 'ತನಗಾಗಿ-ತಾನಿರುವುದರ' ಹಲವಾರು ಕಾರ್ಯಗಳು, ಪ್ರಜ್ಞೆ ಹಾಗೂ ಅಸ್ತಿತ್ವಗಳ ನಡುವೆ ಕಳೆದುಹೋಗಿರುವ ಸಂಪರ್ಕವನ್ನು ಮೌಲ್ಯಗಳ ರೂಪದಲ್ಲಿ ಸೃಷ್ಟಿಸುವುದನ್ನು ಗುರಿಯಾಗಿಟ್ಟುಕೊಂಡಿರುತ್ತವೆ," ಹಾಗೂ ಈ ಕಾರ್ಯಗಳು ಅಸ್ತಿತ್ವವಾದಿ ಮನೋವಿಶ್ಲೇಷಣೆಯ ವಸ್ತುಗಳಾಗುತ್ತವೆ. ಈ ರೀತಿ "ಅಸ್ತಿತ್ವವಾದಿ ಮನೋವಿಶ್ಲೇಷಣೆಯೊಂದು **'ನೈತಿಕ ವಿವರಣೆ'** (ಒತ್ತು ಸಾರ್ತ್ರ್‌ನದು) ಯಾಗುತ್ತದೆ, ಏಕೆಂದರೆ ಅದು ಮಾನವನ ವಿವಿಧ ಯೋಜನೆಗಳ ನೈತಿಕ ಅರ್ಥವನ್ನು ನಮಗೆ ವಿವರಿಸುತ್ತದೆ."[11] ಅಸ್ತಿತ್ವವಾದಿ ಮನೋವಿಶ್ಲೇಷಣೆ ಹಾಗೂ ಮೂಲತತ್ವ ಶಾಸ್ತ್ರಗಳು ನೈತಿಕ ವ್ಯಕ್ತಿಗೆ **ಅವನಿಂದಲೇ ಮೌಲ್ಯಗಳು ಅಸ್ತಿತ್ವ ಪಡೆಯುತ್ತವೆ** ಎಂದು ತಿಳಿಸುತ್ತವೆ. "ಆಗ ಸ್ವಾತಂತ್ರ್ಯ ತನ್ನ ಬಗ್ಗೆಯೇ ತಾನು ಪ್ರಜ್ಞೆ ಸಾಧಿಸುತ್ತದೆ, ಹಾಗೂ ಮೌಲ್ಯದ ಏಕೈಕ ನೆಲೆ ತಾನೇ ಎಂಬುದನ್ನೂ ಸಹ ಸಂಕಟದ ನಡುವೆ ವ್ಯಕ್ತಗೊಳಿಸುತ್ತದೆ."

ಈ ಅಸ್ತಿತ್ವವಾದದ ಕೇಂದ್ರ ಬಿಂದುವಾದ 'ಸ್ವಾತಂತ್ರ್ಯ'ದ ಬಗೆಗಿನ ಅನೇಕ ಪ್ರಶ್ನೆಗಳಿವೆ. ಈ ಪ್ರಶ್ನೆಗಳನ್ನು ನೈತಿಕ ಪಾತಳಿಯ ಮೂಲಕವೇ ಬಗೆಹರಿಸಲು ಸಾಧ್ಯ. 'ಅಸ್ತಿತ್ವ ಮತ್ತು ಶೂನ್ಯತೆ' ಎಂಬ ಗ್ರಂಥದ ಕೊನೆಯಲ್ಲಿ ಇಂಥ ಪ್ರಶ್ನೆಗಳಿಗೆ ಸಮಾಧಾನವನ್ನು ನೀಡಲೆಂದೇ ಒಂದು ಕೃತಿಯನ್ನು ರಚಿಸುವ ಆಶ್ವಾಸನೆಯನ್ನು ಕೊಡುತ್ತಾನೆ. ಈ ಮೂಲಕ ನೈತಿಕತೆಗೆ ಇರುವ ಮಹತ್ವವನ್ನು ಆತ ಒಪ್ಪಿಕೊಳ್ಳುತ್ತಾನೆ. ನೈತಿಕತೆಯ ಒಂದು ವ್ಯವಸ್ಥೆಯನ್ನೇ ಸಾರ್ತ್ರ್ ಕಲ್ಪಿಸದೇ ಹೋದರೂ, ಆತ ತನ್ನ ಅಸ್ತಿತ್ವವಾದವನ್ನು 'ಕ್ರಿಯಾಶೀಲತೆಯ ನೈತಿಕ ಸಿದ್ಧಾಂತ' ಎಂದು ಕರೆಯುತ್ತಾನೆ.[12]

ಅಸ್ತಿತ್ವವಾದಿ ಜ್ಞಾನಸಿದ್ಧಾಂತ

ಸಾಂಪ್ರದಾಯಿಕ ಪರಿಕಲ್ಪನೆಯ ಪ್ರಕಾರ ವಸ್ತು ಹಾಗೂ ಜ್ಞಾನೇಂದ್ರಿಯಗಳ ಸಂಬಂಧವೇ ಜ್ಞಾನ. ಇದು ಕ್ಷಣಭಂಗುರವೂ, ಅಲೌಕಿಕವೂ ಆಗಿರುತ್ತದೆ. ಅಸ್ತಿತ್ವವಾದಿ ತತ್ವಚಿಂತನೆ ಜ್ಞಾನವನ್ನು ಸತ್ಯದ ಗ್ರಹಿಕೆ ಎಂದು ನಿರ್ಧರಿಸದೇ ಅದನ್ನು ವಸ್ತುವಿನ ಸ್ವಭಾವ ಹಾಗೂ ಧರ್ಮಗಳನ್ನು ಸೂಚಿಸುವುದರ ಮೂಲಕ ಹೆಚ್ಚು ನಿರ್ದಿಷ್ಟಗೊಳಿಸುತ್ತದೆ. ಪಾರಲೌಕಿಕದ ಬಗ್ಗೆ ಅದು ಏನನ್ನೂ ಹೇಳುವುದಿಲ್ಲ. ಆದುದರಿಂದ ಮೇಲೆ ಹೇಳಿದ ಜ್ಞಾನದ ವರ್ಗ ಭೇದಗಳು ಇಲ್ಲಿ ಅಸಮಂಜಸವಾಗುತ್ತವೆ. ಮೂಲ ತತ್ವಶಾಸ್ತ್ರ ಅಸ್ತಿತ್ವವಾದದ ಪ್ರಮುಖ ಲಕ್ಷಣವಾದುದರಿಂದ, ದೃಷ್ಟಿಗೋಚರ ಜಗತ್ತಿನ ಮೂಲ ರಚನೆಯನ್ನು ಸೂಚಿಸುವ ವಿಧಾನವೇ ಅಸ್ತಿತ್ವವಾದದಲ್ಲಿ ಜ್ಞಾನವೆನಿಸುತ್ತದೆ.

ಯಾವಾಗಲೂ ಎರಡು ವಸ್ತುಗಳ ನಡುವೆಯೇ 'ಸಂಬಂಧ' ಎನ್ನುವುದು ಇರಲು ಸಾಧ್ಯ. ಜ್ಞಾನವೂ ಒಂದು 'ಸಂಬಂಧ' ವಾದುದರಿಂದ ಇಲ್ಲಿಯೂ ಎರಡು ವಸ್ತುಗಳು ಅಡಕವಾಗಿರುತ್ತವೆ. ದೃಷ್ಟಿಗೋಚರವಾದದಲ್ಲಿ ಪ್ರಜ್ಞೆಯ ಎರಡು ಮುಖಗಳಾದ 'ತನ್ನಲ್ಲಿ ತಾನಿರುವ ಅಸ್ತಿತ್ವ' ಹಾಗೂ 'ತನಗಾಗಿ ತಾನಿರುವ ಅಸ್ತಿತ್ವ' ಇವೆರಡೂ ಜ್ಞಾನದ ಮೂಲಭೂತ ಘಟಕಗಳಾಗುತ್ತವೆ.

ಸಾರ್ತ್ರನಿಗೆ ಜ್ಞಾನ ಬರಿ ಅಂತರ್ಬೋಧಪರವಾದುದು. "ಯಾರಾದರೂ ಅಂತರ್ಬೋಧದ ವ್ಯಾಖ್ಯೆ ಏನೆಂದು ಕೇಳಿದರೆ ಹಸ್ಸೆರ್ಲ್ ಇದನ್ನು ಪ್ರಜ್ಞೆಯ ಮುಂದೆ ವಸ್ತುವಿನ ವ್ಯಕ್ತಿಗತ ಸಾನ್ನಿಧ್ಯ ಎಂದು ಹೇಳುತ್ತಾನೆ. ಈ ವ್ಯಾಖ್ಯೆಯನ್ನು ಬಹಳಷ್ಟು ತತ್ವಚಿಂತಕರು ಒಪ್ಪಿಕೊಳ್ಳುತ್ತಾರೆ ಕೂಡಾ...".[1] ದೃಷ್ಟಿಗೋಚರ ಧರ್ಮವುಳ್ಳ ವಸ್ತುವಾದ 'ತನ್ನಲ್ಲಿ ತಾನಿರುವ ಅಸ್ತಿತ್ವ' ಪ್ರಜ್ಞಾಯುತ ವಿಷಯವಾದ 'ತನಗಾಗಿ ತಾನಿರುವ ಅಸ್ತಿತ್ವ'ದ ಸಾನ್ನಿಧ್ಯ ಸಾಧಿಸುತ್ತದೆ. ಆದರೆ

ವಸ್ತು ಪ್ರಜ್ಞೆಯ ಸಾನ್ನಿಧ್ಯಕ್ಕೆ ಬರುವುದಿಲ್ಲ. ಪ್ರಜ್ಞೆಯೇ ವಸ್ತುವನ್ನು ಗ್ರಹಿಸುತ್ತದೆ. ಆದುದರಿಂದ ಸಾರ್ತ್ರ್ ಹಸ್ರೆಲನ ಅಂತರ್ಬೋಧೆಯ ಪರಿಭಾಷೆಯನ್ನು ಪುನರ್‌ರೂಪಿಸಿ "ಅಂತರ್ಬೋಧೆ ಎಂದರೆ ವಸ್ತುವಿನ ಮುಂದೆ ಪ್ರಜ್ಞೆಯ ಸಾನ್ನಿಧ್ಯ, ಅಥವಾ ಪ್ರಜ್ಞೆಯಿಂದ ವಸ್ತುವಿನ ಗ್ರಹಿಕೆ"[1] ಎಂದು ಹೇಳುತ್ತಾನೆ.

ಸತ್ಯದ ಸ್ವರೂಪ ವಿಶ್ಲೇಷಣೆಯೇ ಜ್ಞಾನದ ಕಾರ್ಯ. ಆದರೆ 'ಸತ್ಯ' ಎಂದರೇನು ? ಸಾಂಪ್ರದಾಯಿಕ ವಿಚಾರಧಾರೆಗಳ ಪ್ರಕಾರ ಸತ್ಯ ಸಾಪೇಕ್ಷವಾಗುತ್ತದೆ–ದೃಷ್ಟಿಗೋಚರ ಸತ್ಯ ಹಾಗೂ ಇಂದ್ರಿಯಾತೀತ ಸತ್ಯ. ಆದರೆ ಮೊದಲೇ ಹೇಳಿದಂತೆ ವಸ್ತುವಿನ ತೋರಿಕೆಯ ಸತ್ಯ ಹಾಗೂ ತೋರಿಕೆಯ ಹಿಂದೆ ಅಡಗಿರುವ ಇಂದ್ರಿಯಾತೀತ ಸತ್ಯಗಳ ದ್ವಂದ್ವದ ಭಾಷೆಯನ್ನು ಅಸ್ತಿತ್ವವಾದ ಆಡುವುದಿಲ್ಲ. ಈ ಬಗ್ಗೆ ಡೆನ್ಮಾರ್ಕ ದೇಶದ ಅಸ್ತಿತ್ವವಾದಿ ಸೋರೆನ್ ಕೀರ್ಕೆಗಾರ್ಡ ತನ್ನ ಗ್ರಂಥ 'ಐದರ್–ಆರ್'ನಲ್ಲಿ "ಸತ್ಯದ ಬಗ್ಗೆ ತತ್ವಚಿಂತಕರು ಹೇಳುವ ಮಾತುಗಳು ಒಂದು ಅಂಗಡಿಯಲ್ಲಿರುವ 'ಇಲ್ಲಿ ಬಟ್ಟೆಗಳನ್ನು ಒಗೆಯಲಾಗುತ್ತದೆ' ಎಂಬ ಫಲಕದಂತೆಯೇ ನಮ್ಮನ್ನು ತಪ್ಪುದಾರಿ ಹಿಡಿಸುತ್ತವೆ. ನೀವೇನಾದರೂ ಅಲ್ಲಿ ಒಗೆಯಲು ನಿಮ್ಮ ಬಟ್ಟೆಗಳನ್ನು ತೆಗೆದುಕೊಂಡು ಹೋದರೆ ಮೂರ್ಖರಾಗುವಿರಿ, ಏಕೆಂದರೆ ಆ ಫಲಕ ಮಾತ್ರ ಅಲ್ಲಿ ಮಾರಾಟಕ್ಕಿಡಲಾಗಿದೆ" ಎನ್ನುತ್ತಾನೆ.

ಆದರ್ಶವಾದಿಗಳು ಒಂದು ವಸ್ತುವಿನ ಕಾಣುವಿಕೆಯನ್ನು ಅಥವಾ ದೃಷ್ಟಿಗೋಚರ ಸ್ವಭಾವವನ್ನು ಪೂರ್ಣ ನಿಷೇಧ ಸ್ವರೂಪದ್ದೆಂದು, ಅನಸ್ತಿತ್ವ ಉಳ್ಳದ್ದೆಂದು ಹೇಳಿದ್ದರು. ಆದರೆ ಅದು ಇಂದ್ರಿಯಾತೀತ ವಸ್ತುವಿನಲ್ಲಿ ಸೇರಿ ಹೋದೀತೆಂದು ಅವರು ಈ ಅನಸ್ತಿತ್ವವನ್ನು ಬಹಳ ಜಾಗರೂಕತೆಯಿಂದ ಕಾಪಾಡಿಕೊಂಡಿದ್ದರು. ಮನುಷ್ಯ ಹಾಗೂ ಜಗತ್ತಿನ ಅಸ್ತಿತ್ವವನ್ನು ಪ್ರತಿಪಾದಿಸುವ ಅಧ್ಯಾತ್ಮಮೂಲ ತತ್ವಶಾಸ್ತ್ರವನ್ನು ಸಾರ್ತ್ರ್ ನಿರಾಕರಿಸುತ್ತಾನೆ. ತನ್ನ ಹಿಂದೆ ಇನ್ನೊಂದು ಪ್ರತ್ಯೇಕ ಅಸ್ತಿತ್ವವಿಲ್ಲದಿರುವ ವಸ್ತುವನ್ನು ಅಧ್ಯಾತ್ಮಮೂಲ ತತ್ವಶಾಸ್ತ್ರ ಹೇಗೆ ಪ್ರಮಾಣಿಸಬಲ್ಲದು ? ವಸ್ತು ತಾನೇನಾಗಿದೆಯೋ ಅದೇ ಆಗಿರುತ್ತದೆ. ಸಾರ್ತ್ರ್ ಕಾಂಟನ ಹಾಗೆ ವಸ್ತು ಇಂದ್ರಿಯಾತೀತ ಸ್ವಭಾವವುಳ್ಳದ್ದೆಂದು ಅಂದರೆ 'ತನ್ನಲ್ಲಿಯೇ–ತಾನಿರುವ–ವಸ್ತು' ವೆಂದು ನಿರ್ವಚಿಸುವ ವಿಪರೀತಕ್ಕೂ ಹೋಗುವುದಿಲ್ಲ. ಜೊತೆಗೆ ಹ್ಯೂಮನಂತೆ ಅದರ ಅಸ್ತಿತ್ವವನ್ನು ಭ್ರಮೆ ಮಾತ್ರ ಎಂದು ಮೂದಲಿಸುವುದಕ್ಕೂ ಹೋಗುವುದಿಲ್ಲ. ಸಾರ್ತ್ರ್‌ನ ಪ್ರಕಾರ ಸತ್ಯ ಮಾನವ ಅನುಭವಿಸಿದಂತೆಯೇ ಇರುತ್ತದೆ. ಆತ ಹೇಳುತ್ತಾನೆ, "ಕಾಣುವಿಕೆಯ ಹಿಂದೆ ಅಡಗಿರುವ ಅಸ್ತಿತ್ವವನ್ನು ನಾವು ನಂಬದಿದ್ದಲ್ಲಿ, ಕಾಣುವಿಕೆಯೇ ಅದರ ಸತ್ವವಾಗುತ್ತದೆ, ಹಾಗೂ ಅದು ಆ ವಸ್ತುವಿನ ಅಸ್ತಿತ್ವಕ್ಕೆ ವಿರುದ್ಧವಾಗಿರದೇ ಅದರದ್ದೇ ಒಂದು ಅಳತೆಗೋಲಾಗುತ್ತದೆ. ಈ ರೀತಿ

ಕಾಣುವಿಕೆ ಪೂರ್ಣ ನಿಶ್ಚಿತಾತ್ಮಕ ಸ್ವಭಾವವುಳ್ಳದ್ದಾಗುತ್ತದೆ".[2] ಅದು ಸಂಪೂರ್ಣವಾಗಿ ತನ್ನದೇ ಅಸ್ತಿತ್ವದ ಸೂಚಕವಾಗುತ್ತದೆ. ವಸ್ತುವಿನ ಬಾಹ್ಯ ಸ್ವರೂಪ ಅಥವಾ ತೋರಿಕೆ ವಸ್ತುವಿನ ಸತ್ವವನ್ನು ಅಡಗಿಸುವುದಿಲ್ಲ, ಪ್ರಕಟಪಡಿಸುತ್ತದೆ. ಅದು ದೃಷ್ಟಿಗೋಚರ ಸ್ವಭಾವದ ಅಸ್ತಿತ್ವವೆಂದು ಕರೆಯಲಾಗುವ ವಸ್ತು, "ತನ್ನನ್ನೇ ಸ್ಪಷ್ಟಪಡಿಸುತ್ತದೆ; ಅದು ಸತ್ವದೊಂದಿಗೆ ಅಸ್ತಿತ್ವವನ್ನೂ ಪ್ರಕಟಪಡಿಸುತ್ತದೆ''. ಅದು ತಾನೇನಾಗಿದೆಯೋ ಅದು ಬಿಟ್ಟು ಬೇರೇನೂ ಆಗಿರಲು ಸಾಧ್ಯವಿಲ್ಲ. ಅದೊಂದು ತನ್ನಲ್ಲಿ—ತಾನಿರುವ ಮೂರ್ತ ಅಸ್ತಿತ್ವ. ಬೇರೆ ಯಾವುದೂ ಅವನ್ನು ಬದಲಿಸಲಾರದು. "ಆದರೆ ಇಷ್ಟು ಮಾತ್ರ ನಿಜ, ಏನೆಂದರೆ ನಾನು ನೋಡುತ್ತಿರುವ ಈ ಬಿಳಿ ಕಾಗದ, ನನ್ನ ಸ್ವಯಂಪ್ರೇರಣೆಯ ಪರಿಣಾಮವಾಗಿರಲಾರದು. ಎಲ್ಲ ಪ್ರಜ್ಞಾಯುತ ಸ್ವಯಂಪ್ರೇರಣೆಯಿಂದಲೂ ಆಚೆ ಇರುವ ಹಾಗೂ ಕ್ರಮೇಣ ನೋಡಿ ಅರ್ಥ ಮಾಡಿಕೊಳ್ಳಬೇಕಾದ ಆ ಜಡ ರೂಪವೇ ವಸ್ತುವೆನಿಸಿಕೊಳ್ಳುತ್ತದೆ."[3] ಆದುದರಿಂದ ಸಾರ್ತ್ರ ವಸ್ತುಗಳನ್ನು ತಮ್ಮಲ್ಲಿ ತಾವಿರುವ ಅಸ್ತಿತ್ವಗಳು ಎನ್ನುತ್ತಾನೆ.

ತನ್ನಲ್ಲಿ ತಾನಿರುವ ವಸ್ತುವನ್ನು ಪ್ರಜ್ಞೆ ಗ್ರಹಿಸುತ್ತದೆ. ಅದು ವಸ್ತುವಿಗೆ ಒಂದು ಅರ್ಥವನ್ನು, ಒಂದು ಸ್ಪಷ್ಟ ರೂಪವನ್ನು ಕೊಡುವುದರ ಮೂಲಕ ಪ್ರಕಟಪಡಿಸುತ್ತದೆ. ಅದಕ್ಕೆ ಒಂದು ನಿಯಮಿತತ್ವವನ್ನು ತಂದುಕೊಡುತ್ತದೆ. ಅವ್ಯವಸ್ಥಿತ ಸ್ಥಿತಿಯಿಂದ ಅದನ್ನು ಹೊರಗೆ ತರುತ್ತದೆ. ಆದರೆ ಈ ಸ್ಥಿತಿಯಲ್ಲಿ 'ಪ್ರಜ್ಞೆ' ಶಬ್ದಕ್ಕೇ ವಿವರಣೆ ನೀಡುವುದು ಆವಶ್ಯಕವಾಗುತ್ತದೆ. ಸಾರ್ತ್ರನ ಶಬ್ದಗಳಲ್ಲಿ "ಅರ್ಥಮಾಡಿಕೊಳ್ಳುವ ವ್ಯಕ್ತಿಯಲ್ಲಿ ಅಸ್ತಿತ್ವದ ನಿಯಮವೆಂದರೆ ಪ್ರಜ್ಞೆಯನ್ನು ಹೊಂದಿರುವುದು. ಪ್ರಜ್ಞೆ ಎಂದರೆ ಅಂತರಾರ್ಥ ಅಥವಾ ಸ್ವಯಂಜ್ಞಾನ ಎನ್ನಬಹುದಾದ ವಿಶಿಷ್ಟ ಜ್ಞಾನವೇನಲ್ಲ. ಅದು ವ್ಯಕ್ತಿಯಲ್ಲಿ ದೃಷ್ಟಿಗೋಚರ ಸ್ವಭಾವದಂತೆ ಇರುವ ಅಸ್ತಿತ್ವದ ಆಯಾಮ. ಪ್ರಜ್ಞೆ ಗ್ರಹಿಸಬಲ್ಲುದಷ್ಟೇ ಅಲ್ಲ, ಅದು ತನ್ನನ್ನು ತಾನೇ ಅರಿತುಕೊಳ್ಳಬಲ್ಲುದು ಕೂಡಾ. ಆದರೆ ಅದು ತನ್ನ ಮೇಲೆಯೇ ತಿರುಗಿಸಲಾದ ಜ್ಞಾನಕ್ಕಿಂತ ಭಿನ್ನವಾದುದು......".[4] "ನನ್ನ ಪ್ರಜ್ಞೆ ಎಂದಿಗೂ ಅಮೂರ್ತವಾಗಿರುವುದಿಲ್ಲ, ಆದರೆ ಅದು ಒಂದು ಮರದ ಬಗ್ಗೆ ಅಥವಾ ಪಿಯರೆನ ಮುಖದ ಬಗ್ಗೆ ಯೋಚನೆ ಮಾಡುವುದರ ಮೂಲಕ ಅಸ್ತಿತ್ವ ಪಡೆದಿರುತ್ತದೆ. ಅದು ತನ್ನ ಬಿಟ್ಟು ಇನ್ನಾವುದೋ ವಸ್ತುವಿನ ಬಗ್ಗೆ ಕಲ್ಪನೆ ಮಾಡುವುದರ ಮೂಲಕ ತನ್ನನ್ನು ಪ್ರಕಟಪಡಿಸುತ್ತದೆ. ಈ ರೀತಿ ಅದು ತನ್ನ ಬಿಟ್ಟು ಇನ್ನಾವುದರಲ್ಲಿಯೋ ಅಸ್ತಿತ್ವ ಪಡೆಯುತ್ತದೆ......"[5]

'ಶೂನ್ಯತೆ' ಪ್ರಜ್ಞೆಯೊಂದಿಗೆ ಒಡಗೂಡಿದೆ. ಮೊದಲ ನೋಟಕ್ಕೆ ಇದು ಅಸಮಂಜಸವಾಗಿ ಕಾಣಬಹುದು. ಆದರೆ ಸಾರ್ತ್ರ ಮನವೊಪ್ಪಿಸುವಂತಹ ಕಾರಣ

ಗಳನ್ನು ಕೊಡುತ್ತಾನೆ. ನಾನು ಒಂದು ಕುರ್ಚಿಯನ್ನು ನೋಡಿದಾಗ, ಪ್ರಜ್ಞೆ ಆ ರೀತಿ ಹೇಳುತ್ತದೆ, ಹಾಗೂ ಕುರ್ಚಿಯನ್ನು ಪ್ರತ್ಯೇಕಿಸುವ ಅದು ಇನ್ನುಳಿದ ವಸ್ತುಗಳ ಬಗ್ಗೆ ಉದಾಸೀನವಾಗಿರುತ್ತದೆ. ಆದುದರಿಂದ ಅದು ಇನ್ನುಳಿದ ವಸ್ತುಜಗತ್ತನ್ನು ಅಸ್ತಿತ್ವಹೀನವೆಂದು ಭಾವಿಸುವುದರ ಮಟ್ಟಿಗೆ ಎಲ್ಲವನ್ನೂ 'ಶೂನ್ಯ'ದಲ್ಲಿ ದೂಡುತ್ತದೆ. (ಕುರ್ಚಿಯೊಂದನ್ನು ಬಿಟ್ಟು)

"ಇದು ಅಸ್ತಿತ್ವದೊಳಗೊಂದು ಅಸ್ತಿತ್ವ ಇದೆಯೆಂದು ಪೂರ್ವಭಾವನೆ ಇಟ್ಟು ಕೊಂಡ ಹಾಗೆ......'ಇದು' ವಿಚಾರಣೆಗೊಳಪಟ್ಟ ವಸ್ತು, ಇದರ ಹೊರಗೆ ಶೂನ್ಯತೆ, ಗುರಿಯನ್ನು ತೋರಿಸಲಾದ ಸೈನಿಕ ಬೇರೆ ದಿಕ್ಕುಗಳನ್ನು ಬಿಟ್ಟು ಗುರಿಯಿರುವ ಕಡೆಗೇ ತನ್ನ ದೃಷ್ಟಿಯನ್ನು ಕೇಂದ್ರೀಕರಿಸುತ್ತಾನೆ......" ಅರ್ಜುನ ಸಹ ತನ್ನ ಪರೀಕ್ಷೆಯಲ್ಲಿ ಪಕ್ಷಿಯ ಕಣ್ಣನ್ನೇ ದೃಷ್ಟಿಯ ಕೇಂದ್ರವನ್ನಾಗಿ ಮಾಡಿ ಉಳಿದೆಲ್ಲವನ್ನೂ ಅಂದರೆ ಮರ, ಗುರುಗಳನ್ನೂ ಸಹ, ಶೂನ್ಯತೆಯಲ್ಲಿ ದೂಡಿಬಿಡುತ್ತಾನೆ. ಈ ರೀತಿ ವಸ್ತುವನ್ನು ಇನ್ನುಳಿದ ದೃಷ್ಟಿಗೋಚರ ಜಗತ್ತಿನಿಂದ ಬೇರೆ ಮಾಡಲಾಗುತ್ತದೆ. ಪ್ರಜ್ಞೆ ವಸ್ತುವಿನ ಬಗ್ಗೆ ಯೋಚಿಸುತ್ತಿರುವಾಗ ಸ್ವಪ್ರಜ್ಞೆಯನ್ನೂ ಹೊಂದಿರುತ್ತದೆ. ಉದಾಹರಣೆಗೆ 'ಅದು ಒಂದು ಕುರ್ಚಿ, ಹಾಗೂ ನಾನು ಆ ಕುರ್ಚಿ ಅಲ್ಲ' ಎನ್ನುವಾಗ. ವಸ್ತುವಿಗೆ ಒಂದು ವಿಶಿಷ್ಟ ರೂಪವನ್ನು ಕೊಡುವ ಸಲುವಾಗಿ ಪ್ರಜ್ಞೆ ಇನ್ನುಳಿದುದನ್ನು ನಿರಾಕರಿಸುತ್ತದೆ; ಹಾಗೂ ಆ ವಸ್ತುವಿಗೆ ಒಂದು ಅರ್ಥವನ್ನು ಕಲ್ಪಿಸುವುದರ ಮೂಲಕ ಅದನ್ನು ಅವ್ಯವಸ್ಥೆಯಿಂದ ಹೊರಗೆ ತೆಗೆಯುತ್ತದೆ. ಅದನ್ನು ತನಗಾಗಿ ಇರುವ ತಾನು ಎನ್ನುತ್ತ ಸಾರ್ತ್ರ, "ಯಾವುದರ ಮೂಲಕ ವಸ್ತುಗಳಲ್ಲಿ ಶೂನ್ಯತೆ ಬರುತ್ತದೆಯೋ ಆ ಅಸ್ತಿತ್ವ"[7] ಎಂದು ಕರೆಯುತ್ತಾನೆ. ಆದುದರಿಂದ ನಾಸ್ತಿತ್ವ ಸತ್ಯಕ್ಕೇ ಅರ್ಥ ಕಲ್ಪಿಸುವ, ಅದನ್ನು ಸ್ಪಷ್ಟಪಡಿಸುವ ಶಕ್ತಿ.

ಈ ರೀತಿ ಸಾರ್ತ್ರನ ಸಿದ್ಧಾಂತದಲ್ಲಿ ಶೂನ್ಯತೆ ಪ್ರಜ್ಞೆಯನ್ನೇ ಸೃಷ್ಟೀಕರಿಸುತ್ತದೆ. ಅದೆಷ್ಟು ಅಸಮಂಜಸವಾಗಿ ಕಂಡರೂ ಅದನ್ನೇ ಉದಾತ್ತಗೊಳಿಸುತ್ತದೆ. ನಾಸ್ತಿತ್ವದ ಮೂಲಕವೇ ಪ್ರಜ್ಞೆಯು ಉಗಮ ಪ್ರಾಧಾನ್ಯತೆ ಪಡೆಯುತ್ತದೆ. ಪ್ರಜ್ಞೆ ಆಯ್ಕೆ ಮಾಡುವ ಸಲುವಾಗಿ, ಯೋಜನೆ ಮಾಡುವುದರ ಸಲುವಾಗಿ, ಇನ್ನಿತರ ವಸ್ತುಗಳೆಲ್ಲವನ್ನೂ ತೊಡೆದು ಹಾಕುತ್ತದೆ. ತನ್ನ 'ಜ್ಯಾಂ–ಪಾಲ ಸಾರ್ತ್ರ' ಎಂಬ ಗ್ರಂಥದಲ್ಲಿ ಆರ್. ಎಮ್. ಆಲ್ಬರ್ಸ "ಮಾನವ ಎಷ್ಟರಮಟ್ಟಿಗೆ ನೇತ್ಯಾತ್ಮಕ ಎಂದರೆ, ಕಿಂಚಿತ್ ಅರಿವೂ ಕೂಡ ಅವನು 'ನಾನೊಂದು ಶಿಲೆಯನ್ನು ನೋಡುತ್ತಿದ್ದೇನೆ, ಹಾಗೂ ನಾನು ಆ ಶಿಲೆಯಲ್ಲ' ಎನ್ನುವಂತೆ ಮಾಡುತ್ತದೆ" ಎನ್ನುತ್ತಾನೆ.

ಆದರೆ ಶೂನ್ಯತೆಯಿಂದಲೇ ಪ್ರಜ್ಞೆಯನ್ನು ಪಡೆಯಲಾಗುತ್ತದೆ ಎಂದು ಭಾವಿಸಲಾಗದು. "ಪ್ರಜ್ಞೆಗೆ ಅಸ್ತಿತ್ವ ಪ್ರಜ್ಞೆಯಿಂದಲೇ ದೊರಕುತ್ತದೆ......ಪ್ರಜ್ಞೆಗಿಂತ

ಮೊದಲು 'ಪ್ರಜ್ಞೆಯು ಶೂನ್ಯತೆ' ಎಂಬುದು ಇಲ್ಲ. ಪ್ರಜ್ಞೆಗಿಂತ ಮೊದಲು 'ಇಲ್ಲದಿರುವ ಪ್ರಜ್ಞೆ' ಎನ್ನಲಾಗದ ಅಸ್ತಿತ್ವದ ವಿಸ್ತಾರ ಮಾತ್ರವನ್ನು ನಾವು ಊಹಿಸಬಹುದು".[8] ಪ್ರಜ್ಞೆಯು ಗೈರುಹಾಜರಿಯಲ್ಲಿ ವಸ್ತುಗಳಿಲ್ಲ; ಅವ್ಯವಸ್ಥೆ ಮಾತ್ರ ಇದೆ. ಹಾಗೂ ವಸ್ತುಗಳಿಲ್ಲದಿದ್ದರೆ ಪ್ರಜ್ಞೆಯೂ ಅರ್ಥರಹಿತವಾಗುತ್ತದೆ. ಏಕೆಂದರೆ ಪ್ರಜ್ಞೆ ಎಂದರೆ ವಸ್ತುಗಳ ಕಲ್ಪನೆಯೇ ಆದರೂ, ಇದರ ಅರ್ಥ ಪದಾರ್ಥವೇ ವಿಚಾರಕ್ಕೆ ಜನ್ಮ ಕೊಡುತ್ತದೆ ಎಂದಲ್ಲ. ಪ್ರಜ್ಞೆಯನ್ನು ಮೂಲವಾಗಿಟ್ಟುಕೊಂಡು ಸಾರ್ತ್ರ್ ವಸ್ತು ಹಾಗೂ ಪ್ರಜ್ಞೆಗಳು ಸ್ವಲ್ಪಮಟ್ಟಿಗೆ ಒಂದರ ಮೇಲೊಂದು ಅವಲಂಬಿಸುವಂತೆ ಮಾಡುವುದರ ಮೂಲಕ ಅವುಗಳ ನಡುವಣ ಸಂಬಂಧವನ್ನು ದೃಢಗೊಳಿಸುತ್ತಾನೆ. "ಪ್ರಜ್ಞೆಯಲ್ಲಿ ಮೂರ್ತವಾದುದೇನಿಲ್ಲ, ಅದು 'ತೋರಿಕೆ' ಮಾತ್ರ. ಆದರೆ ಅದು ದೃಷ್ಟಿಗೋಚರವಾಗುವಷ್ಟರಮಟ್ಟಿಗೆ ಮಾತ್ರ ಅಸ್ತಿತ್ವ ಪಡೆದಿರುತ್ತದೆ. ಅದು ಹಾಗೆಯೇ ಏಕೆಂದರೆ ಪ್ರಜ್ಞೆ ಬರಿ ಶುದ್ಧ ಪ್ರಜ್ಞೆ ಮಾತ್ರ. ಕಾರಣ, ಅದು ಪೂರ್ಣ ಶೂನ್ಯತೆ. (ಸಂಪೂರ್ಣ ಜಗತ್ತು ಅದರ ಹೊರಗಿರುವುದರಿಂದ) ಈ ತೋರಿಕೆಯ ಹಾಗೂ ಅದರೊಳಗೆ ಅಡಕವಾಗಿರುವ ಅಸ್ತಿತ್ವದ ನಡುವಣ ತಾದಾತ್ಮ್ಯದಿಂದಾಗಿ ಅದನ್ನು ಪರಮ ತತ್ವ ಎನ್ನಬಹುದು."[9]

ಸಾರ್ತ್ರ್—ಜೀವನ ಮತ್ತು ಕೃತಿ

ವಿಶ್ವದ ಅತಿ ಶ್ರೇಷ್ಠ ಗೌರವ ಎನಿಸಿರುವ ನೊಬೆಲ್ ಪುರಸ್ಕಾರವನ್ನು ತಿರಸ್ಕರಿಸಿದ ಹಲವೇ ಮಹಾಶಯರಲ್ಲಿ ಜ್ಯಾಂ–ಪಾಲ ಸಾರ್ತ್ರ್ ಪ್ರಮುಖ. 1964 ರಲ್ಲಿ ಆತನಿಗೆ ಸಾಹಿತ್ಯದ ನೊಬೆಲ್ ಪುರಸ್ಕಾರ ನೀಡುತ್ತಾ ಸ್ವೀಡಿಷ್ ಅಕಾಡೆಮಿ ಆತನ ವಿಚಾರವಾಗಿ: 'ಸಮೃದ್ಧ ವಿಚಾರಗಳು ಹಾಗೂ ಸ್ವಾತಂತ್ರ್ಯದ ಸ್ಫೂರ್ತಿ, ಸತ್ಯಾನ್ವೇಷಣೆಯ ಕುತೂಹಲದಿಂದ ಕೂಡಿದ ಅವನ ಸಾಹಿತ್ಯ ನಮ್ಮ ಯುಗದಲ್ಲಿ ಅತೀವ ಪ್ರಭಾವ ಬೀರಿವೆ'[1] ಎಂದು ಹೇಳಿತ್ತು. ಸಾರ್ತ್ರ್‌ನಿಗೆ ಇದೊಂದು ವಿನಮ್ರ ಸನ್ಮಾನ.

ಸಾರ್ತ್ರ್ ಈ ಪುರಸ್ಕಾರವನ್ನು ಒಪ್ಪಿಕೊಳ್ಳಲಿಲ್ಲ. ಇದನ್ನು ತಿರಸ್ಕರಿಸಲು ಆತ ಕೊಟ್ಟ ವೈಯಕ್ತಿಕ ಕಾರಣವೆಂದರೆ, ಲೇಖಕನ ಹೊಣೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಆತ ಯಾವ ಅಧಿಕೃತ ಮರ್ಯಾದೆಯನ್ನೂ ಸ್ವೀಕರಿಸಿಲ್ಲ ಎಂಬುದು. ಆತ 'ಲೆಜನ್ ಆಫ್ ಆನರ'ನ ಸದಸ್ಯನಾಗಲೂ ಸಹ ತಿರಸ್ಕರಿಸಿದ್ದ. ಇಷ್ಟೇ ಅಲ್ಲ, ಲೆನಿನ್ ಪುರಸ್ಕಾರವನ್ನು ಒಂದು ವೇಳೆ ಅವನಿಗೆ ನೀಡಿದಲ್ಲಿ ಅದನ್ನೂ ತಿರಸ್ಕರಿಸುವೆ ನೆಂದೂ ಆತ ಸ್ಪಷ್ಟಪಡಿಸಿದ್ದ. ಅವನು ಹೀಗೆ ಹೇಳಲು ಕೆಲವು ವಸ್ತುನಿಷ್ಠ ಕಾರಣ ಗಳೂ ಇದ್ದವು. ಸ್ವೀಡಿಷ್ ಅಕಾಡೆಮಿ 'ಪಶ್ಚಿಮ'ದೊಂದಿಗೆ ಮಾತ್ರ ಗುರುತಿಸಿ ಕೊಳ್ಳುತ್ತಿದೆ ಎಂಬುದೇ ಆಗಿತ್ತು. ಹಿಂದೆ ನೀಡಲಾದ ಯಾವ ಪುರಸ್ಕಾರಗಳೂ ಎಲ್ಲ ರಾಷ್ಟ್ರಗಳನ್ನೂ, ಎಲ್ಲ ತರಹೆಯ ಸಿದ್ಧಾಂತಗಳನ್ನೂ ಪ್ರತಿನಿಧಿಸುವುದಿಲ್ಲ ಎಂಬುದು ಆತನ ಅಭಿಪ್ರಾಯವಾಗಿತ್ತು. ಆತ ತನ್ನ ಒಂದು ಲೇಖನದಲ್ಲಿ ಸ್ವೀಡಿಷ್ ಅಕಾಡೆಮಿ 'ಪಶ್ಚಿಮ'ದ ಲೇಖಕರನ್ನು ಮಾತ್ರ, ಅಥವಾ ಪೂರ್ವದ ಪೂರ್ವ–ವಿರೋಧೀ ಲೇಖಕರನ್ನು ಮಾತ್ರ ಸನ್ಮಾನಿಸಿದೆ ಎಂದು ಆಪಾದಿಸಿದ್ದ.

ಪುರಸ್ಕೃತರಾದ ಪೂರ್ವದ ವಿರೋಧಿ ಲೇಖಕರಲ್ಲಿ ಬೋರಿಸ್ ಪ್ಯಾಸ್ತೆರ್ನಾಕ್ ಹಾಗೂ ಅಲೆಗ್ಸಾಂಡರ ಸೋಲ್ಜೆನಿತ್ಸಿನ್‌ರನ್ನು ಉದಾಹರಿಸಬಹುದು. ರಷ್ಯದ

ಮೈಕೆಲ್ ಶೊಲೊಖೋವ್ ಹಾಗೂ ಚಿಲಿಯ ಪ್ಯಾಬ್ಲೋ ನೆರೂದಾರಂತಹ ಲೇಖಕರು ಕಡೆಗಣಿಸಲ್ಪಟ್ಟಿದ್ದಾರೆ ಎಂದು ಸಾರ್ತ್ರ್ ದೂರಿದ್ದ. (ಸಾರ್ತ್ರ್ ಉಲ್ಲೇಖಿಸಿದ ಈ ಇಬ್ಬರೂ ಲೇಖಕರು ನಂತರದಲ್ಲಿ ಪುರಸ್ಕೃತರಾಗಿದ್ದಾರೆ) ಒಂದು ವೇಳೆ ತಾನು ಆ ಪುರಸ್ಕಾರವನ್ನು ಸ್ವೀಕರಿಸಿದ್ದೇ ಆದರೆ, ಅದೇ ಪುರಸ್ಕಾರವನ್ನು ಸ್ವೀಕರಿಸಿದ್ದ ಆಲ್ಬರ್ ಕಾಮುವನ್ನು ಹೇಗೆ 'ಪಶ್ಚಿಮ'ದಿಂದ ಗೆಲ್ಲಲ್ಪಟ್ಟ ಎಂದು ಟೀಕಿಸಲಾಗಿತ್ತೋ ಆದೇ ರೀತಿ ತನ್ನನ್ನೂ ಸಹ ಟೀಕಿಸಬಹುದೆಂದು ಸಾರ್ತ್ರ್ ಶಂಕಿಸಿದ್ದ.

ಲೇಖಕ ಹಾಗೂ ದಾರ್ಶನಿಕ ಇಬ್ಬರನ್ನೂ ಅವರ ಜೀವನ ಚರಿತ್ರೆಯ ಮೂಲಕ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಈ ಹೇಳಿಕೆ ಸಾರ್ತ್ರ್‌ನಿಗೆ ಹೆಚ್ಚು ಅನ್ವಯಿಸುತ್ತದೆ. ಅಸ್ತಿತ್ವವಾದಿಗಳು ತತ್ವಚಿಂತನೆ ವಸ್ತುನಿಷ್ಠವಾಗಿರದೇ ವ್ಯಕ್ತಿಗತವಾಗಿರುತ್ತದೆ ಎನ್ನುತ್ತಾರೆ. ಸ್ಪೇನಿನ ಅಸ್ತಿತ್ವವಾದಿ ಮೈಕೇಲ್ ದ ಉನಾಮುನೊ, "ತತ್ವಶಾಸ್ತ್ರ ಪ್ರತಿಯೊಬ್ಬ ತತ್ವಜ್ಞಾನಿಯ ವ್ಯಕ್ತಿಗತ ಸೃಷ್ಟಿ ಹಾಗೂ ಪ್ರತಿಯೊಬ್ಬ ತತ್ವಜ್ಞಾನಿಯೂ ರಕ್ತ ಮಾಂಸಗಳಿಂದ ಕೂಡಿದ ವ್ಯಕ್ತಿಯಾಗಿರುತ್ತಾನೆ. ಅತ ಬರೆಯುವುದು ಸಹ ತನ್ನಂತಹ ರಕ್ತ-ಮಾಂಸದ ಮನುಷ್ಯರಿಗಾಗಿಯೇ. ಇಂತಹ ಈ ಮನುಷ್ಯ ತತ್ವಚಿಂತನೆ ಮಾಡುತ್ತಾನೆ"[2] ಎನ್ನುತ್ತಾನೆ.

ಸಾರ್ತ್ರ್‌ನ ಸಿದ್ಧಾಂತ, ಸಾಹಿತ್ಯ ಅವನದೇ ರಕ್ತ-ಮಾಂಸದ ತುಡಿತಗಳೊಂದಿಗೆ ರೂಪುಗೊಂಡಿವೆ. ಹೆಗೆಲ್ ತತ್ವಶಾಸ್ತ್ರವನ್ನು ಬರೆದಾಗಲೂ ಸಹ ಆತನ ಅಧ್ಯಯನದ ಕೋಣೆಯ ಹೊರಗೆ ಮದ್ದು-ಗುಂಡುಗಳು ಸಿಡಿಯುತ್ತಿದ್ದರೂ ಸಹ ಆತ ಅದರ ಬಗ್ಗೆ ಎಂದೂ ಬರೆಯಲಿಲ್ಲ. ಸಾರ್ತ್ರ್ ಅವುಗಳ ವಿಚಾರವಾಗಿಯೇ ಬರೆದ ; ಮತ್ತು ಆತ ತನ್ನ ಹಾಗೂ ತನ್ನ ಸಂಬಂಧಗಳನ್ನು ಸಾಹಿತ್ಯದಲ್ಲಿ ಮೂರ್ತೀಕರಿಸಿದ. ತನ್ನದೇ ಅಸ್ತಿತ್ವದ ಸಮಸ್ಯೆಯನ್ನು ತನ್ನ ಚಿಂತನೆಯಲ್ಲಿ ಚಿಂತಿಸಿದ್ದಾನೆ.

1905ರ ಜೂನ್ 21 ರಂದು ಫ್ರಾನ್ಸಿನ ಒಬ್ಬ ನೌಕಾದಳದ ಅಧಿಕಾರಿಯ ಮಗನಾಗಿ ಜನಿಸಿದ ಸಾರ್ತ್ರ್ ಇನ್ನೂ ಎರಡು ವರ್ಷದ ಶಿಶುವಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡ. ಇಂತಹ ಸ್ಥಿತಿಯಲ್ಲಿ ಪ್ರೊಟೆಸ್ಟಂಟ ಅನುಯಾಯಿ ತಾತ ಈತನನ್ನು ಬೆಳಸಿದ. ಅವನ ಪರಿವಾರವೆಲ್ಲ ಕ್ಯಾಥೋಲಿಕ್ ಪಂಥದ ಅನುಯಾಯಿಯಾಗಿತ್ತು. ಆದ್ದರಿಂದಲೇ ಸಾರ್ತ್ರ್ "ನಾನು ಪ್ರೊಟೆಸ್ಟಂಟ್ ಹಾಗೂ ಕ್ಯಾಥೋಲಿಕ್ ಎರಡೂ ಆಗಿದ್ದೆ" ಎನ್ನುತ್ತಾನೆ. ಹೀಗಾಗಿ ಸಾರ್ತ್ರ್ "...ನಾಸ್ತಿಕನಾಗಿ ಪರಿಣಮಿಸಿದ ಒಬ್ಬ ಧಾರ್ಮಿಕ ಮಿಶ್ರತಳಿ."[3]

ಅವನ ಮುಂದಿನ ಜೀವನದ ಮೇಲೆ ಬಾಲ್ಯದ ಅನುಭವಗಳು ಬಹಳ ಪ್ರಭಾವ ಬೀರಿದ್ದವು. ಆತನಿಗೆ ಓದಿನ ಮೇಲೆ ಬಹಳ ಪ್ರೀತಿ. ಅತ ತನ್ನ ಆತ್ಮಕಥೆಯ ಲೇಖನಗಳನ್ನು 'ಶಬ್ದಗಳು' ಎಂದು ಹೆಸರಿಸಿದ್ದಾನೆ. ತಾಯಿ ಆತನನ್ನು ಲಕ್ಸೆಂಬರ್ಗ

ತೋಟಕ್ಕೆ ಕರೆದೊಯ್ದಾಗ ಯಾವ ಹುಡುಗನೂ ಅವನೊಂದಿಗೆ ಆಟವಾಡುತ್ತಿರಲಿಲ್ಲ. "ಸಮವಯಸ್ಕರಾದ ಹುಡುಗರ ಈ ತಿರಸ್ಕಾರದಿಂದ ಆತ ತಾತನ ಮುಂದೆ ನಾಟಕ ಮಾಡುವುದರ ಮೂಲಕ ಹಾಗೂ ಅವನ ಮೇಲೆ ಆತ ಹೊರಿಸಿದ ಸಾಹಿತ್ಯದ ಪ್ರವೃತ್ತಿಯ ಮೂಲಕ ತನ್ನನ್ನು ಉಳಿಸಿಕೊಂಡ."[4] ಈ ಸಂದರ್ಭದಲ್ಲಿ ಸಾರ್ತ್ರ ತನ್ನನ್ನಷ್ಟೇ ಏಕೆ 'ಮಾನವ'ನನ್ನೇ 'ವ್ಯವಸ್ಥೆ'ಯಲ್ಲಿ ಸ್ಥಾನವಿಲ್ಲದಿರುವ ಒಂದು 'ಆಕಸ್ಮಿಕ' ಘಟನೆ ಎಂದು ಭಾವಿಸತೊಡಗಿದ. ಆತ ತನ್ನನ್ನು ಅಸಂಬದ್ಧ, ಅಧರ್ಮ ಸಂತಾನವೆಂದೂ ಪರಿಗಣಿಸತೊಡಗಿದ. ಆತನ ಶೈಶವದಲ್ಲೇ ಆತನ ತಾಯಿಯ ಪುನರ್‌ವಿವಾಹ ಆತನಲ್ಲಿ ಇಂತಹ ಭಾವನೆಗಳ ಬೆಳವಣಿಗೆಗೆ ಮತ್ತೂ ಅವಕಾಶಮಾಡಿ ಕೊಟ್ಟಿತು.

ಆತ ಉಚ್ಚ ವಿದ್ಯಾಭ್ಯಾಸಕ್ಕಾಗಿ ಪ್ಯಾರಿಸ್ಸಿಗೆ ಹಿಂದಿರುಗಿದ ಮೇಲೆ, ಫ್ರಾನ್ಸಿನ ಅತ್ಯುತ್ತಮವಾದ ಶಾಲೆ ಎಕೋಲೇ ನಾರ್ಮೆಲ್ ಸುಪೀರಿಯರ್‌ನಲ್ಲಿ ವಿದ್ಯಾಭ್ಯಾಸ ನಡೆಸಿದ. ಸಾರ್ತ್ರ ಸಹ ಅಲ್ಲಿ ಪ್ರಥಮ ಪ್ರಯತ್ನದಲ್ಲಿಯೇ 'ಅಗ್ರೆಗೇಶನ್' (ಫ್ರಾನ್ಸ ನಲ್ಲಿ ಕೊಡುವ ಪದವಿ) ಪಾಸಾಗಲಿಲ್ಲ ಎಂದು ಕೇಳಿ ಇಂದಿನ ಎಷ್ಟೋ ವಿದ್ಯಾರ್ಥಿ ಗಳಿಗೆ ಸಮಾಧಾನವೆನಿಸಬಹುದು. ಏನೇ ಆದರೂ ಎರಡನೆಯ ಸಾರಿ ಸಾರ್ತ್ರ ಪ್ರಶಂಸಾರ್ಹವಾದ ಪ್ರಗತಿ ತೋರಿ 1929ರಲ್ಲಿ ತತ್ವಶಾಸ್ತ್ರದಲ್ಲಿ ಅಗ್ರೆಗೇಶನ್ ಪಡೆದ. ನಂತರ 1931ರ ವರೆಗೆ ಸೇನೆಯಲ್ಲಿ ಸೇವೆ ಸಲ್ಲಿಸಿದ.

ಸೇನೆಯಲ್ಲಿ ಸೇವೆ ಸಲ್ಲಿಸಿದನಂತರ ಆತ ಲೇ ಹವ್ರೇನ ಬಂದರಿನ ಒಂದು ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಎರಡು ವರ್ಷಕಾಲ ತತ್ವಶಾಸ್ತ್ರದ ಪಾಠ ಹೇಳಿದ. ಆತನ ಮೊದಲ ಕಾದಂಬರಿ 'ನಾಸಿಯ'ದಲ್ಲಿ ಬೋವಿಲ್ಲಿ ಎಂದು ಹೆಸರಿಸಲಾದ ಈ ಬಂದರಿ ನಲ್ಲಿಯೇ ಈ ಕಾದಂಬರಿಗೆ ಹಿನ್ನೆಲೆ ದೊರೆತದ್ದು. ಅಲ್ಲಿ ಮನೋವಿಕಾರಗಳ ವಿಚಾರ ಸರಣಿಯ ಅಧ್ಯಯನಕ್ಕೆ ಅನುಕೂಲವಾಗಲೆಂದು ಆತನಿಗೆ ಮನೋವಿಕಲ್ಪ ಉಂಟು ಮಾಡುವಂತಹ ಮೆಸ್ಕಾಲಿನ್ ಇಂಜೆಕ್ಷ್ ಕೊಡಲಾಗಿತ್ತೆಂದು ಆತನ ಸಂಗಾತಿ ಸಿಮೊಂದ ಬುವೆ ಬರೆಯುತ್ತಾಳೆ. "ಆತನ ಗ್ರಹಿಕೆಯ ಶಕ್ತಿ ಆಕಾರ ಕಳೆದುಕೊಂಡಿತು, ಮನೆ ಮನೆಗಳಲ್ಲಿ ಆತನ ಕಡೆಗೆ ಹಲ್ಲು ಕಿರಿಯುವ ಸಿಡುಕು ನೋಟ ತುಂಬಿದಂತೆ ಕಾಣ ತೊಡಗಿತು...ನಾಸಿಯದ ಪ್ರತಿಯೊಂದು ಪುಟದಲ್ಲಿಯೂ ಆತ ಕಾತರತೆಯ ಬಲಿ ಯಂತೆ ಕಾಣುತ್ತಾನೆ.'' ಇದೇ ನಾಸಿಯ ಕಾದಂಬರಿಯಿಂದಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಾರ್ತ್ರ ಚಿರಪರಿಚಿತನಾದ.

ಸಾರ್ತ್ರ ತನ್ನ ಯುಹೂದಿ ಗೆಳೆಯ ರೇಮುಂಡ್ ಅರನ್‌ನಿಂದ ಪ್ರಭಾವಿತನಾಗಿ ಒಂದು ವರ್ಷಕಾಲ ಬರ್ಲಿನ್‌ನ ಫ್ರೆಂಚ್ ಇನ್‌ಸ್ಟಿಟ್ಯೂಟಿನಲ್ಲಿ ಹಸ್ರೆರ್ಲ್‌ನ ಫಿನಾಮಿನಾಲಜಿಯ ಅಧ್ಯಯನ ನಡೆಸಿದ. ನಂತರ 1937ನೆಯ ಇಸವಿಯಲ್ಲಿ

ಹಸ್ರೆಲ್‌ನ ಫಿನಾಮಿನಾಲಜಿಯನ್ನು ಆಧರಿಸಿ 'ಲೆ ಇಮ್ಯಾಜಿನೇಶನ್' ರಚಿಸಿದ. ಅದಾದ ಒಂದು ವರ್ಷದ ನಂತರ ಆತ ತನ್ನ ಮೊದಲ ಕಾದಂಬರಿ 'ಲೆ ನಾಸೀ' ರಚಿಸಿದ. ನಾಸಿಯು ಕೃತಿ, ಸಾರ್ತ್ರ್ ಲೆ ಹವ್ರೆ ಬಂದರಿನಲ್ಲಿ ಪಡೆದ ಸ್ವಂತ ಅನುಭವದ ನಿರೂಪಣೆ. ಲೇ ಹವ್ರೆನಿಂದ ಆತ ಲಾವ್ರೋ ಪಟ್ಟಣದ ಶಾಲೆಗೆ ಹೋದ. ಕೊನೆಯು ದಾಗಿ ಪಾಶ್ಚರನ ಶಾಲೆಗೆ ಹೋಗಿ ತತ್ವಶಾಸ್ತ್ರವನ್ನು ಬೋಧಿಸಿದ. ಲೆ ನಾಸೀ, ಅಸ್ತಿತ್ವ ಮತ್ತು ಮಾನವನ ಉದ್ವೇಗಗಳು, ಗೋಡೆ ಮತ್ತು ಇತರ ಕೆಲವು ಕೃತಿ ಗಳನ್ನು ಆತ ರಚಿಸಿದ್ದು ಇಲ್ಲಿಯೇ.

ಆ ವೇಳೆಗೆ ಎರಡನೆಯ ಮಹಾ ಯುದ್ಧ ಆರಂಭವಾಗಿತ್ತು. ಆತ ಸ್ವಂತ ಆಸೆ ಯಿಂದ ಫ್ರಾನ್ಸಿನ ಸೇನಾದಳವನ್ನು ಸೇರಿದ. 1940ರಲ್ಲಿ ಫ್ರಾನ್ಸ ಶರಣಾಗತ ವಾದಾಗ ಸಾರ್ತ್ರ್ ಯುದ್ಧಕೈದಿಯಾಗಿ ಮಾಡಲ್ಪಟ್ಟ. 1941ರಲ್ಲಿ ದೇಹಸ್ಥಿತಿ ಹದ ಗೆಟ್ಟಿತೆಂದು ಅವನನ್ನು ಬಿಡುಗಡೆ ಮಾಡಲಾಯಿತು. ಕೈದಿಗಳ ಡೇರೆಯಲ್ಲಿ ಆತ 'ಬಾರಿಯೊಣಾ' ಎಂಬ ನಾಟಕ ರಚಿಸಿದ. ಅದರ ವಸ್ತು ಸ್ಪಷ್ಟವಾಗಿ ಕ್ರಿಸ್ತನ ಜನ್ಮ ಹಾಗೂ ರೋಮನ್ನರ ಪ್ಯಾಲೆಸ್ಟೈನ್ ಆಕ್ರಮಣಕ್ಕೆ ಸಂಬಂಧಿಸಿದ್ದಾಗಿದ್ದರೂ, ನಾಜಿ ಗಳ ವಿರುದ್ಧ ಪ್ರತಿಭಟಿಸಬೇಕೆಂದು ಅದರಲ್ಲಿ ಒಂದು ಕರೆ ಅಡಕವಾಗಿತ್ತು. ಇದರ ಆಶಯ ಏನೆಂಬುದು ತಿಳಿಯದೇ ನಾಜಿಗಳು ನಾಟಕವನ್ನು ನೋಡಿ ಆನಂದಪಟ್ಟರು, ಅದನ್ನು ಪ್ರಶಂಸಿಸಿದರು. ನಂತರ ಆತ ಕಾಂಡರ್‌ಸೆಟ್‌ನ ಶಾಲೆಯಲ್ಲಿ ತತ್ವಶಾಸ್ತ್ರದ ಅಧ್ಯಾಪಕನಾದ. ಆತ ಫ್ರಾನ್ಸಿನ ಪ್ರತಿಭಟನಾ ಆಂದೋಲನದಲ್ಲಿಯೂ ಕ್ರಿಯಾ ಶೀಲನಾಗಿದ್ದ. 'ಸಮಾಜವಾದ ಮತ್ತು ಸ್ವಾತಂತ್ರ್ಯ' ಎಂಬ ಬುದ್ಧಿಜೀವಿಗಳ ಸಂಘಟನೆಯೊಂದನ್ನು ಮಾಡಲು ಪ್ರಯತ್ನಪಟ್ಟ, ಆದರೆ ಆತನಿಗೆ ಯಶಸ್ಸು ದೊರಕಲಿಲ್ಲ. 1943ರಲ್ಲಿ ಆತ ಅಪರಾಧ ಪ್ರಜ್ಞೆ ಹಾಗೂ ಅಪರಾಧಗಳಿಗಾಗಿ ಪಶ್ಚಾತ್ತಾಪ ಪಡುವ ಪ್ರವೃತ್ತಿಯನ್ನು ಪ್ರತಿಭಟಿಸಿ 'ನೊಣಗಳು' (ದ ಫ್ಲೈಸ್) ಎಂಬ ನಾಟಕವನ್ನು ರಚಿಸಿದ. ಆತ ಫ್ರಾನ್ಸಿನ ಪ್ರತಿಭಟನಾ ಆಂದೋಲನದ ತಾತ್ವಿಕ ನಿರೂಪಣೆಯನ್ನು ತನ್ನ ಅಸ್ತಿತ್ವವಾದದ ಆಧಾರದ ಮೇಲೆ ರಚಿಸಿದ.

ಹೇಗೂ ಸಾರ್ತ್ರ್‌ನ ಪ್ರತಿಭಟನಾ ಆಂದೋಲನದ ಜೊತೆಗಾರ ಅಲ್ಬರ್ ಕಾಮು ಸಮಯಕ್ಕೆ ಸರಿಯಾಗಿ ನೀಡಿದ ಎಚ್ಚರಿಕೆಯಿಂದಾಗಿ ಸಾರ್ತ್ರ್ ದೇಶತ್ಯಾಗ ಮಾಡಿ ಹೋಗಬೇಕಾಯಿತು. ಈ ಮಧ್ಯೆ ಆತ ತನ್ನ ಎಷ್ಟೋ ಪ್ರಮುಖ ಕೃತಿಗಳಾದ 'ದಾರಿ ಇಲ್ಲ'; 'ಅಸ್ತಿತ್ವ ಮತ್ತು ಶೂನ್ಯತೆ' ಮುಂತಾದವುಗಳನ್ನು ರಚಿಸಿದ. ಸಾರ್ತ್ರ್ ಮತ್ತೆ ಫ್ರಾನ್ಸಿಗೆ ಹಿಂದಿರುಗಿದ್ದು ಸ್ವಾತಂತ್ರ್ಯ ಸೇನೆಯೊಂದಿಗೆ. ಇಷ್ಟಾದಮೇಲೆ ಆತ ತನ್ನ ಸಮಯವನ್ನೆಲ್ಲ ಬರೆಯುವುದಕ್ಕಾಗಿ ಮೀಸಲಿಡಲು 1944ರಲ್ಲಿ ಅಧ್ಯಾ ಪನ ಕಾರ್ಯಕ್ಕೆ ತಿಲಾಂಜಲಿ ನೀಡಿದ.

1945 ರಲ್ಲಿ ಆತನ 'ಸ್ವಾತಂತ್ರ್ಯದ ದಾರಿಗಳು' ಎಂಬ ನಿಯೋಜಿತ ಕಾದಂಬರೀ ಸರಣಿಯ ಮೊದಲ ಕಾದಂಬರಿ 'ಬುದ್ಧಿಯ ಯುಗ' ಪ್ರಕಟಿತವಾಯಿತು. ಇದರ ಕಥಾವಸ್ತು ದ್ವಿತೀಯ ಮಹಾಯುದ್ಧದ ಬಿರುಗಾಳಿಗೆ ಸಿಕ್ಕ ಫ್ರಾನ್ಸಿನ ಚಿತ್ರವಾಗಿತ್ತು. 1947 ರಲ್ಲಿ ಹಾಗೂ 1949 ರಲ್ಲಿ ಸರಣಿಯ ಮಿಕ್ಕೆರಡು ಭಾಗಗಳಾದ 'ಸಂತಾಪ' ಹಾಗೂ 'ಆತ್ಮದಲ್ಲಿ ಕಬ್ಬಿಣ'ಗಳು ಹೊರಬಂದವು. 'ಸಂತಾಪ'ದಲ್ಲಿ ಯುದ್ಧದ ದಾರಿಯಲ್ಲಿ ನಡೆದ ಫ್ರಾನ್ಸ್ ಮತ್ತು 'ಆತ್ಮದಲ್ಲಿ ಕಬ್ಬಿಣ' ದಲ್ಲಿ ಮಹಾಯುದ್ಧ ಹಾಗೂ ಫ್ರಾನ್ಸಿನ ಪರಾಭವಗಳು ಕಥಾವಸ್ತುಗಳಾಗಿವೆ. ತತ್ವಶಾಸ್ತ್ರದ ಪ್ರಾಧ್ಯಾಪಕ ಮ್ಯಾಥ್ಯೂ ಈ ಕಾದಂಬರಿ ಸರಣಿಯ ಪ್ರಮುಖ ಪಾತ್ರ. ಮ್ಯಾಥ್ಯೂವನ್ನೇ ಬೇಕಾದರೂ ಸಾರ್ತ್ರನೆಂದು ಭಾವಿಸಿ ಈ ಕಾದಂಬರಿಗಳನ್ನು ಓದಬಹುದು. ಏಕೆಂದರೆ ಸಾರ್ತ್ರ ಈ ಕಾದಂಬರೀ ಸರಣಿಯಲ್ಲಿ ತನ್ನನ್ನೇ ಅಭಿವ್ಯಕ್ತಿಸಿಕೊಳ್ಳುತ್ತಾನೆ.

ಕಮ್ಯೂನಿಸ್ಟರು ಸಾರ್ತ್ರನನ್ನಾಗಲೀ, ಸಾರ್ತ್ರ ಕಮ್ಯೂನಿಸ್ಟರನ್ನಾಗಲೀ ಎಂದೂ ನಂಬಲಿಲ್ಲ. ತನ್ನ ನಾಟಕ 'ರೆಡ್ ಗ್ಲೋವ್ಸ್'ನಲ್ಲಿ ಪಕ್ಷಕ್ಕಾಗಿ ಕಮ್ಯೂನಿಸ್ಟರು ವ್ಯಕ್ತಿಗಳನ್ನು ಬಲಿಕೊಡುವ ವಿಚಾರವನ್ನು ಸಾರ್ತ್ರ ಖಂಡಿಸಿದ. ಆದರೆ ಆತ ಬಂಡವಾಳಶಾಹಿಯ ಪಕ್ಷವನ್ನೂ ವಹಿಸಿದವನಲ್ಲ. ಆದ್ದರಿಂದಲೇ ತನ್ನ 'ಮರ್ಯಾದಸ್ಥ ಸೂಳೆ' ಎಂಬ ನಾಟಕದಲ್ಲಿ ಆತ ಅಮೇರಿಕದ ನಿಗ್ರೋಗಳ ಶೋಷಣೆಯನ್ನು ಖಂಡಿಸಿದ. ಕಮ್ಯೂನಿಸ್ಟರಾಗಲೀ, ಸಾರ್ತ್ರನಾಗಲೀ ಎಂದೂ ಒಬ್ಬರನ್ನೊಬ್ಬರು ಸ್ವೀಕರಿಸದಿದ್ದರೂ ಸಾರ್ತ್ರ, ಮಾರ್ಕ್ಸ್‌ವಿರೋಧಿಯೂ ಅಲ್ಲ. ಆತ ತನ್ನ ಇತ್ತೀಚಿನ ಗ್ರಂಥವಾದ 'ಗತಿತಾರ್ಕಿಕವಾದದ ಸಮಾಲೋಚನೆ'ಯಲ್ಲಿ ಅಸ್ತಿತ್ವವಾದವನ್ನು ಮಾರ್ಕ್ಸ್‌ವಾದದೊಂದಿಗೆ ಸಮನ್ವಯಿಸಲು ಪ್ರಯತ್ನಿಸಿದ್ದಾನೆ. ಈ ಗ್ರಂಥದ ಎರಡನೆಯ ಭಾಗ ಇನ್ನೂ ಪ್ರಕಟವಾಗಿಲ್ಲ.

ವ್ಯಕ್ತಿಗತವಾಗಿ ಸಾರ್ತ್ರ ತುಂಬ ಸರಳ ವ್ಯಕ್ತಿ. ಆತನ ಸಂದರ್ಶಕರು ಒಂದು ಹೋಟೇಲಿನ, ಗುಹೆಯಂತಿರುವ ಸಣ್ಣ ಕೋಣೆಯೊಂದರಲ್ಲಿ ಆತ ವಾಸಿಸುವುದನ್ನು ನೋಡಿ ವಿಸ್ಮಿತರಾಗುತ್ತಾರೆ. ಆತ ತನ್ನ ಜೀವನದ ಆರಂಭ ಕಾಲದಲ್ಲಿಯೇ ಯಾವ ತರದ ಸೊತ್ತು-ಆಸ್ತಿಗಳನ್ನೂ ಹೊಂದಿರಬಾರದೆಂದು ನಿಶ್ಚಯಿಸಿದ್ದ. ಆಸ್ತಿಹೀನತೆಯನ್ನು ಆತ ತನ್ನ ಶೈಶವದಲ್ಲಿಯೇ ಅನುಭವಿಸಿದ್ದ. "...ಆತನ ತಾಯಿ, ಯಾರದೋ ಮನೆಯಲ್ಲಿ ವಾಸಿಸುತ್ತಿರುವುದರಿಂದ ಸುಮ್ಮನಿರಲು ಮುಂಚೆಯೇ ಎಚ್ಚರಿಕೆ ನೀಡಿದ್ದಳು."[5] ಆತ ಆಸ್ತಿ ಸಂಪಾದಿಸಬಹುದಾದಾಗ ಸಂಪಾದಿಸಲಿಲ್ಲ. ಈಗ ಅವನಿಗೆ ಪ್ರಸಿದ್ಧಿ ಬಂದಿರುವಾಗ, ಆತ ಹಣವಂತನಾಗಿರುವಾಗ, ಪ್ಯಾರಿಸ್ಸಿನ ಒಂದು ಕಟ್ಟಡದ ಹತ್ತನೆಯ ಅಂತಸ್ತಿನಲ್ಲಿ ಸಾಮಾನ್ಯವಾದ ಎರಡು ಕೋಣೆಗಳಲ್ಲಿ ವಾಸ ಮಾಡುತ್ತಾನೆ.

ಸಾರ್ತ್ರ್‌ನ ವ್ಯಕ್ತಿತ್ವ ಆತನ ಕಾದಂಬರೀ ಸರಣಿಯ ಮ್ಯಾಥ್ಯೂವಿನಂತೆ. ಈತನೂ ಮ್ಯಾಥ್ಯೂವಿನಂತೆ ಮದುವೆಯಾಗಲಿಲ್ಲ. ಕಾರಣ ಮದುವೆಯೆಂದರೆ ಹೆದರಿಕೆ. ಈತನ ಸಂಗಾತಿ ಹಾಗೂ ಫ್ರೆಂಚ್ ಲೇಖಕಿ ಸಿಮೋಂ ದ ಬುವೆಯೊಡನೆ ಆತನ ಸಂಬಂಧ ಹಲವಾರು ಊಹಾಪೋಹಗಳಿಗೆ ಎಡೆಗೊಟ್ಟಿದೆ. ಒಮ್ಮೆಯಂತೂ ಒಬ್ಬ ಅರಬ್ ರಾಜನೀತಿಜ್ಞ ಸಾರ್ತ್ರ್ ಸಿಮೋಂನೊಂದಿಗೆ ನಡೆಸುತ್ತಿರುವ ಅನೀತಿಯ ಬದುಕನ್ನೇ ಬೇರೆಯವರಿಗೂ ಉಪದೇಶಿಸುತ್ತಾನೆಂದು ಸಹ ಹೇಳಿದ್ದ. ಸಾರ್ತ್ರ್–ಸಿಮೋಂ ಇಬ್ಬರಿಗೂ ಸ್ನೇಹವಿದೆ, ನಿಜ. ಅವರಿಬ್ಬರ ಕಥಾಪಾತ್ರಗಳಲ್ಲಿನ ಸಾಮ್ಯ ಸಾಕಷ್ಟಿದೆ. ಉದಾಹರಣೆಗೆ ಕಥಾಪಾತ್ರಗಳು ತಮ್ಮ ಮೇಲೆ ತಾವೇ ಗಾಯಮಾಡಿಕೊಳ್ಳುವುದು. "ಅದೃಷ್ಟವಶಾತ್ ಸಾರ್ತ್ರ್‌ನ ಜೀವನ ಚರಿತ್ರೆಯ ಬಗ್ಗೆ ವಿವೇಚನೆಯಿಲ್ಲದೇ ಪರೀಕ್ಷೆ ನಡೆಸುವ ಸಮಯ ಇನ್ನೂ ಬಂದಿಲ್ಲ. ಆತನ ಕಥಾಪಾತ್ರಗಳು ತಮ್ಮನ್ನು ತಾವೇ ಗಾಯಗೊಳಿಸಿಕೊಳ್ಳುವ ಘಟನೆಗಳು ಸಾರ್ತ್ರ್‌ನ ಬರವಣಿಯಲ್ಲಷ್ಟೇ ಅಲ್ಲ, ಸಿಮೋಂ ದ ಬುವೆಯ ಪ್ರಥಮ ಕಾದಂಬರಿ 'ಲಾ ಇನ್ವಿಟೀನ್'ನಲ್ಲಿಯೂ ಇದಕ್ಕೆ ಸರಿಸಮನಾದ ಘಟನೆ ಕಂಡುಬರುತ್ತದೆ ಎಂದು ಮಾತ್ರ ಹೇಳಿ ಸುಮ್ಮನಾಗಬೇಕಾಗಿದೆ"[6] ಎನ್ನುತ್ತಾನೆ ವಿದ್ವಾಂಸನೊಬ್ಬ. ಆತನ ವಿವಾಹದ ಬಗ್ಗೆ ಸಿಮೋಂ ಹೇಳುತ್ತಾಳೆ: "ಸಾರ್ತ್ರ್‌ನಲ್ಲಿ ಏಕಪತ್ನೀತ್ವದ ಪ್ರವೃತ್ತಿಯೇನೂ ಇಲ್ಲ, ...ನಮ್ಮಿಬ್ಬರ ಮಧ್ಯೆ ಆತ ವಿವರಿಸಿದ್ದಾನೆ.... ಇದು ಆವಶ್ಯಕ ಪ್ರೇಮದ ಪ್ರಶ್ನೆ ಅಲ್ಲ. ನಾವು ಅನಿರೀಕ್ಷಿತ ಅಥವಾ ಆಕಸ್ಮಿಕ ಪ್ರೇಮದ ವಿಷಯ ಸಹ ತಿಳಿದಿರುವುದು ಸರಿ ಎನಿಸುತ್ತದೆ."[7]

ಸಾರ್ತ್ರ್ ಫ್ರಾನ್ಸ್‌ನಲ್ಲಿ ಅದ್ಭುತ ವ್ಯಕ್ತಿಯಾದ. ಚಾರ್ಲ ದ ಗಾಲನ ನೇತೃತ್ವದಲ್ಲಿ ಸರಕಾರ ಒಂದು ವಾಮಪಂಥೀ ಸಾಪ್ತಾಹಿಕದ ಪ್ರಕಾಶನವನ್ನು ನಿಷೇಧಿಸಿದಾಗ, ಸಾರ್ತ್ರ್ ವಿಚಾರ ಸ್ವಾತಂತ್ರ್ಯದ ರಕ್ಷಣೆಗಾಗಿ ಅದರ ಪ್ರಕಟನೆಯ ಭಾರವನ್ನು ವಹಿಸಿಕೊಂಡಾಗ, ಆತನನ್ನೇಕೆ ಬಂಧಿಸಬಾರದೆಂದು ನ್ಯಾಷನಲ್ ಅಸೆಂಬ್ಲಿಯಲ್ಲಿ ಪ್ರಶ್ನೆ ಎದ್ದಾಗ, ದ ಗಾಲ್ ಉತ್ತರಿಸಿದ್ದ : "ನಾನು ಫ್ರಾನ್ಸನ್ನೇ ಹೇಗೆ ಬಂಧಿಸಲಿ."

ಭಾರತೀಯ ತತ್ವಶಾಸ್ತ್ರದಲ್ಲಿ 'ಆತ್ಮ' – ಒಂದು ಅಸ್ತಿತ್ವವಾದಿ ದೃಷ್ಟಿಕೋಣ

ಭಾರತೀಯ ತತ್ವಶಾಸ್ತ್ರದಲ್ಲಿ 'ಆತ್ಮ' ಒಂದು ಅಮೂರ್ತ ಸರ್ವಮಾನ್ಯ ತತ್ವ ಮಾತ್ರವಲ್ಲ. ಅದು ಅಸ್ತಿತ್ವವುಳ್ಳ ಒಂದು ಸಕ್ರಿಯ ವಿಶ್ವವ್ಯಾಪೀ ಪ್ರಜ್ಞೆ.[1] ಅದನ್ನು 'ಸತ್' ಅಥವಾ 'ಅಸ್ತಿತ್ವ' ಎಂದು ವಿವರಿಸಲಾಗಿದೆ. ಅದಕ್ಕೆ ಬರಿ ಆಧ್ಯಾತ್ಮಿಕ ಅಸ್ತಿತ್ವ ಮಾತ್ರವಲ್ಲ, ಮಾನಸಿಕ ಅಸ್ತಿತ್ವವೂ ಇದೆ. ಮಾನಸಿಕ ಸ್ತರದಲ್ಲಿ ಅದು ಸಾಮಾನ್ಯವಾಗಿ 'ಪ್ರಜ್ಞೆ' ಎಂದು ಕರೆಯಲಾಗುವ 'ಸಂವೇದನಾಶೀಲತೆ'.

ಲ್ಯಾಟಿನ್ ಭಾಷೆಯಲ್ಲಿ 'ಕನ್ಸೈರ್' ಎಂದರೆ, 'ತಿಳಿಯುವುದು' ಅಥವಾ 'ಜ್ಞಾನ ಹೊಂದಿರು' ಎಂದರ್ಥ. ಅದಕ್ಕೆ ತದ್ವಿರುದ್ಧವಾದುದು ಭೌತಿಕ. ಅದು ಪ್ರಜ್ಞೆಯನ್ನು ಹೊಂದಿರುವುದಿಲ್ಲ. ಈ ಪ್ರಜ್ಞೆಯನ್ನು ಚೇತನಾಮಯ ಅನುಭೂತಿಗಳ ನೇರ ಆತ್ಮ ವಿಮರ್ಶೆಯ ಮೂಲಕವೇ ಪರಿಕಲ್ಪಿಸಲು ಸಾಧ್ಯ. ಈ ಬಗ್ಗೆ ಸರ್ ವಿಲಿಯಮ್ ಹ್ಯಾಮಿಲ್ಟನ್, 'ಪ್ರಜ್ಞೆ ಎಂಬುದನ್ನು ನಿರ್ವಚಿಸಲಾಗದು. ಪ್ರಜ್ಞೆ ಎಂದರೆ ಏನೆಂದು ನಮಗೆ ಗೊತ್ತಿರಬಹುದು, ಆದರೆ ನಮಗೆ ಸ್ಪಷ್ಟವಾಗಿ ತಿಳಿದಿರುವ ಈ ಪ್ರಜ್ಞೆ ಏನೆಂಬುದನ್ನು ನಾವು ಬೇರೆಯವರಿಗೆ ಅವರನ್ನು ಗೊಂದಲಕ್ಕೆ ಒಳಪಡಿಸದೆ ತಿಳಿಸುವುದು ಅಸಾಧ್ಯ. ಇದಕ್ಕೆ ಕಾರಣ ಸ್ಪಷ್ಟವಾಗಿದೆ, ಅದೇನೆಂದರೆ ಪ್ರಜ್ಞೆಯೇ ಎಲ್ಲ ಜ್ಞಾನಕ್ಕೂ ಮೂಲವಾಗಿದೆ ಎನ್ನುವುದು.'[2] ಎನ್ನುತ್ತಾನೆ. ಅದನ್ನು ನೇರವಾಗಿ ನೋಡಬಹುದಾದ ಸಂದರ್ಭವನ್ನು ಸೂಚಿಸುತ್ತ ಲಾಡ್ ಹೇಳುತ್ತಾನೆ; "ಆಳ ಹಾಗೂ ಸ್ವಪ್ನಹೀನ ನಿದ್ರೆಯಲ್ಲಿ ಮುಳುಗಿರುವಾಗ ನಾವಿರುವ ಸ್ಥಿತಿಗೆ ತದ್ವಿರುದ್ಧವಾದ ಎಚ್ಚರ ಸ್ಥಿತಿಯಲ್ಲಿ ನಾವು ಏನಾಗಿರುತ್ತೇವೋ, ಅದೇ ಚೇತನ ಸ್ಥಿತಿ."

ನಮ್ಮ ಗ್ರಹಣ ಶಕ್ತಿಯ ಅತಿ ವಿಶಿಷ್ಟ ಗುಣವೆಂದರೆ, ನಾವು ಯಾವಾಗಲೂ 'ಯಾವುದಾದರೊಂದರ' ಅರಿವನ್ನು ಹೊಂದಿರುವುದು ಅನ್ನುತ್ತಾನೆ ಹಸ್ರೆಲ್.

ಆದುದರಿಂದ ಎಲ್ಲ ಚೇತನವೂ ಯಾವುದಾದುರೋಂದರ ಚೇತನವೇ ಎಂಬ ನಿರ್ಣಯಕ್ಕೆ ಹಸ್ರೆಲ್ ಬರುತ್ತಾನೆ. ಚೇತನದ ಬಗ್ಗೆ ಹಸ್ರೆಲ್ 'ಉದ್ದೇಶಮಯ' ಹಾಗೂ 'ಅರ್ಥ ನೀಡುವ' ಎಂಬ ಶಬ್ದಗಳನ್ನು ಉಪಯೋಗಿಸುತ್ತಾನೆ. ಏಕೆಂದರೆ ಪ್ರಜ್ಞೆಯ ಕ್ರಿಯೆ ಪ್ರಜ್ಞೆಯ ವಸ್ತುವನ್ನು ಉದ್ದೇಶಿಸಿರುತ್ತದೆ. ಭಾರತೀಯ ತತ್ವಶಾಸ್ತ್ರದಲ್ಲಿ 'ಸತ್' ಈ ಎಲ್ಲ ಧರ್ಮಗಳನ್ನೂ ಹೊಂದಿದೆ. ಡಾ. ರಾಧಾಕೃಷ್ಣನ್‌ರ ಮಾತುಗಳಲ್ಲಿ ಅದು ವಿಷಯವೂ ಹೌದು, ವಸ್ತುವೂ ಹೌದು.

ಪ್ರಜ್ಞೆಯನ್ನು ವಿಶ್ಲೇಷಿಸುವಲ್ಲಿ ತರ್ಕ ಸೋಲುತ್ತದೆ. ಅನುಗಮನ ಹಾಗೂ ಅನುಮಾನ ಈ ಎರಡೂ ತರ್ಕ ವಿಧಾನಗಳು ಸೋಲುತ್ತವೆ. 'ಪರ್ಯಾಲೋಚನಾತ್ಮಕ ವಿಶ್ಲೇಷಣೆ' ಎನ್ನಲಾಗುವ ಅಂತರ್ಬೋಧಪರ ಜ್ಞಾನದಿಂದ ನಾವು ಇದರ ವಿಶ್ಲೇಷಣೆಯನ್ನು ಸಾಧಿಸಬೇಕಾಗುತ್ತದೆ. ಈ ವಿಶ್ಲೇಷಣೆಯಲ್ಲಿ ಪ್ರಜ್ಞೆಯ ಎರಡು ಮುಖಗಳೆಂದರೆ ಸಾರ್ತ್ರ 'ಲ ಎತ್ರೆ ಆಂಸ್ವಾ' ಎನ್ನುವ 'ತನ್ನಲ್ಲಿ ತಾನಿರುವ ಅಸ್ತಿತ್ವ' ಹಾಗೂ'ಲ ಎತ್ರೆಪುರ್‌ಸ್ವಾ'ಎನ್ನುವ 'ತನಗಾಗಿ ತಾನಿರುವ ಅಸ್ತಿತ್ವ'ಇವುಗಳಲ್ಲಿ 'ತನ್ನಲ್ಲಿ ತಾನಿರುವ ಅಸ್ತಿತ್ವ' ದೃಷ್ಟಿಗೋಚರ ಸ್ವಭಾವದ ವಸ್ತುವನ್ನು ಸೂಚಿಸಿದರೆ, 'ತನಗಾಗಿ ತಾನಿರುವ ಅಸ್ತಿತ್ವ' ಪ್ರಜ್ಞಾಯುತ ವಿಷಯವನ್ನು ಸೂಚಿಸುತ್ತದೆ. ಭಾರತೀಯ ತತ್ವಶಾಸ್ತ್ರದಲ್ಲಿ ಆತ್ಮವನ್ನು ಈ ದ್ವಂದ್ವಾತ್ಮಕ ಸ್ವಭಾವವುಳ್ಳದ್ದೆಂದು ಹೇಳಲಾಗಿದೆ. ಡಾ. ಎಸ್. ರಾಧಾಕೃಷ್ಣನ್ ಅವರು ಆತ್ಮದ ಬಗ್ಗೆ 'ಅದು ಒಂದು ಸಕ್ರಿಯ ವಿಶ್ವ ವ್ಯಾಪೀ ತತ್ವ, ಹೆಗೆಲ್‌ನ ಶಬ್ದಗಳಲ್ಲಿ ಹೇಳುವುದಾದರೆ ತನ್ನಲ್ಲಿ ತಾನಿರುವ ಹಾಗೂ ತನಗಾಗಿ ತಾನಿರುವ ಎರಡೂ ಅಸ್ತಿತ್ವಗಳನ್ನು ಉಳ್ಳದ್ದು'.[1]

ದೆಕಾರ್ತೆಯ ಕೊಜಿಟೋದಲ್ಲಿ ಪ್ರಜ್ಞೆಯ ಅರಿವು ಅದರ ಕಾರ್ಯದ ಮೂಲಕ ಉಂಟಾಗುತ್ತದೆ. 'ನಾನು ಯೋಚಿಸುತ್ತಿದ್ದೇನೆ, ಆದುದರಿಂದ ನಾನಿದ್ದೇನೆ' ಎನ್ನುತ್ತಾನೆ ದೆಕಾರ್ತೆ. ಇಲ್ಲಿ ಯೋಚನೆಯ ಕಾರ್ಯ ಪ್ರಜ್ಞೆಗಿಂತ ಪೂರ್ವದ್ದು, ಹಾಗೂ ಮೂಲಭೂತವಾದದ್ದು. ಆದರೆ ಪ್ರಜ್ಞೆಯ ವಿವರಣೆಯನ್ನು ಅದರದ್ದೇ ಪ್ರತಿಫಲನದಂತಿರುವ ಅದರ ಕಾರ್ಯಗಳಿಂದ ನೀಡಬಾರದಿತ್ತು; ಪ್ರತಿಫಲನ ಪೂರ್ವದ ಪ್ರಜ್ಞೆಯಿಂದಲೇ ನೀಡಬೇಕಿತ್ತು. ಛಾಂದೋಗ್ಯ ಉಪನಿಷತ್ತಿನಲ್ಲಿಯೂ ಹೇಳುವಂತೆ ಅಸ್ತಿತ್ವ ಮೊದಲು–ಸದೇವ ಅಗ್ರವ್, ಅನಂತರ ಪ್ರತಿಫಲನ-ತದ್ ಐಕ್ಷತ. ಈ ರೀತಿ ಪ್ರಜ್ಞೆ ಪ್ರತಿಫಲನಕ್ಕಿಂತ ಪೂರ್ವದ್ದಾಗುತ್ತದೆ. ದೆಕಾರ್ತೆ ಪ್ರಜ್ಞೆಯನ್ನೇ ಅದರ ಕಾರ್ಯದೊಂದಿಗೆ ಸಮೀಕರಿಸಿ ಗೊಂದಲವನ್ನುಂಟುಮಾಡಿಕೊಂಡ. ಅವನು 'ನಾನು ಯೋಚಿಸುತ್ತಿದ್ದೇನೆ, ಆದುದರಿಂದ ನಾನಿದ್ದೇನೆ' ಎನ್ನುವುದಕ್ಕಿಂತ 'ನಾನು ಯೋಚಿಸುತ್ತಿದ್ದೇನೆಂದು ನನಗೆ ಗೊತ್ತು, ಆದುದರಿಂದ ನಾನಿದ್ದೇನೆ' ಎನ್ನಬೇಕಿತ್ತು.

ಇಂದ್ರನಿಗೆ ಆತ್ಮ ಜ್ಞಾನದ ಬೋಧನೆ ಮಾಡುವಾಗ ಪ್ರಜಾಪತಿ ಈ ಎರಡೂ ಮುಖಗಳ ಬಗ್ಗೆ ಹೇಳುತ್ತಾನೆಂದು ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ. ತನ್ನ ದೇಹವನ್ನು ಕನ್ನಡಿಯಲ್ಲಿ ನೋಡುತ್ತಿರುವಾಗ ಇಂದ್ರನಿಗೆ ಸ್ವಪ್ರಜ್ಞೆ ಹೊಂದಿರುವ ವಸ್ತುವನ್ನು ನೋಡುತ್ತಿರುವ ಅರಿವಿದೆ. ಆತ್ಮ ದೃಷ್ಟಿಗೋಚರ ಸ್ವಭಾವದ ವಸ್ತುವನ್ನು ನೋಡುತ್ತಿರುವಾಗ ತನ್ನ ಅಸ್ತಿತ್ವದ ಪ್ರಜ್ಞೆಯನ್ನೂ ಹೊಂದಿರುತ್ತದೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಪ್ರಜ್ಞೆಯ ಈ ಎರಡೂ ಕಾರ್ಯಗಳು ಒಂದರಿಂದೊಂದು ಭಿನ್ನವಾಗಿವೆ. ದೃಷ್ಟಿಗೋಚರವಾಗುವಂತೆ 'ತನ್ನಲ್ಲಿ ತಾನಿರುವ' ವಸ್ತುವಿನ ಗ್ರಹಿಕೆ ಇವುಗಳಲ್ಲೊಂದು ಕಾರ್ಯ. ಗ್ರಹಿಸುವ ವ್ಯಕ್ತಿಗಳಿಗೆ ವಸ್ತು ಬೇರೆ ಬೇರೆಯಾಗಿ ಕಾಣಬಹುದು. ಆದರೆ ಪ್ರಜ್ಞೆಗೆ ಗೋಚರವಾಗುವಷ್ಟರ ಮಟ್ಟಿಗೆ ಅದರ ಅಸ್ತಿತ್ವ ನಿಜವಾದುದು. ಈ ಸಂದರ್ಭದಲ್ಲಿಯೇ ಹೆಗೆಲ್ ವಸ್ತುವಿನ ಸರಿಯಾದ ಗ್ರಹಿಕೆಗೆ ವಸ್ತುವಿನ ಅಸ್ತಿತ್ವದ ಕಡೆಗೆ ನಾವು ತಿರುಗಬೇಕು ಎಂದು ಹೇಳುತ್ತಾನೆ. ಹೆಗೆಲ್ ಹೇಳುವ ಈ ವಸ್ತುವನ್ನು ನಾವು ಕಾಂಟ ಹೇಳುವ 'ತನ್ನಲ್ಲಿ ತಾನಿರುವ' ವಸ್ತುವಿನೊಂದಿಗೆ ಸಮೀಕರಿಸಿ ಗೊಂದಲವನ್ನುಂಟುಮಾಡಬೇಕಿಲ್ಲ. ಕಾಂಟನ ಕಲ್ಪನೆ ವಸ್ತುವಿನ ಆದರ್ಶವಾದಿ ಕಲ್ಪನೆ. ಅದು ಗ್ರಹಿಕೆಗೆ ಹೊರತಾದದ್ದು.

'ತನಗಾಗಿ–ತಾನಿರುವ' ವಸ್ತುವನ್ನು ಅಂತರ್ವಿವೇಚನೆಯ ಮೂಲಕ ಮಾತ್ರ ಕಾಣಬಹುದು. ಅಲ್ಲಿ ವ್ಯಕ್ತಿಗೆ ಪ್ರಜ್ಞೆಯ ಪ್ರಜ್ಞೆ ಇರುತ್ತದೆ. ನಾನು ನನ್ನ ಬಗ್ಗೆಯೇ ಪರ್ಯಾಲೋಚನೆ ಮಾಡುತ್ತಿರುವಾಗ, ನನ್ನ ಅರಿವು ನನ್ನ ಪರ್ಯಾಲೋಚನಾಪೂರ್ವದ, ಮೂಲಭೂತ ಪ್ರಜ್ಞೆಯ ಉದ್ದೇಶಿತ ವಸ್ತುವಾಗುತ್ತದೆ. ಏಕೆಂದರೆ ಪರ್ಯಾಲೋಚಿಸುತ್ತಿರುವ ಪ್ರಜ್ಞೆ ಪರ್ಯಾಲೋಚನಾ ಪೂರ್ವದ ಪ್ರಜ್ಞೆಗಿಂತ ಭಿನ್ನವಾದದ್ದು. ಈ 'ಉದ್ದೇಶಿತ ವಸ್ತು'ವಿನ ಬನಾದಿ ಎಂದರೆ 'ತನಗಾಗಿ ತಾನಿರುವ ಅಸ್ತಿತ್ವ'.

ಜಗತ್ತು 'ಆಗುತ್ತ' ಇರುವ, ಸತ್ ಹಾಗೂ ಅಸತ್‌ಗಳ ಒಂದು ಪ್ರಕ್ರಿಯೆ ಮಾತ್ರ ಎನ್ನುವ ದ್ವಂದ್ವ ಅನೇಕರನ್ನು ಗೊಂದಲಕ್ಕೀಡುಮಾಡಿದೆ. ನಿಜವಾಗಿಯೂ ಹೇಳುವುದಾದರೆ ದೃಷ್ಟಿಗೋಚರ ಜಗತ್ತಿನ ಒಳಮೈ ಹೊರಮೈಗಳೆಂಬೆರಡು ಭೇದಗಳು ಇವೆಯೇ ? ವಸ್ತುವಿನ ರಹಸ್ಯಮಯವಾದ ಅಸ್ತಿತ್ವ ಎನ್ನುವುದೊಂದಿದೆಯೇ ? • ಉದಾಹರಣೆಗೆ, ಜಗತ್ತಿಗೆ ತನ್ನದೇ ಒಂದು ಅಸ್ತಿತ್ವವಿದೆ, ಅದನ್ನು ಸಂಪೂರ್ಣವಾಗಿ ಅಲ್ಲಗಳೆಯಲು ಸಾಧ್ಯವಿಲ್ಲ. ಅದೊಂದು ಮಾನಸಿಕ–ಭೌತಿಕ ಕ್ರಿಯೆಗಳ ಸಮಷ್ಟಿ. ಹಾಗೂ ಸ್ವಲ್ಪಮಟ್ಟಿಗೆ ಅದು ಕಾಣಿಸಿಕೊಳ್ಳುತ್ತದೆ, ಅಸ್ತಿತ್ವವನ್ನು ಹೊಂದಿರುತ್ತದೆ. ಏಕೆಂದರೆ ತೋರಿಕೆಯೇ ಅಸ್ತಿತ್ವದ ಒಂದು ಇರುವಿಕೆ ಎನ್ನುತ್ತಾನೆ ಸಾರ್ತ್ರ್–ತನ್ನ 'ಅಸ್ತಿತ್ವ ಹಾಗೂ ಶೂನ್ಯತೆ'ಯಲ್ಲಿ.

ದೃಷ್ಟ್ಯತೀತ ಜಗತ್ತನ್ನು ಸಂಬಲು ಜನ ದೃಷ್ಟಿಗೋಚರ ಜಗತ್ತನ್ನೇ ಅಲ್ಲಗಳೆದರು. ಹಾಗೂ ತೋರಿಕೆ ಅಥವಾ ಭ್ರಮೆ ಮಾತ್ರ ಎನ್ನುವ ಕಾರಣದಿಂದಾಗಿ ದೃಷ್ಟಿಗೋಚರ ಜಗತ್ತನ್ನು ಅಸತ್ ಎನ್ನಲಾಯಿತು. ಆದರೆ ತೋರಿಕೆ ಯಾವುದಾದು ದೊಂದರ ತೋರಿಕೆ ಮಾತ್ರವಾಗಿರುತ್ತದೆ ಎನ್ನುವುದನ್ನು ಮರೆಯಲಾಯಿತು. ಆದುದರಿಂದ ತೋರಿಕೆ ವಸ್ತುವಿಗಿಂತ ಸಂಪೂರ್ಣವಾಗಿ ಭಿನ್ನವಾಗಿರಲಾರದು. ಇಲ್ಲಿ ದ್ವಂದ್ವ ಕಣ್ಮರೆಯಾಗುತ್ತದೆ. ಏಕೆಂದರೆ ದೃಷ್ಟಿಗೋಚರ ಜಗತ್ತು ದೃಷ್ಟ್ಯತೀತ ಜಗತ್ತಿನ ಇನ್ನೊಂದು ಮುಖ ಮಾತ್ರವಾಗುತ್ತದೆ. ಅದು ತನ್ನಲ್ಲಿಯೇ ಒಂದು ಅಸ್ತಿತ್ವ ಹೊಂದುತ್ತದೆ, ತಾನಿದ್ದ ಹಾಗೆ ತೋರುತ್ತದೆ ಹಾಗೂ ತನ್ನದೇ ಒಂದು ಸಂಕೇತ ವಾಗುತ್ತದೆ. 'ಕಿಮ್ ಪಶ್ಯಥ ಇತಿ' - 'ಏನು ನೋಡುತ್ತಿದ್ದೀಯ' ಎಂಬ ಪ್ರಜಾ ಪತಿಯ ಪ್ರಶ್ನೆಗೆ ಇಂದ್ರ ಹಾಗೂ ವಿರೋಚನರು 'ಯಥೈವೇದಮ್ ಆವಾಮ್' – 'ನಾವಿಬ್ಬರೂ ನಾವಿರುವಂತೆಯೇ ಕಾಣುತ್ತಿದ್ದೇವೆ' ಎಂದು ಉತ್ತರಿಸುತ್ತಾರೆ. ಇಲ್ಲಿ ಅವರಿಗೆ ಆತ್ಮದ ತೋರಿಕೆಯೇ ಅಧೀಕೃತವಾಗುತ್ತದೆ. ಆದರೆ ಆತ್ಮದ ಈ ಮುಖ ಅಂತಿಮ ವಿಶ್ಲೇಷಣೆಯಲ್ಲಿ ಪರಮ ತತ್ವದೊಂದಿಗೆ ಸಾಪೇಕ್ಷವಾಗಿಯೇ ಉಳಿದರೂ ಸಹ ದೃಷ್ಟಿಗೋಚರ ಜಗತ್ತಿನ ಮಟ್ಟಿಗೆ ಹೇಳುವುದಾದರೆ ಅದೊಂದು ಸತ್ಯವೇ. ದೃಷ್ಟಿಗೋಚರ ಜಗತ್ತು ಅಸ್ತಿತ್ವದ ತೋರಿಕೆಯಾದುದರಿಂದ ಅದು ಅಸ್ತಿತ್ವದಷ್ಟೇ ಸತ್ಯವೂ ಹೌದು. ತೋರಿಕೆಯೇ ಅದರ ಸತ್ವವಾಗುತ್ತದೆ. ಸತ್ಯವನ್ನು ಎರಡು ಮುಖಗಳಲ್ಲಿ ನಾವು ವಿವರಿಸುವುದಾದರೆ ಎರಡನ್ನೂ ಜೊತೆ ಯಾಗಿ ಹೇಳಬೇಕು. ಏಕೆಂದರೆ ಅವು ಪರಸ್ಪರ ಅಧೀಕೃತ ಸ್ವಭಾವಗಳನ್ನು ಅಲ್ಲಗಳೆಯದೇ ಅಸ್ತಿತ್ವ ಹೊಂದಿರುತ್ತವೆ. ಆದರೆ ದೃಷ್ಟಿಗೋಚರ ಜಗತ್ತಿನ ಈ ಸಿದ್ಧಾಂತ, ಕಾಂಟನ ದೃಷ್ಟಿಗೋಚರ ಜಗತ್ತಿನ ಬಗ್ಗೆ ಇರುವ ವಿಚಾರಗಳನ್ನು ಅಲ್ಲ ಗಳೆಯುತ್ತದೆ. ಏಕೆಂದರೆ ಕಾಂಟನ ದೃಷ್ಟಿಗೋಚರ ಜಗತ್ತಿನ ಬಗ್ಗೆ ಇರುವ ವಿಚಾರಗಳು ದೃಷ್ಟ್ಯತೀತ ಜಗತ್ತಿಗೆ ಸಂಬಂಧಿಸಿದ ವಿಚಾರಗಳೇ.

ಆತ್ಮದ ಇನ್ನೊಂದು ಮುಖ, ಅಂದರೆ ತನಗಾಗಿ ತಾನಿರುವ ಅಸ್ತಿತ್ವದ ಬಗ್ಗೆ ಹೇಳುವುದಾದರೆ ನಾವು ಮತ್ತೆ ದೇಕಾರ್ತನ ಪ್ರಜ್ಞೆಯಿಂದ ಪ್ರಾರಂಭಿಸಬೇಕು. ಈ ಮೊದಲೇ ಹೇಳಿದಂತೆ, ದೇಕಾರ್ತನಲ್ಲಿ ಪ್ರಜ್ಞೆ ಪ್ರತಿಫಲಿತವಾಗುತ್ತದೆ. ಹಾಗೂ ಆ ಪಕ್ಷದಲ್ಲಿ ಆ ಪ್ರತಿಫಲಿತ ವಸ್ತು ಒಂದು ಶುದ್ಧ ವಿಷಯವಾಗುತ್ತದೆ. ಅಥವಾ 'ಪ್ರಜ್ಞೆ' - ಕೊಜಿಟೋ ಆಗುತ್ತದೆ. ಹಾಗೂ ಇದು ಪರಿಣಮಿಸುವುದು ಕೊನೆ ಯಿಲ್ಲದ ಹಿಂದೋಟದಲ್ಲಿ. ಆದರೆ ಇದು 'ಸ್ವ-ಪ್ರಜ್ಞೆ' ಆತ್ಮವನ್ನು ವಸ್ತುವೆಂದು ಪರಿಗಣಿಸಿದಾಗ ಮಾತ್ರ ಓರೆಯಾಗುತ್ತದೆ. ತನ್ನ ಅಸ್ತಿತ್ವ ಹಾಗೂ ಪರಿಜ್ಞಾನ ಇವೆರಡೂ ಒಂದೇ ಆಗಿರುವುದೇ ಸ್ವ-ಪ್ರಜ್ಞೆಯ ಗುಣ' ಎನ್ನುತ್ತಾನೆ ಸಾರ್ತ್ರ್. ಭಾರತದಲ್ಲಿ ಶಂಕರಾಚಾರ್ಯರೂ ಬಹಳಮಟ್ಟಿಗೆ ಇದೇ ವಿಚಾರವನ್ನು ತಲುಪು

ತ್ತಾರೆ. ಏಕೆಂದರೆ ಆತ್ಮ ಅವರು ಹೇಳುವಂತೆ ಪ್ರಜ್ಞೆಯೊಂದಿಗೂ ಹಾಗೂ ಜ್ಞಾನದೊಂದಿಗೂ ತಾದಾತ್ಮ್ಯ ಹೊಂದಿದೆ. ಅದು ಚೈತನ್ಯ ಸ್ವರೂಪ ಹಾಗೂ ಜ್ಞಾನಸ್ವರೂಪ ಎರಡೂ ಆಗಿದೆ. ಆದುದರಿಂದ ದೇಕಾರ್ತನ ಕೊನೆಯಿಲ್ಲದ ಹಿಂದೋಟವನ್ನು ತಪ್ಪಿಸಲು ನಾವು ಪ್ರತಿಫಲನ-ಪೂರ್ವದ ಪ್ರಜ್ಞೆಯನ್ನು ಸಾಧಿಸ ಬೇಕಾಗುತ್ತದೆ. ಒಬ್ಬ ಒಂದು ಪುಸ್ತಕದ ಪರಿಜ್ಞಾನವನ್ನು ಹೊಂದಿರುವಾಗ ಪ್ರತಿಫಲನವಿಲ್ಲದೇ ತನ್ನ ಬಗ್ಗೆ ಪ್ರಜ್ಞೆಯನ್ನು ಹೊಂದಿರುತ್ತಾನೆ. ಆದರೆ ಅವನು ತನ್ನದೇ ಪರಿಜ್ಞಾನವನ್ನು ಹೊಂದಿರುವಾಗ ಆ ಪರಿಜ್ಞಾನ ಪ್ರತಿಫಲನ–ಪೂರ್ವದ ಪ್ರಜ್ಞೆಯ ವಸ್ತುವಾಗುತ್ತದೆಯೇ ಹೊರತು ದೇಕಾರ್ತನಲ್ಲಿಯಂತೆ ಪ್ರತಿಫಲನ–ಪೂರ್ವದ ಪ್ರಜ್ಞೆ ಮಾತ್ರವೇ ಆಗುವುದಿಲ್ಲ. ಈ ವಿಚಾರಕ್ಕೆ 'ಇದು ಒಂದು ಬರಿ "ನಾನು'' ಎನ್ನುವ ಗುಣಗಳ ಕಂತೆ ಮಾತ್ರವಲ್ಲ, ಆದರೆ ಆ ಗುಣಗಳನ್ನೆಲ್ಲ ಪರಿವೀಕ್ಷಿಸುತ್ತಿರುವ ಆದರೂ ಅವುಗಳಿಂದಾಚೆ ಇರುವ, ಅವುಗಳ ಹಿಂದೆ ಅಡಗಿರುವ ನಾನು' ಎಂದು ಡಾ॥ ರಾಧಾಕೃಷ್ಣನ್ ಅವರು ಪ್ರಭಾವಯುತ ವ್ಯಾಖ್ಯಾನ ಮಾಡುತ್ತಾರೆ.

ದೇವರು ಮೋಸಸ್‌ನಿಗೆ 'ನಾನು ನಾನೇ' ಎಂದು ಹೇಳಿದ್ದು, ಅಸ್ತಿತ್ವನಿಷ್ಠ ಅಥವಾ ತತ್ವಚಿಂತನೆಯಲ್ಲಿ ಅಸ್ತಿತ್ವದ ಸತ್ಯದ ಪೂರ್ವಕಲ್ಪನೆಯನ್ನು ಪ್ರಕಟಪಡಿಸು ತ್ತದೆ. ಆತ್ಮ ತನ್ನಿಂದ ತಾನೇ ಅರಿತುಕೊಂಡಿರುತ್ತದೆ – 'ಸ್ವಸಂವೇದ್ಯಃ ಭವತಿ' ಎನ್ನುತ್ತಾನೆ ಪೂರ್ವ – ಮೀಮಾಂಸಕ ಶಬರ. ಅದೇ ವಿಚಾರಧಾರೆಯ ಕುಮಾರಿಲ ತನ್ನ ಶಾಸ್ತ್ರ – ದೀಪಿಕೆ ಎಂಬ ಗ್ರಂಥದಲ್ಲಿ ಅಸ್ತಿತ್ವದ 'ತನಗಾಗಿ ತಾನಿರುವ' ಪಕ್ಷ ವನ್ನು 'ಶುದ್ಧ ಜ್ಞಾತೃತಾ' – ಅಂದರೆ ಪ್ರಜ್ಞೆಯ ವಿಶುದ್ಧ ರೂಪ, ಹಾಗೂ ಅದರ ಪರಿವರ್ತಿತ ಪಕ್ಷವನ್ನು 'ಶುದ್ಧ ವಿಷಯ ಗ್ರಹಣಮ್' – ಅನ್ನುತ್ತಾನೆ. ಅದ್ವೈತ ವೇದಾಂತವನ್ನು ಚರ್ಚಿಸುವಾಗ ಡಾ॥ ರಾಧಾಕೃಷ್ಣನ್ 'ನಾನಾರೋ ಅದೇ ನಾನು' ಎಂದು ಯಾರು ಭಾವಿಸುತ್ತಾರೋ ಅವರು ಆ ರೀತಿ ತಮ್ಮನ್ನು ಅರಿತುಕೊಳ್ಳು ತ್ತಾರೆ ಎನ್ನುವುದೇ ಅವನ ಸತ್ವ ಎನ್ನುತ್ತಾರೆ.

ಕೊನೆಯದಾಗಿ ತನ್ನಲ್ಲಿ ತಾನಿರುವ ಪ್ರಜ್ಞೆ ಹಾಗೂ ತನಗಾಗಿ ತಾನಿರುವ ಪ್ರಜ್ಞೆ ಇವೆರಡೂ ಒಂದೇ ಮೂಲದ ಎರಡು ಪಕ್ಷಗಳೆಂದು ಭಾವಿಸಲಾಗುತ್ತದೆ, ಹಾಗೂ ಮಾನವ ಪ್ರಜ್ಞೆ ಯಾವಾಗಲೂ ಖಚಿತ ಗುರಿಯೆಡೆಗೆ ಶ್ರಮಿಸುತ್ತಿರುವುದರಿಂದ, ಈ ಎರಡೂ ಪಕ್ಷಗಳ ಸಮೀಕರಣದೆಡೆಗೆ ಮಾನವನ ಪ್ರಯತ್ನಗಳೂ ಅವಿರತವಾಗಿ ಸಾಗಿವೆ.

ಟಿಪ್ಪಣಿಗಳು

ಅಸ್ತಿತ್ವವಾದ ಮತ್ತು ಸಾರ್ತ್ರ

ಟಿಪ್ಪಣಿ :

1. ಎಗ್ಸಿಸ್ಟೆನ್‌ಶಲಿಸಂ-ಸಾರ್ತ್ರ : ಪುಟ 14
2. ಕನ್‌ಕ್ಲುಡಿಂಗ್ ಅನ್‌ಸೈನ್‌ಟಿಫಿಕ್ ಪೋಸ್ಟ್‌ಸ್ಕ್ರಿಪ್ಟ್-ಸೋರೆನ್ ಕೀರ್ಕ್‌ಗಾರ್ಡ ಪುಟ 112
3. ಎಗ್ಸಿಸ್ಟೆನ್‌ಶಲಿಸಂ-ಸಾರ್ತ್ರ : ಪುಟ 27
4. ಬೀಯಿಂಗ್ ಎಂಡ್ ನಥಿಂಗ್‌ನೆಸ್-ಸಾರ್ತ್ರ ; ಪುಟ 318
5. ಎಗ್ಸಿಸ್ಟೆನ್‌ಶಲಿಸಂ-ಸಾರ್ತ್ರ : ಪುಟ 42

ಆಸ್ತಿಕ ಅಸ್ತಿತ್ವವಾದ

ಟಿಪ್ಪಣಿ :

1. ಎಗ್ಸಿಸ್ಟೆನ್‌ಶಲಿಸಂ-ಸಾರ್ತ್ರ : ಪುಟ 60
2. ಆ್ಯಕ್ಷನ್-ಸಾರ್ತ್ರ
3. ಎಗ್ಸಿಸ್ಟೆನ್‌ಶಲಿಸಂ-ಸಾರ್ತ್ರ : ಪುಟ 15
4. ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್-ಮಾರ್ಗಾರೆಟ್ ಚಟರ್ಜಿ : ಪುಟ 83
5. ಮೆನ್ ಅಗೇಸ್ಟ್ ಹ್ಯೂಮ್ಯಾನಿಟಿ-ಗೇಬ್ರಿಲ್ ಮಾರ್ಸೆಲ್ : 16
6. ಹ್ಯೂಯಿಕ್ಲೊಸ್-ಸಾರ್ತ್ರ : ಮಾರ್ಗಾರೆಟ್ ಚಟರ್ಜಿಯವರಿಂದ
   —'ದ ಎಗ್ಸಿಸ್ಟೆನ್‌ಶಲಿಸ್ಟ್ ಔಟ್‌ಲುಕ್' ನ ಪುಟ 78 ರಲ್ಲಿ ಉಧೃತ
7. ಲೆ ಕೊಕರ್ ದ ಔತ್ರ್ರ-ಗೇಬ್ರಿಲ್ ಮಾರ್ಸಲ್‌ನ ನಾಟಕ : ಮಾರ್ಗಾರೆಟ್
   —ಚಟರ್ಜಿಯವರಿಂದ 'ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್'ನ ಪುಟ 78ರಲ್ಲಿ ಉಧೃತ.
8. ದ ಪ್ರಾಬ್ಲೆಮ್ ಆಫ್ ಮೆಥಡ್-ಸಾರ್ತ್ರ : ಪುಟ 15

9. ಇಂಡಿಯನ್ ಫಿಲಾಸಫಿ-ಡಾ॥ ರಾಧಾಕೃಷ್ಣನ್ : ವಾಲ್ಯೂಮ್ 1 ಪುಟ 176
10. ಎಗ್ಸಿಸ್ಟೆನ್‌ಶಲಿಸಂ–ಸಾರ್ತ್ರ್ : ಪುಟ 61
11. ಲೆ ಮೌಶಸ್-ಸಾರ್ತ್ರ್‌ನ ನಾಟಕ ; ಸ್ಟುಆರ್ಟ ಗಿಲ್ಬರ್ಟ ಅವರಿಂದ 'ದ ಫ್ಲೈಸ್' —ಎಂದು ಅನುವಾದಿತ : ಅಂಕ 3

ಹೆಗೆಲ್, ಸಾರ್ತ್ರ್ ಮತ್ತು ಮಾರ್ಕ್ಸ್

ಟಿಪ್ಪಣಿ :

1. ದ ಎಗ್ಸಿಸ್ಟೆನ್‌ಶಲಿಸ್ಟ ಔಟಲುಕ್ —ಮಾರ್ಗಾರೆಟ್ ಚಟರ್ಜಿ : ಪುಟ 11
2. ಕನ್ಕ್ಲೂಡಿಂಗ ಅನ್‌ಸೈಂಟಿಫಿಕ್ ಪೋಸ್ಟ ಸ್ಕ್ರಿಪ್ಟ–ಸೋರೆನ್ ಕೀರ್ಕೆಗಾರ್ಡ ಪುಟ 298
3. ಮಟೀರಿಯಾಲಿಸಂ ಎಂಡ್ ರೆವಲೂಶನ್ —ಸಾರ್ತ್ರ್ : ಪುಟ 235-6
4. ದ ಪ್ರಾಬ್ಲೆಮ್ ಆಫ್ ಮೆಥಡ್ —ಸಾರ್ತ್ರ್ : ಪು 28
5. ಸಿಚ್ಯುವೇಶನ್ಸ —ಸಾರ್ತ್ರ್ : ಪುಟ 103
6. ಮಟೀರಿಯಾಲಿಸಂ ಎಂಡ್ ರೆವಲೂಶನ್ —ಸಾರ್ತ್ರ್ : ಪುಟ 251
7. ದ ಪ್ರಾಬ್ಲೆಮ್ ಆಫ್ ಮೆಥಡ್ —ಸಾರ್ತ್ರ್ : ಪುಟ 23
8. ದ ಪ್ರಾಬ್ಲೆಮ್ ಆಫ್ ಮೆಥಡ್ —ಸಾರ್ತ್ರ್ : ಪುಟ 23
9. ದ ಪ್ರಾಬ್ಲೆಮ್ ಆಫ್ ಮೆಥಡ್ —ಸಾರ್ತ್ರ್ ಪುಟ 29
10. ಎಗ್ಸಿಸ್ಟೆನ್‌ಶಲಿಸಂ —ಸಾರ್ತ್ರ್ ; ಪುಟ 11
11. ದ ಪ್ರಾಬ್ಲೆಮ್ ಆಫ್ ಮೆಥಡ್ —ಸಾರ್ತ್ರ್ : ಪುಟ 13
12. ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್—ಮಾರ್ಗಾರೆಟ್ ಚಟರ್ಜಿ ; ಪುಟ 68
13. ಜ್ಯಾಂ—ಪಾಲ ಸಾರ್ತ್ರ್ – ದ ಫಿಲಾಸಫರ್ ವಿದೌಟ ಫೇಥ್–ರೆಂ ಮೆರಿಲ್-ಆ್ಯಲ್ಬರ್ ಪುಟ 147

ಅಸ್ತಿತ್ವವಾದ ಮತ್ತು ಸಾಹಿತ್ಯ

ಟಿಪ್ಪಣಿ :

1. ಎಗ್ಸಿಸ್ಟೆನ್‌ಶಲಿಸಂ —ಸಾರ್ತ್ರ್ : ಪುಟ 14
2. ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್ —ಮಾರ್ಗಾರೆಟ್ ಚಟರ್ಜಿ : ಪುಟ 147
3. ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್ —ಮಾರ್ಗಾರೆಟ್ ಚಟರ್ಜಿ : ಪುಟ 150
4. ಹ್ಯೂಮನ್ಸ ಬೀಯಿಂಗ್ —ಜೋಸೆಫ್ ಮ್ಯಾಕ್ ಮಹೋನ್ : ಪುಟ 22
5. ಸಾರ್ತ್ರ್-ಎ ಕಲೆಕ್ಷನ್ ಆಫ್ ಕ್ರಿಟಿಕಲ್ ಎಸ್ಸೇಸ್—ಎಡಿಥ್ ಕರ್ನ ಅವರ ಪ್ರಸ್ತಾವನೆ ಪುಟ 9
6. ಲಾ ನೋಸೀ : ಪುಟ 169 'ಡುಪ್ಲಿಸಿಟಿ ಆಫ್ ಬೀಯಿಂಗ್'ನಲ್ಲಿ ಕ್ಲಾಡ್ ಎಡ್ಮಂಡ ಮ್ಯಾಗ್ನಿ ಅವರಿಂದ ಉಲ್ಲೇಖಿತ

7. ಎಗ್ಸಿಸ್ಟೆನ್ಶಲಿಸಂ —ಸಾರ್ತ್ರ್ : ಪುಟ 41
8. ಲ ಮೌಶಿ —ಸಾರ್ತ್ರ್‌ನ ನಾಟಕ, ಸ್ಟುಅರ್ಟ ಗಿಲ್ಬರ್ಟ ಅವರಿಂದ 'ದ ಫ್ಲೈಸ್' ಎಂದು ಅನುವಾದಿತ, ಅಂಕ 2, ದೃಶ್ಯ 1
9. ವಾಟ್ ಈಜ್ ಲಿಟರೇಚರ್ —ಸಾರ್ತ್ರ್ : ಪು 217
10. ವಾಟ್ ಈಜ ಲಿಟರೇಚರ್ —ಸಾರ್ತ್ರ್ : ಪುಟ 110
11. ವಾಟ್ ಈಜ ಲಿಟರೇಚರ್ —ಸಾರ್ತ್ರ್ : 'ದ ಫಿಲಾಸಫಿ ಆಫ್ ಜ್ಯಾಂಪಾಲ ಸಾರ್ತ್ರ್' ದಲ್ಲಿ ಉಲ್ಲೇಖಿತ : ಪುಟ 377
12. ಹ್ಯೂಮನ್ಸ ಬೀಯಿಂಗ್ಸ್ : ಜೋಸೆಫ್ ಮ್ಯಾಕಮುಹೋನ್
13. ವಾಟ್ ಈಜ ಲಿಟರೇಚರ್ —ಸಾರ್ತ್ರ್ : ಪುಟ 238
14. ವಾಟ್ ಈಜ ಲಿಟರೇಚರ್ —ಸಾರ್ತ್ರ್ : ಪುಟ 158
15. ಸಾರ್ತ್ರ್ —ಆಲ್ಬರ್ಟ ಸ್ಟರ್ನ : ಪುಟ 99
16. ವಾಟ್ ಈಜ್ ಲಿಟರೇಚರ್ —ಸಾರ್ತ್ರ್
17. ವಾಟ್ ಈಜ್ ಲಿಟರೆಲಚರ್ —ಸಾರ್ತ್ರ್ : 'ದಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್'ದಲ್ಲಿ ಉಲ್ಲೇಖಿತ : ಪುಟ 376
18. ವಾಟ್ ಈಜ್ ಲಿಟರೇಚರ್ —ಸಾರ್ತ್ರ್ : 'ದ ಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್'ದಲ್ಲಿ ಉಲ್ಲೇಖಿತ : ಪುಟ 369
19. ದಿ ಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್ —ರಾಬರ್ಟ ಡಿ. ಕುಮ್ಮಿಂಗ ಅವರ ಪ್ರಸ್ತಾವನೆ : ಪುಟ 34
20. ವಾಟ್ ಈಜ್ ಲಿಟರೇಚರ್ —ಸಾರ್ತ್ರ್ : 'ದ ಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್'ದಲ್ಲಿ ಉಲ್ಲೇಖಿತ : ಪುಟ 376
22. ಪ್ಲೇ ಬಾಯ್ ಇಂಟರ್‌ವ್ಯೂ —ಜ್ಯಾಂ-ಪಾಲ ಸಾರ್ತ್ರ್ : ಪ್ಲೇ ಬಾಯ್ ಮೇ 1965, ಪುಟ 76

ಅಸ್ತಿತ್ವವಾದಿ ಮನೋವಿಶ್ಲೇಷಣೆ

ಟಿಪ್ಪಣಿ :

1. ಸಾರ್ತ್ರ್ – ಆಲ್ಫ್ರೆಡ್ ಸ್ಟರ್ನ : ಪುಟ 2.
2. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ ಪುಟ 557.
3. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 568.
4. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 574.
5. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 578.
6. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 573.
7. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 570.
8. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 571.
9. ಬೀಯಿಂಗ್ ಎಂಡ್ ನಥಿಂಗ್‌ನೆಸ್ : ಸಾರ್ತ್ರ್ : ಪುಟ 575.

* ಎಕ್ಟಿಯನ್ ಕಾಂಪ್ಲೆಕ್ಸ್ : ಯೌನ ಜಿಜ್ಞಾಸೆಯ ಛಾಯೆ ಇರುವ ಹಾಗೂ ಸ್ವಪ್ರಯೋಜನಕ್ಕಾಗಿ ಮಾಡುವ ಅತಿಕ್ರಮಣ 'ಜ್ಞಾನ ಹೊಂದುವುದು' ಎನ್ನುವುದರ ಒಂದು ರೂಪ ಎಂದು ತೋರಿಸುವ ಪ್ರತೀಕಗಳ ಸಮಗ್ರತೆ.

** ಜೋನಾಹ್ ಕಾಂಪ್ಲೆಕ್ಸ : ಜ್ಞಾನದ ವಸ್ತುವನ್ನು ಅಥವಾ ತನ್ನ ಪ್ರಿಯನ (ಳ)ನ್ನು ತನ್ನೊಂದಿಗೆ ಸಮೀಕರಿಸುವ– ಆ ವಸ್ತುವಿನ 'ಬಾಹ್ಯ ವಸ್ತು' ಎನ್ನುವ ಗುಣಕ್ಕೆ ಧಕ್ಕೆ ಬರದ ಹಾಗೆ– ಅವೈಚಾರಿಕ ಆಸೆ.

ಅಸ್ತಿತ್ವವಾದ ಮತ್ತು ನೈತಿಕತೆ

ಟಿಪ್ಪಣಿ

1. ಎಗ್ಸಿಸ್ಟೆನ್‌ಶಲಿಸಂ– ಸಾರ್ತ್ರ್ : ಪುಟ 13.
2. 'ಜ್ಯಾಂ–ಪಾಲ ಸಾರ್ತ್ರ್–ದ ಎಗ್ಸಿಸ್ಟೆನ್‌ಶಲಿಸ್ಟ ಎಥಿಕ್' – ನಾರ್ಮನ್ ಗ್ರೀನ್- ಪುಟ 44.
3. ಬೀಯಿಂಗ್ ಎಂಡ್ ನಥಿಂಗ್‌ನೆಸ್ – ಸಾರ್ತ್ರ್ : ಪುಟ 625.
4. ಬೀಯಿಂಗ್ ಎಂಡ್ ನಥಿಂಗ್‌ನೆಸ್ – ಸಾರ್ತ್ರ್ : ಪುಟ 625-6.
5. ಎಗ್ಸಿಸ್ಟೆನ್‌ಶಲಿಸಂ - ಸಾರ್ತ್ರ್ : ಪುಟ 27.
6. ಎಗ್ಸಿಸ್ಟೆನ್‌ಶಲಿಸಂ – ಸಾರ್ತ್ರ್ : ಪುಟ 30.
7. ಎಗ್ಸಿಸ್ಟೆನ್‌ಶಲಿಸಂ - ಸಾರ್ತ್ರ್ : ಪುಟ 30-1.
8. 'ಅಥೆಂಟಿಸಿಟಿ - ಎನ್ ಎಗ್ಸಿಸ್ಟೆನ್‌ಶಲಿಸ್ಟ ವರ್ಚ್ಯು' - ಮಾರ್ಗರೆಟ್ ಗ್ರೀನ್ : ಪುಟ 267.
9. 'ಜ್ಯಾಂ-ಪಾಲ ಸಾರ್ತ್ರ್-ದ ಎಗ್ಸಿಸ್ಟೆನ್‌ಶಲಿಸ್ಟ ಎಥಿಕ್ - ನಾರ್ಮನ್ ಗ್ರೀನ್ : ಪುಟ 48.
10. 'ಜ್ಯಾಂ-ಪಾಲ ಸಾರ್ತ್ರ್ - ದ ಎಗ್ಸಿಸ್ಟೆನ್‌ಶಲಿಸ್ಟ ಎಥಿಕ್ - ನಾರ್ಮನ್ ಗ್ರೀನ್ ಪುಟ 55.
11. ಬೀಯಿಂಗ್ ಎಂಡ್ ನಥಿಂಗನೆಸ್ - ಸಾರ್ತ್ರ್ : ಪುಟ 626.
12. ಎಗ್ಸಿಸ್ಟೆನ್‌ಶಲಿಸಂ - ಸಾರ್ತ್ರ್ : ಪುಟ 42.

ಅಸ್ತಿತ್ವವಾದಿ ಜ್ಞಾನ ಸಿದ್ಧಾಂತ

ಟಿಪ್ಪಣಿ :

1. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ 172.
2. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ x/vi.
3. ಲ' ಇಮ್ಯಾಜಿನೇಷ್ಯೂಂ - ಸಾರ್ತ್ರ್ : ಪುಟ 23.
4. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ 11.
5. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ 28.

6. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ 43.
7. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ 58.
8. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ iv
9. ಬೀಯಿಂಗ್ ಎಂಡ್ ನಥಿಂಗ್‌ನೆಸ್ - ಸಾರ್ತ್ರ್ : ಪುಟ lvi

ಸಾರ್ತ್ರ್–ಜೀವನ ಮತ್ತು ಕೃತಿ

ಟಿಪ್ಪಣಿ :

1. ನೋಬೆಲ್ ಪುರಸ್ಕಾರ ಸಮಿತಿಯ ಅಭಿನಂದನೆ. 1964.
2. ದ ಟ್ರ್ಯಾಜಿಕ್ ಸೆನ್ಸ ಆಫ್ ಲೈಫ್ : ಪುಟ 31.
3. 'ಸಾರ್ತ್ರ್' - ಆಲ್ಫ್ರೆಡ್ ಸ್ಟರ್ನ : ಪುಟ 7.
4. 'ದ ಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್' - ಪ್ರಸ್ತಾವನೆ ಪುಟ 36.
5. 'ದ ಫಿಲಾಸಫಿ ಆಫ್ ಜ್ಯಾಂ-ಪಾಲ ಸಾರ್ತ್ರ್' - ಪ್ರಸ್ತಾವನೆ ಪುಟ 36.
6. ಸಾರ್ತ್ರ್ ಎಂಡ್ ಸೆಲ್ಫ ಇನ್‌ಫ್ಲಿಕ್ಟೆಡ್ ವೂಂಡ್ಸ - ಯೇಲ ಫ್ರೆಂಚ್ ಸ್ಟಡೀಸ್ ನಂ : 9.
7. ದ ಪ್ರೈಮ್ ಆಫ್ ಲೈಫ್ - ಪುಟ 26-27.

ಭಾರತೀಯ ತತ್ವಶಾಸ್ತ್ರದಲ್ಲಿ ಆತ್ಮ–ಒಂದು ಅಸ್ತಿತ್ವವಾದಿ ದೃಷ್ಟಿಕೋಣ

ಟಿಪ್ಪಣಿ :

1. ಇಂಡಿಯನ್ ಫಿಲಾಸಫಿ - ವಾಲ್ಯೂಮ್ 1 : ಡಾ: ರಾಧಾಕೃಷ್ಣನ್ : ಪುಟ 157.
2. ಲೆಕ್ಚರ್ಸ ಆನ್ ಮೆಟಾಫಿಸಿಕ್ಸ - ವಾಲ್ಯೂಮ್ 1 : ಪುಟ 191.
3. ಛಾಂದೋಗ್ಯ ಉಪನಿಷತ್-8-8-3.
4. ಹೇಜೆಲ್ ಬಾರ್ನ, 'ಬೀಯಿಂಗ್ ಎಂಡ್ ನಥಿಂಗನೆಸ್' ಗ್ರಂಥದ ಇಂಗ್ಲಿಷ್ ಅನುವಾದದ ಪ್ರಸ್ತಾವನೆಯಲ್ಲಿ.
5. 'ಬೀಯಿಂಗ್ ಎಂಡ್ ನಥಿಂಗ್‌ನೆಸ್' - ಸಾರ್ತ್ರ್ :
6. ಇಂಡಿಯನ್ ಫಿಲಾಸಫಿ - ವಾಲ್ಯೂಮ್ 1, : ಪುಟ 152.
7. ಎಕ್ಲೋಸೀಡಸ್ - 3-14.
8. ಇಂಡಿಯನ್ ಫಿಲಾಸಫಿ - ವಾಲ್ಯೂಮ್ 2. : ಪುಟ 485.

ಪಾರಿಭಾಷಿಕ ಶಬ್ದಗಳು : (ಲೇಖನಗಳಲ್ಲಿ ಬರುವ ಅನುಕ್ರಮದಲ್ಲಿ)

ಅಧ್ಯಾತ್ಮ ಮೂಲ ತತ್ವಶಾಸ್ತ್ರ : metaphysics.
ವಿಚಾರವಾದ : rationalism.
ಅಸ್ತಿತ್ವ ; being, existence.
ಆಲೋಚನೆ : thought.
ಇಂದ್ರಿಯ ಜ್ಞಾನ : sensation.
ಗ್ರಹಿಕೆ : perception.
'ತನ್ನಲ್ಲಿ ತಾನಿರುವ ವಸ್ತು' : thing-in-itself.
ದೃಷ್ಟಿಗೋಚರ ವಾದ : phenomenology.
ತಾರ್ಕಿಕ ಲೋಕ ಸಿದ್ಧಾಂತ ವಾದ : logical positivism.
ಮೂಲತತ್ವ ಶಾಸ್ತ್ರ : ontology.
ಪ್ರಜ್ಞೆ : cogito, consciousness.
ಭೌತವಾದ : materialism.
ನಿಯತಿವಾದ : determinism.
ಸಂಕಟ : anguish.
ಪ್ರಾಮಾಣಿಕ : authentic.
ಅಪ್ರಾಮಾಣಿಕ : inauthentic.
ತನ್ನಲ್ಲಿ ಇರುವ ತಾನು – ತನ್ನಲ್ಲಿ ತಾನಿರುವ ಪ್ರಜ್ಞೆ : being-in-itself.
ತನಗಾಗಿ ಇರುವ ತಾನು – ತನಗಾಗಿ ತಾನಿರುವ ಪ್ರಜ್ಞೆ : being-for-itself.
ಭಯ : dread.
ಹತಾಶ : despair.
ಏಕಾಕಿತನ : forlornness.
ನಂಬಿಕೆ : faith.
ಫಲಪ್ರಮಾಣವಾದ : pragmatism.
ವರ್ತನಾ ಮಾದರಿ : behaviour patterns.
ಅಂತಿಮತಾವಾದ : principle of finality.

ಸಹಯೋಗವಾದ : doctrine of collaboration.
ಪರಸ್ಪರ ವಿಷಯಗತತೆ : inter-subjectivity.
ಕ್ಷಣಭಂಗುರ : ephemeral.
ಅಲೌಕಿಕ : transcendental.
ಅಂತರ್ಬೋಧೆ : intuition.
ತೋರಿಕೆ : appearance.
ಆಕಸ್ಮಿಕ ಘಟನೆ : contingency.
ಸಂವೇದನಾ ಶೀಲತೆ : sentientness.
ಅನುಗಮನ : inductive.
ಅನುಮಾನ : deductive.

ಗ್ರಂಥ ಋಣ

1. ಬೀಯಿಂಗ್ ಎಂಡ್ ನಥಿಂಗ್‌ನೆಸ್-ಎನ್ ಎಸ್ಸೆ ಆನ್ ಫಿನಾಮಿನಾಲಜಿಕಲ್ ಆಂಟಾಲಜಿ: ಜ್ಯಾಂ - ಪಾಲ ಸಾರ್ತ್ರ್ : ಅನುವಾದ : ಹೆಜೆಲ್ ಇ. ಬಾರ್ನ. ಫಿಲಾಸಫಿಕಲ್ ಲೈಬ್ರರಿ. ನ್ಯೂಯಾರ್ಕ್, 1956.

2. ಛಾಂದೋಗ್ಯ ಉಪನಿಷತ್

3. ಎಗ್ಸಿಸ್ಟೆನ್‌ಶಲಿಸಂ: ಜ್ಯಾಂ-ಪಾಲ ಸಾರ್ತ್ರ್: ಅನುವಾದ : ಬರ್ನಾರ್ಡ ಫ್ರೆಂಚ್‌ಮನ್. ಫಿಲಾಸಫಿಕಲ್ ಲೈಬ್ರರಿ. ನ್ಯೂಯಾರ್ಕ್, 1947.

4. ಹ್ಯೂಮನ್ಸ ಬೀಯಿಂಗ್ : ದ ವರ್ಲ್ಡ್ ಆಫ್ ಜ್ಯಾಂ - ಪಾಲ ಸಾರ್ತ್ರ್. ಜೋಸೆಫ್ ಎಚ್. ಮ್ಯಾಕ್ ಮಹೋನ್: ದ ಯೂನಿವರ್ಸಿಟಿ ಆಫ್ ಚಿಕ್ಯಾಗೊ ಪ್ರೆಸ್ 1971.

5. ಇಂಡಿಯನ್ ಫಿಲಾಸಫಿ : ಭಾಗ - 1 ; ಡಾ॥ ಎಸ್. ರಾಧಾಕೃಷ್ಣನ್, ಜಾರ್ಜ ಅಲನ್ ಎಂಡ್ ಅನ್‌ವಿನ್ ಲಿ. 1962.

6. ಜ್ಯಾಂ - ಪಾಲ ಸಾರ್ತ್ರ್ : ಫಿಲಾಸಫರ್ ವಿಥೌಟ್ ಫೇಥ್ : ರೆಂ ಮೆರಿಲ್ ಆಲ್ಬರ್ : ದ ಮೆರ್ಲಿನ್ ಪ್ರೆಸ್ : ಲಂಡನ್, 1964.

7. ಜ್ಯಾಂ - ಪಾಲ ಸಾರ್ತ್ರ್ : ದ ಎಗ್ಸಿಸ್ಟೆನ್‌ಶಲಿಸ್ಟ ಎಥಿಕ್ : ನಾರ್ಮನ್ ಗ್ರೀನ್.

8. ನಾಸಿಯ : ಜ್ಯಾಂ - ಪಾಲ ಸಾರ್ತ್ರ್ : ಅನುವಾದ ರಾಬರ್ಟ ಬಾಲ್ಡಿಕ್ : ಪೆಂಗ್ವಿನ್ ಬುಕ್ಸ : 1965.

9. ಸಾರ್ತ್ರ್ : ಎ ಕಲೆಕ್ಷನ್ ಆಫ್ ಕ್ರಿಟಿಕಲ್ ಎಸ್ಸೇಸ್ : ಸಂಪಾದಕಿ : ಎಡಿತ್ ಕರ್ನ. ಪ್ರೆಂಟಿಸ್ ಹಾಲ್, 1963.

10. ಸಾರ್ತ್ರ್ : ಹಿಜ್ ಫಿಲಾಸಫಿ ಎಂಡ್ ಎಗ್ಸಿಸ್ಟೆನ್‌ಶಲಿಸ್ಟ ಸೈಕೋಎನಲಿಸಿಸ್ : ಆಲ್ಫ್ರೆಡ್ ಸ್ಟರ್ನ : ವಿಜನ್ ಪ್ರೆಸ್ ಲಿ. 1968.

11. ದ ಎಗ್ಸಿಸ್ಟೆನ್‌ಶಲಿಸ್ಟ ಔಟ್‌ಲುಕ್ : ಮಾರ್ಗಾರೆಟ್ ಚಟರ್ಜಿ : ಒರಿಯಂಟ್ ಲಾಂಗ್‌ಮನ್ಸ: 1973.

12. ದ ಫ್ಲೈಸ್ : ಜ್ಯಾಂ - ಪಾಲ ಸಾರ್ತ್ರ : ಅನುವಾದ : ಸ್ಟ್ಯುಯರ್ಟ ಗಿಲ್ಬರ್ಟ: ಪೆಂಗ್ವಿನ್ ಬುಕ್ಸ.

13. ದ ಫಿಲಾಸಫಿ ಆಫ್ ಜ್ಯಾಂ - ಪಾಲ ಸಾರ್ತ್ರ; ಸಂಪಾದಕ : ರಾಬರ್ಟ ಡಿ. ಕುಮ್ಮಿಂಗ. ಮ್ಯಾಥ್ಯೂ ಎಂಡ್ ಕಂಪನಿ ಲಿ. 1968

14. ದ ಪ್ರಾಬ್ಲೆಮ್ ಆಫ್ ಮೆಥಡ್ : ಜ್ಯಾಂ - ಪಾಲ ಸಾರ್ತ್ರ : ಅನುವಾದ ಹೇಜೆಲ್ ಇ. ಬಾರ್ನ : ಮ್ಯಾಥ್ಯೂ ಎಂಡ್ ಕಂ. ಲಿ.

15. ದ ರಿಪ್ರೈವ್ : ಜ್ಯಾಂ - ಪಾಲ ಸಾರ್ತ್ರ : ಅನುವಾದ ಎರಿಕ್ ಸಟ್ಟನ್. ಪೆಂಗ್ವಿನ್ ಬುಕ್ಸ. 1968.

2585+1

ಇತ್ತೀಚಿನ ನಮ್ಮ ಕೆಲವು ಪ್ರಕಟಣೆಗಳು

ಸಾಹಿತ್ಯ ವಾರ್ಷಿಕ 1976	ಸಂ : ಡಾ॥ ಜಿ. ಎಸ್. ಶಿವರುದ್ರಪ್ಪ
ಮಹಿಳೆ ಮತ್ತು ಕನ್ನಡ ಸಾಹಿತ್ಯ	ಸಂ : ಡಾ॥ ಜಿ. ಎಸ್. ಶಿವರುದ್ರಪ್ಪ
ಮುಕರಿ ಮತ್ತು ಹೊಲೆಯರ ಪದಗಳು	ಸಂ : ಎಲ್. ಆರ್. ಹೆಗಡೆ
ಓರುಗಲ್ಲು ಸೂರೆ	ಸಂ : ಮ. ಮಲ್ಲಪ್ಪ